
# ಕೊಡಗು ಸಂಗಾತಿ

ಏಪ್ರಿಲ್ 1 ರಿಂದ 15, 2001 | ಪಾಕ್ಷಿಕ ಪತ್ರಿಕೆ | (ಸುಗ್ಗಿ 18-ಪಗ್ಗು 2)

ನಂ. ೩೫, ಸವಿತಾ ನಿಲಯ, ೧ನೇ ಕ್ರಾಸ್, ೪ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - ೫೭೦ ೦೧೨

ಸಂಪಾದಕಿ : ಪಟ್ಟಡ ಶೀಲಾಮಣಿ    Registered : 10-01-96 TCI Kar. 09592    ಕನ್ನಡ ಮತ್ತು ಅರೆಭಾಷೆಯಲ್ಲಿ ಪ್ರಕಟಿತ

Reg. No. KA/SK/MYS-88    ಸಂಪುಟ : 5    ಸಂಚಿಕೆ : 7    ಪುಟಗಳು : 24    ಬೆಲೆ ರೂ. : 6-00



1ನೇ 2ನೇ 3ನೇ 4ನೇ 5ನೇ

**5ನೇ**

ವರ್ಷಕ್ಕೆ ಪಾದಾರ್ಪಣೆ

ಜನಾಂಗ ಸಂಘಟನೆಯ ಶಿಲ್ಪಿ ವಿಶಾಲ ತಳಹದಿಯ ಹಿತಚಿಂತಕ
ಶ್ರೀ ದಂಬೆಕೋಡಿ ಬೋಪಣ್ಣ ಸುಬ್ರಾಯ.

## ಐದನೇ ವರ್ಷಕ್ಕೆ ಕಾಲಿಕ್ಕುವ ಈ ಶುಭ ಮುಹೂರ್ತದಲ್ಲಿ ಕೊಡಗು ಸಂಗಾತಿಯ ಲಾಟರಿ ಡ್ರಾ ದಿನಾಂಕ 8-4-2001ಕ್ಕೆ ಮೈಸೂರಿನ ಸಂಗಾತಿ ಕಛೇರಿಯಲ್ಲಿ

ನಮ್ಮ ಹಿತೈಷಿ ಚಂದದಾರರೇ, ಈ ಹಿಂದೆ ನಾವು ಸಂಗಾತಿಯ ಚಂದದಾರರಿಗೆ ಲಾಟರಿ ಯೋಜನೆಯನ್ನು ಹಮ್ಮಿಕೊಂಡಿದ್ದೇವು. ಅದರಂತೆ ಮೈಸೂರಿನ ಹಿನ್‌ಕಲ್ಲಿನಲ್ಲಿರುವ ಸಂಗಾತಿ ಕಛೇರಿಯಲ್ಲಿ ಸಮಾಜದ ಗಣ್ಯ ವ್ಯಕ್ತಿಗಳ ಹಸ್ತದಿಂದ ಲಾಟರಿಯನ್ನು ಎತ್ತಲಾಗುವುದು. ಸದ್ರಿ ಫಲಿತಾಂಶವನ್ನು ಸಂಚಿಕೆ 8ರಲ್ಲಿ (16-4-2001 ರಿಂದ 30-4-2001) ಪ್ರಸಾರ ಮಾಡಲಾಗುವುದು. ಬಹುಮಾನ ವಿಜೇತರು ನಮ್ಮ ಕಛೇರಿ ಅಥವಾ ಮಡಿಕೇರಿಯಲ್ಲಿರುವ ನಮ್ಮ ಶಾಖೆ ಬೈತಡ್ಕ ಜಾನಕಿಯವರ ನಿವಾಸ 28047ದಿಂದ ದಿನಾಂಕ 10-4-2001ರ ನಂತರ ಪಡೆದುಕೊಳ್ಳುವಂತೆ ವಿನಂತಿ.

ಮಾನ್ಯ ಚಂದದಾರರಿಗೆಲ್ಲಾ ರಾಮನವಮಿಯ ಶುಭ ಕಾಮನೆಗಳು.

- ಸಂಪಾದಕಿ

---

## "ಪುಣ್ಯ" ವಧು / ವರರ ಅನ್ವೇಷಣೆ ಕೇಂದ್ರ, ಸುಂಟಿಕೊಪ್ಪ

ಆತ್ಮೀಯರೇ,

ನಿಮ್ಮಲ್ಲಿ ಯಾರಾದರೂ ವಧು/ವರರ ಅನ್ವೇಷಣೆಯಲ್ಲಿ ಇದ್ದರೆ ಯಾವುದೇ ಸಂಕೋಚವಿಲ್ಲದೆ ಅವರ ಇತ್ತೀಚೆಗಿನ ಭಾವಚಿತ್ರದೊಂದಿಗೆ ಕೂಡಲೇ ಸಂಪರ್ಕಿಸಿ. ಈಗಾಗಲೇ ಅನೇಕ ಬಾಂಧವರು ಇದರ ಸದುಪಯೋಗವನ್ನು ಪಡೆಯುತ್ತಿರುವರು. ಅದರಲ್ಲಿ ನೀವೂ ಕೂಡ ಒಬ್ಬರಾಗಿ. ಇಂದೇ ಸಂಪರ್ಕಿಸಿ.

ಶ್ರೀಮತಿ ಕಡ್ಯದ ರತಿ ಅರುಣ್‌ಕುಮಾರ್, "ಪುಣ್ಯ" ವಧುವರರ ಅನ್ವೇಷಣೆ ಕೇಂದ್ರ
ಮತ್ತು ರಿಯಲ್ ಎಸ್ಟೇಟ್, ಎನ್.ಸಿ.ಜಿ. ಕಾಂಪ್ಲೆಕ್ಸ್, ಅಯ್ಯಪ್ಪ ದೇವಸ್ಥಾನ ಹತ್ತಿರ, ಬಿ. ಎಂ. ರಸ್ತೆ, ಸುಂಟಿಕೊಪ್ಪ,
ದೂರವಾಣಿ : 95, 08276 / 62252

---

ತೇನನ ರಾಜೇಶ್ ಸೋಮಣ್ಣ



## ವಿದೇಶ ಪ್ರಯಾಣ ಶುಭಹಾರೈಕೆ

ASIAN CONFERENCE OF E. MERCK (INDIA) LTD. ಇವರ ವತಿಯಿಂದ ಥೈಯಿಲ್ಯಾಂಡ್‌ನ (Bangakok/Pukhet) ಇಲ್ಲಿ 17-3-2001 ರಿಂದ 22-3-2001ರ ತನಕ ಭಾಗವಹಿಸಿ ತಾಯ್ನಾಡಿಗೆ ಮರಳಿದ ನಿನಗೆ ನಮ್ಮ ಶುಭ ಹಾರೈಕೆಗಳು.

ನಿನ್ನ ಮಾತಾಪಿತೃಗಳಾದ
ಶ್ರೀ ತೇನನ ಸೋಮಣ್ಣ ಮತ್ತು
ಶ್ರೀಮತಿ ತೇನನ ಲಲಿತ ಸೋಮಣ್ಣ
ಮಡಿಕೇರಿ. ☎ : 22686

---

## ಗೆ ಶುಭಾಶಯಗಳು

ಕೊಡಗು ಸಂಗಾತಿ ಉದಯವಾಗಿ ತನ್ನ 5ನೇ ವರ್ಷಕ್ಕೆ ಪಾದಾರ್ಪಣೆ ಮಾಡುವ ಈ ಸಂದರ್ಭದಲ್ಲಿ ನಮ್ಮ ಶುಭ ಹಾರೈಕೆಗಳು. ಹಾಗೆಯೇ ಎತ್ತಲೊ ಕಗ್ಗತ್ತಿನಲ್ಲಿದ್ದ ನಮ್ಮ ಜನಾಂಗಕ್ಕೆ ದಿವ್ಯ ಜ್ಯೋತಿಯಾಗಿ ಬಂದು ಪತ್ರಿಕಾ ಮಾಧ್ಯಮದ ಮೂಲಕ ಜನಾಂದೋಲನ, ಸಂಘಟನೆ, ಐಕ್ಯತೆ, ತನ್ನತನ, ಸ್ವಂತಿಕೆ ಎಲ್ಲವನ್ನು ಮೈಗೂಡಿಸಿ ಮುಂದುವರಿಯುತ್ತಿರುವುದು ನಮಗೆಲ್ಲರಿಗೂ ನಿಜವಾಗಲೂ ಹೆಮ್ಮೆಯ ವಿಚಾರ. ತಮಗೂ ಮತ್ತು ತಮ್ಮ ಬಳಗಕ್ಕೂ ಶ್ರೀ ಕುಲಗುರು ವೆಂಕಟರಮಣ ಮತ್ತು ಶೃಂಗೇರಿ ತಾಯಿಯ ಆಶೀರ್ವಾದ ಸದಾ ಇರಲೆಂಬುದಾಗಿ ಆಶಿಸುವ.

ಯಿಂದ : ಬೈತಡ್ಕ ಬೆಳ್ಯಪ್ಪ ಮತ್ತು ಜಾನಕಿ ಬೆಳ್ಯಪ್ಪ
ಬೈತಡ್ಕ ನಂಜಪ್ಪ ಮತ್ತು ಪ್ರಿಸಿಲ್ಲಾ ನಂಜಪ್ಪ
ಹಾಗೂ ಬೈತಡ್ಕ ದಿನೇಶ್ ಬೆಳ್ಯಪ್ಪ
ಮಡಿಕೇರಿ, ದೂರವಾಣಿ : 28047

**2001, ಏಪ್ರಿಲ್ 1 ರಿಂದ 15 ರ ತನಕ**

ಒಳನೋಟ

| ಕನ್ನಡ ವಿಭಾಗ | ಲೇಖಕರು | ಪುಟಗಳು |
|---|---|---|
| ಬೇಸಿಗೆಯಲ್ಲಿ ನೀರಿನ ಕೊರತೆ | - ಸಂಪಾದಕೀಯ | 02 |
| ಕೊಡಗಿನ ಕುವರಿ ಗುಡ್ಡಾಂಡ ಪದ್ಮಜ ನವರಿಗೆ "2000"ದ ಸಾಲಿನ ಬಳ್ಳಾರಿ ಜಿಲ್ಲೆಯ ಜಿಲ್ಲಾಮಟ್ಟದ ಶಿಕ್ಷಕಿ ಪ್ರಶಸ್ತಿ | - ಪಟ್ಟಡ ರೀನಾ ಉಲ್ಲಾಸ. | 02 |
| ಕೊಡಗಿನ ಗೌಡ ಸಂಘಟನೆಯ ಶಿಲ್ಪಿ, ವಿಶಾಲ ತಳಹದಿಯ ಚಿಂತಕ ದಂಬೆಕೋಡಿ ಬೋಪಣ್ಣ ಸುಬ್ರಾಯ | - ಪಟ್ಟಡ ಶಿವಕುಮಾರ್ | 03 |
| KODAGU EDUCATIONAL ACADEMY (REGD.) BANGALORE | - ಡಾ|| ಜಿ. ಪಿ. ಚಿನ್ನಯ್ಯ | 04 |
| ಸುಂಟಿಕೊಪ್ಪ ನಗರದ ಯುವ ನಾಯಕನಾಗಿ ಜಿಲ್ಲಾ ಮಟ್ಟದಲ್ಲಿ ಬೆಳೆಯುತ್ತಿರುವ ಶ್ರೀ ಪಟ್ಟೆಮನೆ ಕೃಷ್ಣಪ್ಪ ಶೇಷಪ್ಪ. | - ಪಟ್ಟಡ ಪ್ರಭಾಕರ | 05 |
| 1837 ರ ಅಮರ ಸುಳ್ಯ ಕ್ರಾಂತಿಯ ನೆನಪಿನರಿಯುಗಾಗಿ ಪತ್ರಿಕಾ ವರದಿ ಮಂಗಳೂರು - ಟುಡೇ, ಮೇ 1998ರ ವರದಿಯ ಭಾಷಾಂತರ ಲೇಖನ | - ಪ್ರೋ. ಪೂಜಾರಿ ಮೋಣಪ್ಪ | 06 |
| "ಕಾಶಿ"ಖ್ಯಾತಿಯ "ಮದೆ ಮಾದೂರಪ್ಪ" ದೇವಾಲಯ ಶ್ರದ್ಧೆ, ಸಂಭ್ರಮಗಳ ಉಮಾಮಹೇಶ್ವರ ಜಾತ್ರೋತ್ಸವ | - ಪಟ್ಟಡ ಶಿವಕುಮಾರ್ | 09 |
| ಕೆಟ್ಟ ಸಂಪ್ರದಾಯ ತೊಲಗಬೇಕು. | - ಪಟ್ಟಡ ಪ್ರಭಾಕರ | 11 |
| ತುಳುನಾಡ ಗೌಡರು | - ಪಿ. ಯಂ. ಆನಂದ ಗೌಡ | 12 |
| ಕವನ : ಬಾರೆ ಗೆಳತಿ | - ಕುಯಿಂತೋಡು ದಾಮೋದರ | 13 |
| ಅರೆಭಾಷೆಯ ಸರಳ ವಾಕ್ಯಗಳು | - ಪಟ್ಟಡ ರೀನಾ ಉಲ್ಲಾಸ | 14 |
| ಕವನ : ವಿದ್ಯಾರ್ಥಿ ಜೀವನ | - ಅಣ್ಣೆಚೀರಾ ಭಾರತಿ, | 14 |
| **ಅರೆಭಾಷಿಕ ವಿಭಾಗ** | | |
| ವಾಂಟೆಡ್ ಮಿಸ್ಟರ್ ರಾಜು - ಧಾರಾವಾಹಿ - 30 | - ಶಂಕರನ ಬಸಪ್ಪ | 15 |
| ಜೇನು ಬೇಟೆ (ಸತ್ಯ ಕತೆ) | - ಆಜಡ್ಕ ರಾಣಿ ಬಾಲಕೃಷ್ಣ, | 17 |
| ಕವನ : ಪಲಾಯನ | - ಬಾರಿಕೆ ಕನು | 17 |
| ಪತ್ರವಿಭಾಗ | - ಸಂಗಾತಿ ವರದಿ | 18 |
| ಅಭಿಪ್ರಾಯ ಒಂದೊಂದು ತರ - 7 | - ಪಟ್ಟಡ ಪ್ರಭಾಕರ | 20 |

| | |
|---|---|
| ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ | **ಕೊಡಗು ಸಂಗಾತಿ**, 35,"ಸವಿತಾ ನಿಲಯ", 1ನೇ ಕ್ರಾಸ್, 4ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - 12. ಫೋನ್ : **95821/516771** |
| ಮಡಿಕೇರಿಯಲ್ಲಿ ಸಂಗಾತಿ ಕಛೇರಿ | ಬೈತಡ್ಕ ಜಾನಕಿ ಬೆಳ್ಯಪ್ಪ,,ನಂ. 21-16 ಎಲ್. ಐ. ಸಿ. ಹತ್ತಿರ, ರೇಸ್ ಕೋರ್ಸ್ ರಸ್ತೆ, ಮಡಿಕೇರಿ, ಫೋನ್ : **08272/28047** |
| ಚಿಹ್ನೆ, ಹಸೆಮಣೆ/ಶುಭಾಶಯ ಕಾರ್ಡ್ಸ್ ಕ್ಯಾಸೆಟ್/ಕೀ ಚೈನ್ ಲಭ್ಯ | ಕುಂಭಗೌಡನ ಪ್ರವೀಣ್‌ಕುಮಾರ್, ವೆಜಿಟೆಬಲ್ ಶಾಪ್, ಪಾಂಡನ ಕಾಂಪೌಂಡ್, ಅಪ್ಪಯ್ಯಗೌಡ ರಸ್ತೆ, ಮಡಿಕೇರಿ, |
| ಕುಶಾಲ ನಗರ | ಕುಂಭಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೇಜ್, ಮುಖ್ಯ ರಸ್ತೆ, ಕುಶಾಲನಗರ - 571 234 ಫೋನ್ : 08276/73370 |
| ಬೆಂಗಳೂರು ಮಹಾನಗರ | ಕಲ್ಲುಮುಟ್ಲು ಬಸಪ್ಪ, ನಂ. 37, 3ನೇ ಮೇನ್, ನಂಜಪ್ಪ ಬ್ಲಾಕ್, ಕೆಂಪೇಗೌಡ ನಗರ, ಬೆಂಗಳೂರು -19,ಫೋನ್ : 080/6500946 |

ಚಂದಾ ವಿವರ : ಜೀವಾವಧಿ ಸದಸ್ಯತನ - **2000** ರೂ., ಬಿಡಿ ಪ್ರತಿ - **6** ರೂ., ಅರ್ಧ ವಾರ್ಷಿಕ **-75** ರೂ., ವಾರ್ಷಿಕ ಚಂದಾ - **150** ರೂ. (ಅಂಚೆ ವೆಚ್ಚ ಸೇರಿ), ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.

# ಸಂಪಾದಕೀಯ : ಬೇಸಿಗೆಯಲ್ಲಿ ನೀರಿನ ಕೊರತೆ

ವಿಶ್ವ ಬ್ಯಾಂಕ್‌ನವರು ಅಭಿಪ್ರಾಯ ಪಟ್ಟಂತೆ ನೀರಿನ ಉಪಯೋಗವನ್ನು ಭಾರತದಲ್ಲಿಯೆ ಸುವ್ಯವಸ್ಥಿತ ರೀತಿಯಲ್ಲಿ ಬಳಸುವ ಏರ್ಪಾಡುಗಳು ಇಲ್ಲದಿರುವುದರಿಂದ ಭಾರತದಲ್ಲಿ ಜನರು ನೀರಿಗಾಗಿ ಬವಣೆ ಪಡುತ್ತಿರುವುದಕ್ಕೆ ಮುಖ್ಯ ಕಾರಣವಾಗಿದೆ.

ನೀರು ಪ್ರತಿಯೊಂದು ಪ್ರಾಣಿ ಪಕ್ಷಿಗಳಿಗೂ, ಮಾನವ ಕುಲಕ್ಕೂ, ಗಿಡ ಮರಗಳಿಗೂ, ಪ್ರಪಂಚದಲ್ಲಿರುವ ಪ್ರತಿಯೊಂದು ವಸ್ತುವಿಗೂ ಬದುಕಲು ಬೇಕಾದ ಅತ್ಯವಶ್ಯಕವಾದ ವಸ್ತು ಇದಾಗಿದೆ. ಭೂ ವಿಜ್ಞಾನಿಗಳು, ರಾಜಕೀಯ ಧುರೀಣರು ಈ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ತಮ್ಮ ಆತ್ಮ ಸಾಕ್ಷಿಯಾಗಿ ಪ್ರಯತ್ನಿಸಿದರೆ ಈಗಿನ ಈ ವೈಜ್ಞಾನಿಕ ಯುಗದಲ್ಲಿ ಸಾಧ್ಯವಾಗದಂತಹ ಕೆಲಸವೇನು ಅಲ್ಲ. ಎತ್ತರದ ಹಿಮಾಲಯದಲ್ಲಿ ಮಂಜುಗೆಡ್ಡೆ ಕರಗಿ ನೀರಾಗಿ ಸಮುದ್ರಕ್ಕೆ ನದಿಗಳ ಮೂಲಕ ಸೇರುತ್ತದೆ. ಮಳೆಗಾಲದಲ್ಲಿ ಅತಿವೃಷ್ಟಿಯಿಂದ ಬಂದ ನೀರನ್ನು ಶೇಖರಿಸದೆ ವೃಥಾ ಪೋಲಾಗುತ್ತಿದೆ. ಅನಾವೃಷ್ಟಿಯಲ್ಲಿ ನೀರಿಲ್ಲದೆ ಕೊರಗುತ್ತೇವೆ. ಇವೆಲ್ಲ ನೀರನ್ನು ಅವಶ್ಯಕವಾಗಿ ಶೇಖರಿಸದೆ ಇರುವ ಸಂದರ್ಭದಲ್ಲಿ ನಮ್ಮ ನೀರಿನ ಬಳಕೆ ವಿಷಯದಲ್ಲಿ ಬೊಟ್ಟು ಮಾಡಿ ತೋರಿಸುವ ಪರಿಸ್ಥಿತಿ ನಮ್ಮ ವಿಜ್ಞಾನಿಗಳಾಗಲಿ ರಾಜಕೀಯ ಧುರೀಣರಾಗಲಿ ಈ ವಿಷಯದಲ್ಲಿ ತಮ್ಮ ಗಮನ ಹರಿಸದೇ ಚಿಂತನಶೀಲರಾಗದೆ ಇದ್ದು, ಪ್ರತಿ ವರ್ಷ ನೀರಿನ ತೊಂದರೆಯಿಂದ ಜನ ಸಾಯುತ್ತಿರುವುದು ನಾಗರೀಕತೆಯ ಪರಕಾಷ್ಟೆಗೇರಿರುವ ಈ ಕಾಲದಲ್ಲಿ ನೀರಿಗಾಗಿ ಪರದಾಡುವುದು ನಿಜವಾಗಲೂ ಶೋಚನೀಯ ಸಂಗತಿಯಾಗಿದೆಯೆಂದು ಸಂಗಾತಿಯ ಅಭಿಪ್ರಾಯವಾಗಿದೆ.

ಗಂಗಾ ಕಾವೇರಿ ಯೋಜನೆಯನ್ನು ಆದಷ್ಟು ಬೇಗ ಬಳಕೆಗೆ ತಂದರೆ ಹಿಂದೂಸ್ಥಾನವು ಸುಖ ಸಂಪತ್ತು ಸಮೃದ್ಧಿಯಾಗುವುದರಲ್ಲಿ ಎರಡು ಮಾತಿಲ್ಲ. ಅದಿಲ್ಲದೆ ಅವಧಿಗೆ ಮೊದಲೆ ಸರ್ಕಾರವನ್ನು ಬೀಳಿಸುವ ಯೋಜನೆಯಲ್ಲಿರುವ ಜನರಿಂದ ಏನನ್ನು ತಾನೆ ನಿರೀಕ್ಷಿಸಲು ಸಾಧ್ಯ. ಸರ್ಕಾರದಲ್ಲಿ ಹಣವಿಲ್ಲದಿದ್ದರು ಜನ ಪ್ರವಾಹದಿಂದಲೂ ಸಾಮೂಹಿಕ ಶ್ರಮದಾನದಿಂದಲೂ ಈ ಕೆಲಸವನ್ನು ಮಾಡಲು ಸಾಧ್ಯವಿದೆ. ಅತೀ ಪುರಾತನ ಕಾಲದಿಂದಲೂ ದುರಸ್ತಿಯನ್ನು ಕಾಣದೆ ಇರುವ ಕೆರೆಕುಂಟೆಗಳ ಹೂಳೆತ್ತುವ ಕೆಲಸವಾಗಬೇಕಿದೆ. ಕೆರೆಗಳ ಆಳವನ್ನು ಹೆಚ್ಚಿಸಿ ಹೆಚ್ಚು ನೀರು ಶೇಖರವಾಗುವಂತೆ ಪ್ರಯತ್ನಿಸಬೇಕು.

---

# ಕೊಡಗಿನ ಕುವರಿ ಗುಡ್ಡಾಂಡ ಪದ್ಮಜ ನವರಿಗೆ "2000"ದ ಸಾಲಿನ ಬಳ್ಳಾರಿ ಜಿಲ್ಲೆಯ ಜಿಲ್ಲಾಮಟ್ಟದ ಶಿಕ್ಷಕಿ ಪ್ರಶಸ್ತಿ



ಮನುಷ್ಯನ ಜನ್ಮ ಒಂದೆಡೆಯಾದರೆ, ಬದುಕು ಇನ್ನೊಂದೆಡೆ, ಜೀವನ ಮತ್ತೊಂದೆಡೆ, ಹಾಗೆಯೇ ನಿಜವೆನಿಸಿದೆ. ಶ್ರೀಮತಿ ಗುಡ್ಡಾಂಡ ಪದ್ಮಜರ ವಿಷಯದಲ್ಲಿ. ಹುಟ್ಟಿದ್ದು ಕೊಡಗಿನಲ್ಲಿ ಆದರೆ ಗೌರವಿಸಲ್ಪಟ್ಟಿದ್ದು ಬಳ್ಳಾರಿಯಲ್ಲಿ. ಪ್ರತಿವರ್ಷ ನೀಡಲ್ಪಡುವ ಪ್ರಶಸ್ತಿಯಂತೆ ಕಳೆದ ಸಾಲಿನ "2000" ಇಸವಿಯ ಬಳ್ಳಾರಿ ಜಿಲ್ಲೆಯ ಜಿಲ್ಲಾ ಶಿಕ್ಷಕ ಪ್ರಶಸ್ತಿಯನ್ನು ತನ್ನ ಮಡಿಲಿಗೆ ಹಾಕಿಕೊಂಡಿರುತ್ತಾರೆ. ಪ್ರಶಸ್ತಿಯಲ್ಲದೆ ನಗದು ಬಹುಮಾನ ರೂ 2000/- ಜೊತೆಗೆ ಫಲಪುಷ್ಪ ತಾಂಬೂಲ ಗಳಿಂದ ಶಾಲು ಹೊದಿಸಿ ಸನ್ಮಾನ ಸ್ವೀಕರಿಸಿದ್ದಾರೆ. ಪ್ರಶಸ್ತಿ ಪಡೆದ 13 ಮುಖ್ಯ ಶಿಕ್ಷಕರ ಪೈಕಿ ಇವರು ಒಬ್ಬರು ಮಾತ್ರ ಸಹ ಶಿಕ್ಷಕಿಯಾಗಿದ್ದಾರೆ.

ಶ್ರೀಮತಿ ಪದ್ಮಜಳು ತನ್ನ T.C.H. ಟ್ರೈನಿಂಗ್‌ನ್ನು 1981-83ರಲ್ಲಿ ಸರ್ಕಾರಿ ಶಿಕ್ಷಕರ ತರಬೇತು ಸಂಸ್ಥೆ ಕೂಡಿಗೆಯಲ್ಲಿ ಮುಗಿಸಿ ನಂತರ 1989ರಲ್ಲಿ ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕು ನರಸಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಹ ಶಿಕ್ಷಕಿಯಾಗಿ ಸೇರ್ಪಡೆಯಾದರು. ಪದ್ಮಜರವರು ವೀರಾಜಪೇಟೆ ತಾಲೂಕಿನ ಹೊಸೂರು ಗ್ರಾಮದ ತಡಿಯಪ್ಪನ ಉತ್ತಯ್ಯನವರ ಮಗಳಾಗಿದ್ದಾರೆ.

ಪದ್ಮಜನವರ ಪತಿ ಗುಡ್ಡಾಂಡ ಯು. ಸೋಮಣ್ಣನವರು N.M.D.C ದೋಣಿಮಲ್ಯೆಯಲ್ಲಿ ಕೇಂದ್ರ ಸರಕಾರದ ಕಬ್ಬಿಣ ಅದಿರು ಸಂಸ್ಥೆಯಲ್ಲಿ ಉದ್ಯೋಗಿಯಾಗಿರುವರು. ಪದ್ಮಜನವರು ಇನ್ನು ಹೆಚ್ಚಿನ ಮೇಲ್ಮಟ್ಟಕ್ಕೇರಲಿ ಎಂಬುದೆ ಸಂಗಾತಿಯ ಆಕಾಂಕ್ಷೆಯಾಗಿದೆ.

— ಬರಹ : ಪಟ್ಟಡ ರೀನಾ ಉಲ್ಲಾಸ.

---

ಸಬ್ಬಮ್ಮ ಸುಬ್ಬಮ್ಮ ದೇವತೆಗಳೇ ಕಾಳಿ ಮತ್ತು ದುರ್ಗಿಯಾಗಿ ಶೃಂಗೇರಿಯಲ್ಲಿ ಇಂದಿಗೂ ಗೌಡರಿಂದ ಪೂಜಿಸಲ್ಪಡುತ್ತಿರುವರು.

# ಕೊಡಗಿನ ಗೌಡ ಸಂಘಟನೆಯ ಶಿಲ್ಪಿ, ವಿಶಾಲ ತಳಹದಿಯ ಚಿಂತಕ ದಂಬೆಕೋಡಿ ಬೋಪಣ್ಣ ಸುಬ್ರಾಯ

'ದಂಬೆಕೋಡಿ ಸುಬ್ರಾಯ' ಬಹುಷಃ ಈ ಹೆಸರು ಕೇಳದವರು ಗೌಡ ಜನಾಂಗದಲ್ಲಿ ಇಲ್ಲ. ಶ್ರೀಯುತರು ಇಂದು ನಮ್ಮ ನಡುವೆ ಇಲ್ಲದಿದ್ದರೂ, ಅವರು ಜನಾಂಗಕ್ಕಾಗಿ ಸಲ್ಲಿಸಿದ ಸೇವೆ, ನೀಡಿದ ಪ್ರೋತ್ಸಾಹ, ಮಾಡಿದ ಸಂಘಟನೆ ಅವರ ನೆನಪನ್ನು ನಮ್ಮಲ್ಲಿ ಚಿರಂತನವಾಗಿರಿಸಿದೆ. ಗೌಡ ಸಂಘಟನೆಯಲ್ಲಿ ಅವರು ವಹಿಸಿದ ಶ್ರಮಕ್ಕೆ ಇಂದಿನ 'ಗೌಡ ಸಮಾಜ' ಜೀವಂತ ಸಾಕ್ಷಿ ನುಡಿಯುತ್ತಿದೆ.

ಶ್ರೀ ದಂಬೆಕೋಡಿ ಸುಬ್ರಾಯನವರು 1907 ಆಗಸ್ಟ್ 24ರಂದು, ದಂಬೆಕೋಡಿ ಬೋಪಣ್ಣನವರ ನಾಲ್ಕು ಜನ ಮಕ್ಕಳಲ್ಲಿ ಹಿರಿಯವರಾಗಿ ಜನಿಸಿದರು. ಇವರ ತಂದೆ ಬೋಪಣ್ಣನವರು ಆಗಿನ ಕಾಲದಲ್ಲಿ ಜನರ ಕಷ್ಟ ಸುಖಗಳಲ್ಲಿ ಭಾಗಿಗಳಾಗುತ್ತಿದ್ದವರು. ಇದರ ಪರಿಣಾಮ ಇವರ ಮಗನ ಮೇಲೂ ಆಯಿತೆನ್ನಬಹುದು. ಶ್ರೀಯುತರು ಜನರೊಡನೆ ನಿಕಟ ಸಂಪರ್ಕವನ್ನಿಟ್ಟುಕೊಂಡು ಜನರ ಪ್ರೀತಿಗೆ ಪಾತ್ರರಾಗಿದ್ದವರು.

ಆಗ ಸ್ವಾತಂತ್ರ್ಯ ಪೂರ್ವದ ಸಮಯ. ಕೊಡಗಿನಲ್ಲಿ ಗೌಡಜನಾಂಗ "ಸ್ವಾತಂತ್ರ್ಯ ಪ್ರೇಮ"ದ ಪರಿಣಾಮವಾಗಿ ಬ್ರಿಟಿಷರನ್ನು ಎದುರು ಹಾಕಿಕೊಂಡು, ಸಾಕಷ್ಟು ತುಳಿತಕ್ಕೊಳಗಾಗಿತ್ತು. ಇಡೀ ಜನಾಂಗವೇ ಬಡತನದ ಬೇಗೆಯಲ್ಲಿ ನರಳುತಿದ್ದ ಕಾಲವದು. 1943ರಲ್ಲಿ ಸುಬ್ರಾಯನವರು ಇದೇ ಪರಿಸ್ಥಿತಿಯಲ್ಲಿ 'ದೊರೆ'ಗಳ ತೋಟದಲ್ಲಿ ಮೇಲ್ವಿಚಾರಕರಾಗಿ ಕೆಲಸಕ್ಕೆ ಸೇರಿಕೊಂಡರು. ಇವರೊಡನೆ ಹಲವು ಜನಾಂಗ ಬಂಧುಗಳು ಇದೇ ತೋಟದಲ್ಲಿ ಕೆಲಸಕ್ಕೆ ಸೇರಿಕೊಂಡರಾದರೂ, ಅವರಲ್ಲಿದ್ದ ಸ್ವಾತಂತ್ರ್ಯದ ಕೆಚ್ಚಿನಿಂದಾಗಿ ಸುಮಾರು 40 ಜನ ಕೆಲಸ ಕಳೆದುಕೊಳ್ಳಬೇಕಾಯಿತು. ಆದರೆ ಸುಬ್ರಾಯನವರ ಆಕರ್ಷಕ ವ್ಯಕ್ತಿತ್ವ, ಅದಲ್ಲದೆ ಬೇಟೆಯಲ್ಲಿ ಅವರಿಗಿದ್ದ ಅಪ್ರತಿಮ ನೈಪುಣ್ಯತೆ ಬ್ರಿಟೀಷರನ್ನು ಸಂಪೂರ್ಣವಾಗಿ ಇವರಕಡೆ ಆಕರ್ಷಿಸಿತು. ಆದುದರಿಂದ ದೊರೆಗಳ ತೋಟ 'ಕನ್ಸಾಲಿಡೇಟ್ ಎಸ್ಟೇಟ್' ಆಗಿ ರೂಪಾಂತರಗೊಂಡಾಗ ಇವರನ್ನು ವ್ಯವಸ್ಥಾಪಕರನ್ನಾಗಿ ನೇಮಿಸಲಾಯಿತು. ಅತ್ಯಂತ ಪ್ರಾಮಾಣಿಕ ಶ್ರಮಜೀವಿಯಾಗಿದ್ದ ಸುಬ್ರಾಯನವರು 1965ರಲ್ಲಿ ನಿವೃತ್ತಿಯಾಗುವ ಮೊದಲೇ 220ಎಕ್ರೆ ತೋಟದಲ್ಲಿ 250 ಟನ್ ಕಾಫಿ ಫಸಲು ತೆಗೆದು ದಾಖಲೆ ನಿರ್ಮಿಸಿ, ತಮ್ಮ ಶ್ರಮದ ಸಾಧನೆ ಮೆರೆದವರು.

ಸುಬ್ರಾಯನವರಿಗೆ ಹೆಗಲಿಗೆ ಹೆಗಲುಕೊಟ್ಟವರು ಮೂವರು. ಪೇರಿಯನ ಪೂವಯ್ಯ, ಕೆದಂಬಾಡಿ ಚಿಣ್ಣಪ್ಪ, ಮತ್ತು ಐಯಂಡ್ರರಾಮಪ್ಪ ಸಹೋದರರು. ಇವರು ನಾಲ್ವರು ಸೇರಿ 1946ರಲ್ಲಿ ಅಂದರೆ ಸ್ವಾತಂತ್ರ್ಯ ಪೂರ್ವದಲ್ಲೇ 'ಶ್ರೀಮಂಗಲ ಕಂಪೆನಿ' ಎಂಬ ಸಂಸ್ಥೆಯಡಿ ಒಂದಾಗಿ ಕೃಷಿಯಲ್ಲಿ ತೊಡಗಿದರು. ಸುಮಾರು 200 ಎಕ್ರೆ ತೋಟ ನಿರ್ಮಿಸಿದರು. ಇದರ ಜೊತೆ ಜೊತೆಯಲ್ಲೇ ಗೌಡ ಜನಾಂಗದ ಏಳಿಗೆಗೆ ತಮ್ಮ ಕಾಣಿಕೆ ಸಲ್ಲಿಸಲಾರಂಭಿಸಿದರು. ಗೌಡ ಜನಾಂಗ ಬಂಧುಗಳಿಗೆ ಕಾಫಿತೋಟ ನಿರ್ಮಿಸಲು ಸಲಹೆಕೊಟ್ಟರಲ್ಲದೆ ಸಹಾಯ ಮಾಡಲಾರಂಭಿಸಿದರು. ಇವರ ಸಹಕಾರ ಹಾಗೂ ಪ್ರೋತ್ಸಾಹದಿಂದ ಹಲವಾರು ಗೌಡ ಕುಟುಂಬಗಳು ಸ್ವಾವಲಂಬಿ, ಸ್ವಾಭಿಮಾನ ಬೆಳೆಸಿಕೊಳ್ಳುವಲ್ಲಿ ಯಶಸ್ಸು ಕಂಡವು. ನಂತರ ಇವರ ದೃಷ್ಟಿ ಹೊರಳಿದ್ದು ಸಮಾಜದ ಕಡೆಗೆ, ಗೌಡ ಜನಾಂಗದ ಸಂಘಟನೆಗೆ ಸಮಾಜವೊಂದರ ಔಚಿತ್ಯವನ್ನು ಮನಗಂಡ ಇವರು ಅದರ ಸ್ಥಾಪನೆಗೆ ಶ್ರಮಿಸಿದರು. ಆ ಶ್ರಮದ ಫಲವೇ ಇಂದಿನ ಮಡಿಕೇರಿಯ 'ಕೆಳಗಿನ ಗೌಡ ಸಮಾಜ' ಕೊಡಗುಗೌಡ ವಿದ್ಯಾಸಂಘದ ಏಳಿಗೆಗೂ ಇವರು ಪ್ರೋತ್ಸಾಹ ನೀಡಿದ್ದರು.

ರಾಜಕೀಯ ಕ್ಷೇತ್ರದಲ್ಲೂ ಇವರ ಕೊಡುಗೆ ಅಪಾರವಾದುದು. ನಿಡ್ಯಮಲೆ ಸೋಮಣ್ಣನವರು ಗೌಡಜನಾಂಗದ ಸಂಸತ್ಸದಸ್ಯರಾದ ಏಕೈಕ ಪ್ರಥಮ ವ್ಯಕ್ತಿ. ಆದರೆ ಅವರು ಆಯ್ಕೆಯಾಗುವಲ್ಲಿ ಸುಬ್ರಾಯನವರು ತಮ್ಮ ಕೊಡುಗೆ ನೀಡಿದ್ದರು. ತಮ್ಮ ಕಂಪೆನಿಯ ಮೂಲಕ ಅವರಿಗೆ ಚುನಾವಣಾ ನೆರವಿಗಾಗಿ ಜೀಪನ್ನು ನೀಡಿ ಗೆಲುವಿಗಾಗಿ ಶ್ರಮಿಸಿದ್ದರು. ಹೀಗೆ ಸುಬ್ರಾಯನವರ ಸಾಧನೆ, ಸಂಘಟನೆಗಳು ಕಲ್ಪನೆಗೆ ಮೀರಿದವು. ಇವರು ವಿಶಾಲ ತಳಹದಿಯಲ್ಲಿ ಗೌಡ ಸಂಘಟನೆಯನ್ನು ಮಾಡಬೇಕೆಂದು ಕನಸುಕಂಡವರು. ಅಂದರೆ ಒಕ್ಕಲಿಗರನ್ನು ಕೊಡಗು ಗೌಡ ಸಂಘಟನೆಯಲ್ಲಿ ಬೆರೆಸಬೇಕೆಂಬ, ನಾವೆಲ್ಲರೂ ಒಂದೇ ಎಂಬ, ಭಾವನೆಯನ್ನಿಟ್ಟುಕೊಂಡು ಪರಸ್ಪರ ವಿವಾಹ ಸಂಬಂಧಕ್ಕೂ ಪ್ರೇರಣೆ ನೀಡಿದ್ದರು. ಈ ಸಂಪರ್ಕದಿಂದ ಕೊಡಗು ಗೌಡಜನಾಂಗ ಸಾಕಷ್ಟು ಲಾಭಗಳಿಸಬಹುದು ಎನ್ನುವ ದೂರಾಲೋಚನೆಯನ್ನು ಇವರು ಹೊಂದಿದ್ದರು.

ಸುಬ್ರಾಯನವರದ್ದು ದೊಡ್ಡ ಸಂಸಾರ. ಇವರಿಗೆ ಹನ್ನೆರಡು ಜನ ಮಕ್ಕಳು. ಪ್ರತಿಯೊಬ್ಬರು ಜೀವನದ ಉತ್ಕೃಷ್ಟ ದರ್ಜೆಗೇರಿದವರು. ಸಮಾಜಕ್ಕೆ ತಮ್ಮದೇ ಆದ ಕೊಡುಗೆ ಸಲ್ಲಿಸಿದವರು. ಇವರ ಹಿರಿಯಪುತ್ರ ಮುದ್ದಪ್ಪನವರು ನಿವೃತ್ತ ಕೃಷಿ ಅಧಿಕಾರಿ. ಎರಡನೆಯವರು ಸುಕುಮಾರ ಅಮೇರಿಕಾದಲ್ಲಿ ಹುದ್ದೆಯಲ್ಲಿದ್ದಾರೆ. ಮೂರನೆಯವರು ಭಾಗೀರಥಿ ಸಿನಿಮಾನಟ ಅಂಬರೀಷ್‌ರವರ ಸಹೋದರ ಶಿವಕುಮಾರನವರನ್ನು ವಿವಾಹವಾಗಿ ಮೈಸೂರಿನಲ್ಲಿ ನೆಲೆಸಿದ್ದಾರೆ. ನಾಲ್ಕನೆಯವರು ಲಕ್ಷ್ಮಣ ಅಮೇರಿಕಾದಲ್ಲಿ ನೆಲೆಸಿದ್ದಾರೆ. ಐದನೆಯವರು ಮಾದಪ್ಪನವರು ಮಾಜಿಶಾಸಕರು, ಆರನೆಯವರು ಆನಂದ ಇವರು ಕೆ.ಎಸ್.ಎಫ್.ಸಿ. ಅಧಿಕಾರಿ ಹಾಗೂ ಬೆಂಗಳೂರು ದ. ಕೊ. ಗೌಡ ಸಮಾಜದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸುಭಾಷ್‌ರವರು ಕಗ್ಗೋಡುನಲ್ಲಿ ಕೃಷಿಯಲ್ಲಿ ತೊಡಗಿದ್ದಾರೆ. ಗಂಗಮ್ಮನವರು ಪೋಲೀಸ್ ಅಧಿಕಾರಿ ಯಾಲದಾಳು

13 ನೇ ಪುಟಕ್ಕೆ

# KODAGU EDUCATIONAL ACADEMY (REGD.) BANGALORE

Admn. Office : Kodagu Gowda Samaja, No. 413, Cauvery Nagarä R. T. Nagar Post, Bangalore - 560 032.

## APPEAL

It is a proud moment now to mention that, the Kodagu Gowda Samaja (R), Bangalore has achieved one of its major objectives in building up a massive Samaja Building of about 4,000 sq. ft costing around Rs. 21,00,000 (Rupees Twenty One Lakhs Only) with generous contributions by the community people to foster the various welfare and social activities of Kodagu Gowda Community people settled in Bangalore and around about areas.

With this achievement on hand, the Management of the Samaja did not loose time to think and take on never fields to widen its activities and aspirations, as much priority consideration was given to promote education. It thereby gave its green signal to start a school from the ensuing Academic year 2001-2002 itself to begin with the kindergarten section and develop it gradually to X std and later, god willing to multi-disciplinary educational institutions as long range program. This novel idea was cleared by a Special General Body meeting of KGS, Bangalore held on 17th December 2000 and the Samaja management felt it desirable that, promotion of education should be taken over by a registered body, independent of KGS and there came up the formation of the Kodagu Educational Academy (KEA), which has been recently registered (vide S.No. 1984 / 2000-2001).

The Academy in its initial stage itself felt jubilant to see a stream of promoters from among the community people spread over the State, coming forward with their promotional contributions morefully described as UNITS (Each unit would be Rs. 10,000 + 1,000 - Membership fee). We are happy to mention that by now, contributions have summed up to almost around Rs. 5,00,000/- (Rupees five lakhs only), which no doubt is only a drop in the ocean, when the volume of work and programs envisaged ahead are considered. These contributions would primarily be used to build various infrastructure facilities for starting the school and other deeds associated with it. We hasten to add that, your liberal contributions will be refunded within the gestation period after 5 years, by which time the venture should have got into its strong footing.

As a major and immediate help to KEA, the KGS has been very generous to rent out the Samaja Building for the School purpose and the rental agreement etc., has been already signed. It is to be mentioned here that, the usual activities of KGS will go on in the same building as and when required.

The Academy on a war footing basis has already taken action on various activities such as, seeking permission from the concerned State Education Department to start the School, appointment of Principal and other teachers, building the required infra-structures in the classrooms, arranging the playground, updating the Samaja building with assured water, electricity and amenities etc. To over see the functioning of the School, a Governing Body and also an Advisory body consisting of some senior persons drawn from various fields are constituted under Kodagu Educational Academy.

All these works need lot of funds and therefore we appeal to all our community people, friends, well wishers, philanthropists and others to render their valuable contributions thereby, you will help the cause of education to our younger generation. Your contributions may kindly be sent by Cheque/ DD drawn in favour of **Kodagu Educational Academy** and forwarded to the General Secretary of the Academy

**DR. G. P. CHINNAIAH**, Predident

# ಸುಂಟಿಕೊಪ್ಪ ನಗರದ ಯುವ ನಾಯಕನಾಗಿ ಜಿಲ್ಲಾ ಮಟ್ಟದಲ್ಲಿ ಬೆಳೆಯುತ್ತಿರುವ ಶ್ರೀ ಪಟ್ಟೆಮನೆ ಕೃಷ್ಣಪ್ಪ ಶೇಷಪ್ಪ.



ರಾಜಕೀಯದಲ್ಲಿ ಒಬ್ಬ ವ್ಯಕ್ತಿ ಬೆಳೆಯಬೇಕೆಂದರೆ ಆತ ಚುರುಕು ಬುದ್ಧಿವುಳ್ಳವನು, ರಾಜತಾಂತ್ರಿಕತೆಯ ನಿಪುಣನು, ಉತ್ತಮ ವಾಗ್ಮಿಯೂ, ಜನ ಸಂಪರ್ಕ ವಿರಿಸಿಕೊಂಡವನು, ಸ್ನೇಹಪರತೆ ಉಳ್ಳವನು, ಉತ್ತಮ ಗುಣವುಳ್ಳವನು ಆಗಿದ್ದರು ಸಹ ಜೊತೆಗೆ ಅದೃಷ್ಟವಂತನು ಆಗಿರಬೇಕೆನ್ನುವುದು ಚಾಣಕ್ಯನ ಚಾಣಾಕ್ಷತೆಯ ನುಡಿಗಳಾಗಿವೆ. ಇವೆಲ್ಲವನ್ನು ಮೈಗೂಡಿಸಿಕೊಂಡು ಮುಂದೆ ಭವಿಷ್ಯದಲ್ಲಿ ಉತ್ತುಂಗಕ್ಕೇರುವ ದೂರದೃಷ್ಟಿ ಇಟ್ಟುಕೊಂಡವರು ಮತ್ತಾರು ಅಲ್ಲ ನಮ್ಮ ನಿಮ್ಮ ಮಧ್ಯೆ ಸಮಾಜ ಸೇವಾಕಾಂಕ್ಷಿಯಾಗಿ ಜನಪರ ಕೆಲಸಗಳನ್ನು ಸದಾ ಮಾಡುತ್ತಿರುವ ವ್ಯಕ್ತಿಯೇ ಸುಂಟಿಕೊಪ್ಪ ನಗರವಾಸಿಯಾಗಿರುವ ಶ್ರೀ ಪಟ್ಟೆಮನೆ ಕೃಷ್ಣಪ್ಪ ಶೇಷಪ್ಪನವರು. ಶ್ರೀಯುತರು ಭಾರತೀಯ ಜನತಾ ಪಕ್ಷದ ಮೇಲ್ಮಟ್ಟದ ಸಕ್ರಿಯ ಕಾರ್ಯಕರ್ತರಾಗಿ ದುಡಿಯುತ್ತಿದ್ದಾರೆ.

ಶ್ರೀ ಶೇಷಪ್ಪನವರು ಪಟ್ಟೆಮನೆ ದಿ|| ಕೃಷ್ಣಪ್ಪ ಮತ್ತು ಅಕ್ಕಮ್ಮ ದಂಪತಿಗಳ ಪ್ರಥಮ ಪುತ್ರರಾಗಿ 16-6-1957ರಲ್ಲಿ ಜನಿಸಿದರು. ಇವರ ತಂದೆ ದಿ. ಕೃಷ್ಣಪ್ಪನವರು ದಾನ, ಧರ್ಮದಲ್ಲಿ ಎತ್ತಿದ ಕೈಯಾಗಿದ್ದರು. ದಿ|| ಕೃಷ್ಣಪ್ಪ ಸಹೋದರರು ಒಂದು ಎಕ್ರೆ ಜಾಗವನ್ನು ದಾನವಾಗಿ ಸುಂಟಿಕೊಪ್ಪದ ಸರ್ಕಾರಿ ಪ್ರಾಥಮಿಕ ಶಾಲೆಗೆ ಉದಾರವಾಗಿ ನೀಡಿ ವಿದ್ಯೆಯೇ ಅಧಿದೇವತೆಯೆಂಬ ಮುನ್ನುಡಿಗೆ ನಾಂದಿ ಹಾಡಿದ ಕೀರ್ತಿ ಶೇಷರು

ಶ್ರೀ ಶೇಷಪ್ಪನವರು ತನ್ನ ಪ್ರಾಥಮಿಕ ವಿದ್ಯೆಯನ್ನು ಮೂರನೆ ತರಗತಿ ತನಕ ಸುಂಟಿಕೊಪ್ಪದಲ್ಲಿಯೂ, 7ನೇ ತರಗತಿ ತನಕ ಸಂಪಾಜೆಯಲ್ಲಿಯೂ, ಹಾಗೂ S.S.L.C.ಯನ್ನು ಸುಂಟಿಕೊಪ್ಪನಾಡು ಹೈಸ್ಕೂಲ್‌ನಲ್ಲಿಯೂ ಮತ್ತು ಪದವಿ ಪೂರ್ವ ವಿದ್ಯೆಯನ್ನು ಸರ್ಕಾರಿ ಕಾಲೇಜ್ ಮಡಿಕೇರಿಯಲ್ಲಿಯೂ ಮಾಡಿದರು. ನಂತರ ವಿದ್ಯೆಗೆ ತಿಲಾಂಜಲಿ ಇತ್ತ ಇವರು ಮಡಿಕೇರಿಯಲ್ಲಿರುವ ತಾಂತ್ರಿಕ ವಿದ್ಯಾ ಸಂಸ್ಥೆಯಲ್ಲಿ ಟರ್ನರ್ ವೃತ್ತಿ ತರಬೇತಿಯನ್ನು ಮುಗಿಸಿದರು. ಅದು ಅಲ್ಲದೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಬಸ್ಸ್ ನಿರ್ವಾಹಕರಾಗಿಯೂ ಕೆಲಸ ಮಾಡಿದರು. ಅದು ಸಾಲದೆಂಬಂತೆ ಸುಂಟಿಕೊಪ್ಪದ ವಿಜಯ ಬ್ಯಾಂಕ್‌ನಲ್ಲಿ ಪಿಗ್ಮಿ ಕಲೆಕ್ಟರ್ ಆಗಿ ಸಹ ಕೆಲಸ ನಿರ್ವಹಿಸಿದ್ದಾರೆ.

ಅಲ್ಲಿಂದ ನಿಧಾನವಾಗಿ ರಾಜಕೀಯದ ಕಡೆಗೆ ಶ್ರೀಯುತರ ಒಲವು. 1986ಮತ್ತು 1989ರಲ್ಲಿ ನಡೆದ ಸುಂಟಿಕೊಪ್ಪ ನಗರ ಸಹಕಾರ ಸಂಘದಲ್ಲಿ ಸೋಲಿನ ರಹದಾರಿ. ಆದರೆ ಯಾವುದಕ್ಕೂ ಜಗ್ಗದೆ ಪ್ರಯತ್ನ ಪಡು ಕೊನೆಯ ತನಕ ಅನ್ನುವ ರೀತಿ "ಘಾಸಿಯಾದ ಹುಲಿಯಂತೆ" ಛಲವನ್ನು ಬಿಡದೆ ಬೇತಾಳನಂತೆ ಬೆಂಬತ್ತಿ ಕೊನೆಗೂ ಸೇವಾಸಹಕಾರ ಸಂಘ(ನಿ)ದಲ್ಲಿ 10 ವರ್ಷಗಳು ನಿರ್ದೇಶಕರಾಗಿಯು, ನಂತರ 1996-97 ರ ಸಾಲಿಗೆ ಅಧ್ಯಕ್ಷರಾಗಿಯೂ, ಆಯ್ಕೆಯಾದ ನಿಸ್ಸೀಮ ಹಾಗೂ 2001ರಿಂದ ಎರಡನೇ ಬಾರಿಗೆ ಎರಡುವರೆ ವರ್ಷದ ಅವಧಿಗೆ ಅಧ್ಯಕ್ಷರಾಗಿಯೂ ಮುಂದುವರಿಯುತ್ತಿದ್ದಾರೆ.

ಸೋಮವಾರ ಪೇಟೆ ತಾಲೂಕಿನ ಸುಂಟಿಕೊಪ್ಪ ವಲಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ನಿರ್ದೇಶಕರಾಗಿಯೂ, ದೂರವಾಣಿ ಸಲಹಾ ಸಮಿತಿ ಜಿಲ್ಲಾ ಘಟಕದ ನಿರ್ದೇಶಕರಾಗಿಯೂ, ಸರ್ಕಾರಿ ಪ್ರಾಥಮಿಕ ಶಾಲೆಯ ಮತ್ತು ಕೊಡಗರ ಹಳ್ಳಿಯ ಜೂನಿಯರ್ ಕಾಲೇಜಿನ ಶೈಕ್ಷಣಿಕ ಶಾಲಾ ಸಮಿತಿಯ ನಿರ್ದೇಶಕರಾಗಿಯೂ, ಪ್ರಾಥಮಿಕ ಶಾಲೆಗೆ ಹಿರಿಯರು ದಾನ ಮಾಡಿದ ನಿಮಿತ್ತ ನಿರ್ದೇಶಕರ ಸ್ಥಾನ ಖಾಯಂ ಆಗಿ ಮನೆತನಕ್ಕೆ ಬಂದದ್ದು ಈಗ ಶ್ರೀಯುತರ ಪಾಲಿಗೆ ಬಂದಿದೆ. ಹಾಗೂ ಕೊಡಗು ಜಿಲ್ಲೆ ವ್ಯಾಪಾರಸ್ಥರ ಚೇಂಬರ್ಸ್‌ನ ನಿರ್ದೇಶಕರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಅಷ್ಟೆ ಅಲ್ಲ 1998ರಿಂದ ಕೊಡಗು ಗೌಡ ಸಮಾಜದ ಹಾಲಿ ನಿರ್ದೇಶಕರಾಗಿಯೂ ಜನಾಂಗದ ಬಗ್ಗೆ ಕಾಳಜಿಯಿಂದ ದುಡಿಯುತ್ತಾರೆ.

ಮೂಲತಃ R.S.S.ಪ್ರೇರಣೆಯಿಂದ ಬಂದ ಇವರು ಬಿ.ಜೆ.ಪಿ.ಯಲ್ಲಿ 17 ವರ್ಷಗಳಿಂದಲೂ ಸಕ್ರಿಯ ಕಾರ್ಯಕರ್ತನಾಗಿ ಹಂತ ಹಂತವಾಗಿ ಮೇಲೇರಿ, ಇಂದು ಸುಂಟಿಕೊಪ್ಪ ನಗರದ ಭಾ.ಜ.ಪ. ಅಧ್ಯಕ್ಷರಾಗಿ 2 ವರ್ಷದ ಅವಧಿಗೂ ಹಾಗೂ 2 ವರ್ಷದ ಅವಧಿಗೆ ಹೋಬಳಿ ಅಧ್ಯಕ್ಷರಾಗಿಯೂ ಆಯ್ಕೆ ಆಗಿದ್ದಾರೆ. ಇದು ಸಾಮಾನ್ಯವಾದುದಲ್ಲ. ಹಾಲಿ ಭಾ.ಜ.ಪ.ದ ತಾಲೂಕು ಮತ್ತು ಜಿಲ್ಲಾ ಸಮಿತಿಯ ಸದಸ್ಯರಾಗಿ ಕಾರ್ಯ ನಿರ್ವಹಣೆ. ಜೀವನೋಪಾಯಕ್ಕಾಗಿ ವ್ಯಾಪಾರವಲ್ಲದೆ, ನಿರ್ಮಲ ಎಂಟರ್ ಪ್ರೈಸಸ್ಸ್, ವಿಜಯ ವಿನಾಯಕ ಇಂಡಿಯನ್ ಗ್ಯಾಸ್‌ನ ಉಪ ಏಜೆನ್ಸಿ, ವಂದನ ಬಾರ್, ವಂದನ ಕಮ್ಯೂನಿಕೇಷನ್ನಿನ ಮಾಲಿಕರು ಆಗಿದ್ದಾರೆ.

ನೇರ ನುಡಿಯ ಪ್ರಾಮಾಣಿಕ ಸತ್ಯ ನಿಷ್ಠೆಯ ದಷ್ಟಪುಷ್ಟ ದೇಹದ ಶೇಷಪ್ಪನವರನ್ನು ಗೌಡ ಜನಾಂಗದವರ ಬಗ್ಗೆ ಸಂಗಾತಿ ಕೇಳಿದಾಗ ನಮ್ಮಿಂದ ಉಪಕಾರ ಮಾಡಲು ಸಾಧ್ಯವಾಗದಿದ್ದರು, ಕಾಲೆಳೆಯುವ, ದ್ವೇಷಿಸುವ, ಕೀಳು ಭಾವನೆಯಿಂದ ತಾತ್ಸಾರದಿಂದ ಕಾಣುವ ನಮ್ಮ ಕೆಟ್ಟ ಚಾಳಿ, ಪ್ರವೃತ್ತಿಯನ್ನು ಬಿಡಬೇಕು. ಹೊಟ್ಟೆಗಿಲ್ಲದಿದ್ದರು ಪರವಾಗಿಲ್ಲ, ಇನ್ನೊಬ್ಬರ ಬಗ್ಗೆ ಹೊಟ್ಟೆಕಿಚ್ಚಿನಿಂದ ದೂರುವ ಹವ್ಯಾಸ ಇರಬಾರದು. ಕೇವಲ ಸಭೆ ಸಮಾರಂಭಗಳಲ್ಲಿ ರಾಜಕೀಯ ಚುನಾವಣೆಯ ಸಮಯದಲ್ಲಿ ಮಾತ್ರ ಜಾತಿಯ ಸಹಕಾರ ಕೇಳುವುದು ಸರಿಯಲ್ಲ ನಮ್ಮ ಜನಾಂಗ ಉದ್ದಾರ ಆಗಬೇಕಾದರೆ ಬಡವ ಶ್ರೀಮಂತ ಎನ್ನುವ ಭೇದ ವಿಲ್ಲದೆ 10 ಕುಟುಂಬ ಹದಿನೆಂಟು ಗೋತ್ರಕ್ಕೆ ಸೇರಿದ ನಾವೆಲ್ಲರು ಒಂದೇ ಹಾಗೂ ಸಮಾನರು ಅನ್ನುವ ಪರಿಕಲ್ಪನೆಯಿಂದ ಕನಿಷ್ಠ

*To realize the value of 1 month, ask a mother who has given birth to a premature baby*

10 ನೇ ಪುಟಕ್ಕೆ

# 1837 ರ ಅಮರ ಸುಳ್ಯ ಕ್ರಾಂತಿಯ ನೆನಪಿನರಿಯುಗಾಗಿ

**ಪತ್ರಿಕಾ ವರದಿ ಮಂಗಳೂರು – ಟುಡೇ, ಮೇ 1998ರ ವರದಿಯ ಭಾಷಾಂತರ ಲೇಖನ ಪ್ರೋ. ಪೂಜಾರಿ ಮೋಣಪ್ಪನವರಿಂದ**

***ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚಿನ ಜನರಿಗೆ 1857ಕ್ಕಿಂತ 20ವರ್ಷಗಳ ಮೊದಲು ಈ ನಮ್ಮ ಜಿಲ್ಲೆಯಲ್ಲಿ ಬ್ರಿಟಿಷರ ರಾಜ್ಯಭಾರದ ವಿರುದ್ಧ ಸುಳ್ಯದಲ್ಲಿ ಬಂಡಾಯವೆದ್ದಿತೆಂದು ತಿಳಿದಿಲ್ಲ. ಈ ವಿಷಯುವನ್ನು ಚರಿತ್ರೆಕಾರರು ನಿರ್ಲಕ್ಷ್ಯಭಾವನೆಯಿಂದ ನಿಜವಾದ ಸಂಗತಿಯನ್ನು ವಿವರಿಸದೆಯೂ ಹಾಗೂ ಜನರಲ್ಲಿ ಜಾಗ್ರತಿ ಇಲ್ಲದಿದ್ದುದರಿಂದಲೂ ಮರೆತು ಹೋಗಿ ಅಸ್ಪಷ್ಟವಾಗಿದೆ. ಜನರಿಗೆ ನೆನಪಿಸಲು ಇದೊಂದು ಸಕಾಲ.***

***— ಸಂ***

ಸಾಮಾನ್ಯವಾಗಿ 1857ನೇ ಇಸವಿಯ ಘಟನೆಯನ್ನು ಭಾರತ ಪ್ರಥಮ ಸ್ವಾತಂತ್ರ್ಯ ಹೋರಾಟದ ಪ್ರಥಮ ಹೆಜ್ಜೆಯೆಂದು ಕರೆಯುತ್ತಾರೆ. ಇದನ್ನು ಬ್ರಿಟಿಷರು ಸಿಪಾಯಿದಂಗೆ ಎಂದು ಕರೆದಿದ್ದಾರೆ. ಈ ದಂಗೆಯ ವೀರ ತನದ ಹೋರಟವು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಒಂದು ಮಹತ್ವದ ಘಟನೆಯಾಗಿದೆ ಆದರೆ ದಕ್ಷಿಣ ಕನ್ನಡ ಜಿಲ್ಲೆಯ ಘಟನೆ ಈ ಘಟನೆ ನಡೆಯುವುದಕ್ಕೆ 20ವರ್ಷಗಳ ಮೊದಲೇ ನಮ್ಮ ಜಿಲ್ಲೆಯಲ್ಲಿ ಬ್ರಿಟಿಷರ ರಾಜ್ಯಭಾರದ ವಿರುದ್ಧ ಬಂಡಾಯವೆದ್ದರೆಂದು ಹೆಚ್ಚಿನ ಜನರಿಗೆ ತಿಳಿದೇ ಇಲ್ಲದಾಗಿದೆ. ಇದಕ್ಕೆ ಚರಿತ್ರೆಕಾರರ ನಿರ್ಲಕ್ಷದಿಂದ ಸರಿಯಾಗಿ ವಿವರಿಸದೆ ಇರುವುದರಿಂದಲೂ ಜನರಲ್ಲಿ ಜಾಗ್ರತಿ ಇಲ್ಲದ್ದರಿಂದಲೂ ಮರೆತು ಹೋಗಿ ಅಸ್ಪಷ್ಟವಾಗಿದೆ.

ಸ್ವಾತಂತ್ರ ಪೂರ್ವ ಮತ್ತು ಸ್ವಾತಂತ್ರದ ನಂತರ ಚರಿತ್ರೆಕಾರರು ಪೂರ್ತಿಯಾಗಿ ನಿರ್ಲಕ್ಷನೀತಿಯನ್ನು ತಾಳಿದ್ದಾರೆ. ವಸಾಹತುಗಾರರ ಪ್ರಭಾವದಿಂದ (ಬ್ರಿಟಿಷರ) ಆಗಿನ ಕಾಲದ ಶೌರ್ಯತನವನ್ನು ಕೀಳು ರೀತಿಯಲ್ಲಿ ಕಲ್ಯಾಣಪ್ಪನ ಕಾಟಕಾಯಿ ಎಂದು ಬಣ್ಣಿಸಿದ್ದಾರೆ. ಹಾಗಿದ್ದರೂ ದಕ್ಷಿಣ ಕನ್ನಡ ಜಿಲ್ಲೆಯ ಮತ್ತು ಕೊಡಗು ಜಿಲ್ಲೆಯ ಗಡಿಯ ಕೆಲವು ಹುರುಪಿನ ಪಂಗಡದವರು, ಚರಿತ್ರೆಗಾರರು ಮಾಡಿದ ಘೋರ ಅನ್ಯಾಯವನ್ನು ಸರಿಪಡಿಸುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ. ಇವರಲ್ಲಿ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಗಡಿಯಲ್ಲಿರುವ ಸಂಪಾಜೆ ಪಟ್ಟಣದ ತೋಟಗಾರರು, ಸಮಾಜ ಕಾರ್ಯಕರ್ತರು, ನಾಟಕ ಕಲಾವಿದರು ಮತ್ತು ಚಿತ್ರತಯಾರಕರೂ ಆಗಿರುವ ನಂಜಯ್ಯನ ಮನೆ ಸಣ್ಣಯ್ಯ ದೇವಿಪ್ರಸಾದರವರು, ಜನಾರ್ಧನ ಕಮಕ್ಕಾರ್ ಮತ್ತು ಇನ್ನಿತರರೊಡನೆ ತೀವ್ರ ತರದ ಅಭಿಲಾಶೆಯನ್ನು ಹೊಂದಿದ್ದಾರೆ.

ಈ ಬಗ್ಗೆ ಇತ್ತೀಚಿನ ದಿನಗಳಲ್ಲಿ ಬ್ರಿಟಿಷ್ ಅಧಿಕಾರಿಯಾದ ಮಂಗಳೂರಿನ ಮುಖ್ಯ ಕಲೆಕ್ಟರ್ ಲೆವಿನ್ 1837ನೇ ಇಸವಿ ನವೆಂಬರ್ 30ರಲ್ಲಿ ಸಲ್ಲಿಸಿದ ವರದಿ ಈ ವಿಷಯದಲ್ಲಿ ಹೊಸಬೆಳಕು ಚೆಲ್ಲಿದೆ. ಬ್ರಿಟಿಷರು ಈ ವಿಷಯದಲ್ಲಿ ಅಪಮಾನದ ರೀತಿಯಲ್ಲಿ ತಿಳಿಸಿದ ವಿಷಯ ತಡವಾಗಿ ಮಾನ್ಯತೆ ಕೊಟ್ಟಿದ್ದು ಬಹಳ ಸ್ವಾರಸ್ಯವಾಗಿದೆ. ಬ್ರಿಟಿಷರು ಆಳುತ್ತಿದ್ದಾಗ ಕೆನಾರದ ಮುಖ್ಯ ಕಲೆಕ್ಟರ್ ಆಗಿದ್ದ ಬ್ರಿಟಿಷ್ ಪ್ರಜೆ ಯಂ. ಲೆವಿನ್ ತಾನೇ ಬರೆದ ವರದಿಯಲ್ಲಿ ತಿಳಿಸಿದ್ದಾನೆ.

1837ನೇ ನವಂಬರ್ 30ರಲ್ಲಿ ಮಂಗಳೂರಿನಿಂದ ವರದಿಯನ್ನು ಮಾಡಿದ ವಿಷಯ ಚರಿತ್ರೆಯ ದಾಖಲಾತಿಗೆ ಧೃಢೀಕರಿಸುತ್ತದೆ. ಇದರಿಂದಾಗಿ ಈ ಚಳುವಳಿಯು ವಸಾಹತುಗಾರರ ವಿರುದ್ಧವಾದದೆಂದ ಸಾಬೀತು ಆಗುತ್ತದೆ.

ಈ ಅಮೂಲ್ಯವಾದ ದಾಖಲೆಯನ್ನು ಚೆನ್ನಾಯಿ (ಮದ್ರಾಸ್)ನಲ್ಲಿ ಸರ್ಕಾರಿ ಆರ್ಕೆವಿಸ್ (ದಾಕ್ಲೆಗಳ ಕಾರ್ಯಗಾರ) ದಲ್ಲಿ ಪತ್ತೆ ಹಚ್ಚಲಾಯಿತು. ಈ ದಾಕ್ಲೆಯನ್ನು ಮುದ್ರಣಾಲಯ ಬಂದ ನಂತರ 1911ರಲ್ಲಿ ಮಂಗಳೂರಿನ ಕಲೆಕ್ಟರ್ ಕಚೇರಿಯಲ್ಲಿ ಮುದ್ರಿಸಲಾಯಿತು. ಇಲ್ಲಿಯವರೆಗೆ ನಮಗೆ ರೆವರೆಂಡ್ ರಿಚ್ಚರ್‌ರವರ ಕೂರ್ಗ್ ಗಝೆಟಿಯರ್, ಕನ್ನಡದ ಹೆಸರಾಂತ ಸಾಹಿತಿಗಳು ಬರೆದ ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ, ಕಾದಂಬರಿಕಾರ ದಿ|| ನಿರಂಜನ, ಸುಳ್ಯದಲ್ಲಿಯೇ ಬಾಲ್ಯದ ವಿಧ್ಯಾಭ್ಯಾಸವನ್ನು ಮಾಡಿದ ಕುಲಕುಂದ ಶಿವರಾವ್‌ರವರು ಬರೆದ ನಮ್ಮದೇ ಮನೆ ಎಂಬ ಗ್ರಂಥಗಳು ಮತ್ತು ಇತರ ಬರಹಗಳು ಲಭ್ಯವಾಗಿದ್ದವು.

***ಕಲ್ಯಾಣಪ್ಪನ ಮುಂದಾಳ್ತನದ ಜ್ಯೋತಿ ಪುಟ್ಟಬಸಪ್ಪನ ಮೇಲೆ ಬಿದ್ದ ಅವನನ್ನು ಸಂಜಯ್ಯ ಮತ್ತು ಇತರ ಹೋರಾಟಗಾರರು ಅವನೇ ಕಲ್ಯಾಣಪ್ಪನೆಂದು ಸಾರಿದರು. ಇವರುಗಳ ಚಟುವಟಿಕೆಯು ಪೂವುಲೆ ಬೆಟ್ಟದ ಅರಣ್ಯದಲ್ಲಿ ನಡೆಯಿತು. ಜನರ ಬೆಂಬಲ ಪಡೆದು ಮಂಗಳೂರನ್ನು ವಶಮಾಡುವ ತೀರ್ಮಾನವನ್ನು ಕೈಗೊಳ್ಳಲಾಯಿತು.***

ಶತಮಾನಗಳಿಂದ ಸುಳ್ಯ ಮತ್ತು ಸುತ್ತಮುತ್ತಲಿನ ಪ್ರದೇಶವು ನದಿ ಮತ್ತು ತೋಡುಗಳಿಂದ ಕೂಡಿದ್ದು ವರ್ಷವಿಡೀ ನೀರಿನ ಸೌಲಭ್ಯದಿಂದ ಕೂಡಿದ್ದು ಈ ಪ್ರದೇಶವು ಫಲವತ್ತಾಗಿದ್ದು ದವಸ, ಧಾನ್ಯಗಳು ಯತೇಚ್ಛವಾಗಿ ಬೆಳೆಯುವ ಪ್ರದೇಶವಾಗಿತ್ತು. ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಲ್ಲಿ ಈ ಭಾಗವನ್ನು ಬ್ರಿಟಿಷರು ಆಕ್ರಮಿಸಿ ಕೆನರಾ ಎಂಬದಾಗಿ ಕರೆಯುವವರೆಗೆ ಈ ಪ್ರಾಂತ್ಯವು ಕೊಡಗು ರಾಜರ ಅಧೀನದಲ್ಲಿತ್ತು.

1799ರಲ್ಲಿ ಬ್ರಿಟಿಷರು ಮೈಸೂರಿನ ಸುಲ್ತಾನನಾದ ಟಿಪ್ಪುಸುಲ್ತಾನನ್ನು ಶ್ರೀರಂಗಪಟ್ಟಣದಲ್ಲಿ ಕೊಲ್ಲುವವರೆಗೆ ಟಿಪ್ಪು ಸುಲ್ತಾನನ ಅಧೀನದಲ್ಲಿತ್ತು. ಟಿಪ್ಪುಸುಲ್ತಾನನು ಕೊಡಗನ್ನು ಬ್ರಿಟಿಷರು ಆಕ್ರಮಿಸುವುದನ್ನು ತಡೆಗಟ್ಟುತ್ತಿದ್ದನು.

ಟಿಪ್ಪುವು ಸುಳ್ಯ ಪ್ರಾಂತ್ಯವನ್ನು ಸಾಮಂತರ ಮೂಲಕ ಆಳುತ್ತಿದ್ದನು. ಸಾಮಂತರ ಮುಖಾಂತರ ಈ ಪ್ರದೇಶವನ್ನು ಹತೋಟಿಯಲ್ಲಿಟ್ಟನು. ಟಿಪ್ಪು ಸುಲ್ತಾನನ ನಂತರ ಈ ಸಾಮಂತರನ್ನು ಬೆದರಿಸುವ ಎಲ್ಲಾ ಪ್ರಯತ್ನವನ್ನು ಬ್ರಿಟಿಷರು ಮಾಡಿದರು.

ಆಗಿನ ಗವರ್ನರ್ ಜನರಲ್ ಆಗಿದ್ದ ರಿಚಾರ್ಡ್ ಕೋಲೆವೆಲ್ಸ್ಲಿಯಿಂದ ಟಿಪ್ಪು ಸುಲ್ತಾನನ ಸಾಮಂತ ಐಗೂರು ಸೀಮೆಯ ವೆಂಕಟಾದ್ರಿನಾಯಕನನ್ನು ಸೆರೆ ಹಿಡಿಯಲು ವಿಫಲರಾದರು.

ಜಾನಪದ ಗೀತೆಗಳು ಟಿಪ್ಪುವಿನ ದಿವಾನ ಪೂರ್ಣಯ್ಯನು ನಾಯಕರನ್ನು ಸೆರೆಹಿಡಿಯಲು ಸಹಾಯ ಮಾಡಿದುದನ್ನು ಹೇಳುತ್ತವೆ 10-2-1802 ರಲ್ಲಿ ವೆಂಕಟಪ್ಪ ನಾಯಕನನ್ನು ಗಲ್ಲಿಗೇರಿಸಿದ ದಿನವೆಂದು ಹೇಳುತ್ತವೆ.

ಸುಳ್ಯದ ಮತ್ತು ಅದರ ಸುತ್ತ ಮುತ್ತದ ಪ್ರದೇಶಗಳು 1804ರವರೆಗೆ ಐಗೂರಿನ ನಾಯಕರ ಆಡಳಿತಕ್ಕೆ ಒಳಪಟ್ಟಿತ್ತು. ಸುಳ್ಯದ ಜನತೆಗೆ ಐಗೂರಿನ ನಾಯಕನನ್ನು ಗಲ್ಲಿಗೇರಿಸಿದ ಸಿಟ್ಟು ಈಗ ಕ್ರಾಂತಿಯ ರೂಪದಲ್ಲಿ ಹೊರಹೊಮ್ಮಿತೆಂದು ಹೇಳಬಹುದು. 1831ರಲ್ಲಿ ಮೈಸೂರಿನ ರಾಜಮನೆತನದ ರಾಜನನ್ನು ಪದಚ್ಯುತಿಗೊಳಿಸಿದ ಸಂಗತಿಯ ಘಟನೆ ಹುಲಿಕೊಂಡ ನಂಜಯ್ಯನಿಗೆ, ಬ್ರಿಟಿಷರ ವಿರುದ್ಧ ಹೆಚ್ಚಿನ ಪಿತೂರಿ ಹೈದರಾಬಾದ್ ಲಾಹೋರ್ ಮತ್ತು ದೆಹಲಿಯವರೆಗೆ ನಡೆದಿತ್ತು. ಕೊಡಗಿನ ರಾಜ ಚಿಕ್ಕವೀರರಾಜನನ್ನು ಪದಚ್ಯುತಿಗೊಳಿಸಲು ಬ್ರಿಟಿಷರ ಸಹಚರರಾದ ಸ್ಥಳೀಯರ ಸಹಾಯದಿಂದ ಸಾಧ್ಯವಾಯಿತು. ಚಿಕ್ಕವೀರರಾಜನು ಜನರ ಪ್ರೋತ್ಸಾದಾರವನ್ನು ಗಳಿಸಿದ್ದುದರಿಂದ ಆತನನ್ನು ಗಲ್ಲಿಗೇರಿಸುವುದರಲ್ಲಾಗಲೀ ಅಥವಾ ಸೆರೆಯಲ್ಲಿಡುವುದು ಸಾಧ್ಯವಿರಲಿಲ್ಲ. ರಾಜನನ್ನು ಉಪಾಯದಿಂದ ಬ್ರಿಟಿಷರು ಕಾಶಿಗೆ ಕರೆತಂದು ಅಲ್ಲಿ ಸ್ವಲ್ಪದಿನ ಇರಿಸಿದರು. ಈ ರೀತಿ ಮಾಡದಿದ್ದರೆ ಪ್ರಜೆಗಳು ದಂಗೆ ಎದ್ದಾರೆಂಬ ಭೀತಿ ಬ್ರಿಟಿಷರಲ್ಲಿ ಇತ್ತು. ಕೊಡಗಿನಲ್ಲಿ ಬ್ರಿಟಿಷರ ವಿರುದ್ಧ ಅಪರಂಪರನು ನಂಜಯ್ಯನೊಡನೆ ಸೇರಿ ಮಾಡಿದ ಕ್ರಾಂತಿ ತಣ್ಣಗಾಯಿತು. ವೀರಪ್ಪ ರಾಜನ ಸಂತತಿಯವರ ವಿಷಯದಲ್ಲಿ ರಾಜ್ಯದಲ್ಲಿ ದೊಡ್ಡದಾದ ಪ್ರಚಾರವಾಗಿತ್ತು, ಜನರು ಪದಚ್ಯುತಿಗೊಂಡ ರಾಜನನ್ನು ಪುನಃ ಕೊಡಗಿನ ರಾಜನನ್ನಾಗಿರಿಸಲು ಉದ್ರಿಕ್ತರಾದರು. ಅಪರಂಪರ ಮತ್ತು ನಂಜಯ್ಯನವರುಗಳಿಗೆ ಕೂಜುಗೋಡು ಮನೆತನದಲ್ಲಿ ಸರಿಯಾದ ಪ್ರೋತ್ಸಾಹ ಸಿಕ್ಕಿತು. ಆದರೆ ಪರಂಪನನ್ನು 1835ರಲ್ಲಿ ದಸ್ತಗಿರಿ ಬೈತೂರಿನಲ್ಲಿ ಆದುದರಿಂದ ಅವನ ಬದಲು ಕಲ್ಯಾಣಪ್ಪನು ಮುಂದಾಳ್ತನವನ್ನು ವಹಿಸಿದನು. ಅವನನ್ನು ಸೆ. 1836ರಲ್ಲಿ ಸೆರೆ ಹಿಡಿದರು. ಕಲ್ಯಾಣಪ್ಪನ ಜವಾಬ್ದಾರಿಕೆ ಪುಟ್ಟ ಬಸಪ್ಪನ ಮೇಲೆ ಬಿತ್ತು. ಪುಟ್ಟ ಬಸಪ್ಪನನ್ನು ಕಲ್ಯಾಣಪ್ಪನೆಂದು ನಂಜಯ್ಯ ಮತ್ತು ಇತರ ಸ್ವಾತಂತ್ರ್ಯ ಹೋರಾಟಗಾರರು ಸಾರಿದರು. ಎಲ್ಲಾ ಚಟುವಟಿಕೆಗಳು ಪೂಮಲೆ ಬೆಟ್ಟದ ಕಾಡಿನಲ್ಲಿ ನಡೆಯಿತು. ಅವರು ಸಾರ್ವಜನಿಕರ ಬೆಂಬಲ ಪಡೆದು ಮಂಗಳೂರನ್ನು ವಶಪಡಿಸುವ ತೀರ್ಮಾನವನ್ನು ಕೈಗೊಂಡರು. ಅವರು ಸುಳ್ಯದಿಂದ 1937ರ ಮಾರ್ಚ್ 30ಕ್ಕೆ 2000 ಜನರು ಆಯುಧ ಪಾಣಿಗಳೊಡನೆ ಹೊರಟು ಬೆಳ್ಳಾರೆಯಲ್ಲಿ ಸೇರಿದರು. ಅಲ್ಲಿ ಸರ್ಕಾರದ ಖಜಾನೆಯನ್ನು ವಶಪಡಿಸಿಕೊಂಡರು. ಅದೇ ದಿನ 200 ಜನ ವೀರರು ಕಾಸರಗೋಡಿಗೆ ನಡೆದು ಅದನ್ನು ಏಪ್ರಿಲ್ 2ರಂದು ವಶಪಡಿಸಿಕೊಂಡರು ಹಾಗೂ ಕುಂಬ್ಳೆ ಮತ್ತು ಮಂಜೇಶ್ವರವನ್ನು ಏಪ್ರಿಲ್ 2 ಮತ್ತು 3 ರಲ್ಲಿ ವಶಪಡಿಸಿಕೊಂಡರು. ಈ ಕ್ರಾಂತಿ ವೀರರು ಅವರ ಸ್ವಂತ ತಹಸೀಲ್‌ದಾರ ಮತ್ತು ಇತರ ಅಧಿಕಾರಿಗಳನ್ನು ನೇಮಿಸಿದರು. ಆ ರೀತಿ ನೇಮಿಸಿದ ಅಧಿಕಾರಿಗಳಿಂದ ಕಲ್ಯಾಣಪ್ಪನ ಸರ್ಕಾರಕ್ಕೆ ವಿಧೇಯರಾಗಿರುತ್ತಾರೆಂಬ ಹೇಳಿಕೆಯ ಪತ್ರಗಳನ್ನು ತೆಗೆದುಕೊಂಡರು ಹಾಗೂ ಅವರಿಗೆ ಸಂಬಳವನ್ನು ವಿತರಿಸಿದರು. ಇನ್ನೊಂದು 200ಜನರ ತಂಡವನ್ನು ಮಡಿಕೇರಿ ಕಡೆಗೆ ಕಳುಹಿಸಿದರು. ಇವರು ಬಿಸ್ಲೆಘಟ್ಟಕ್ಕಾಗಿ ಹೊರಟರು. ಈ ರೀತಿಯ ಕ್ರಾಂತಿಕಾರಕ ಪ್ರಗತಿಯ ವಿಷಯ ಕೇಳಿ ಮಾರ್ಚ್ 30ರ ರಾತ್ರಿ 161 ಸೈನಿಕರೊಡನೆ ಪುತ್ತೂರಿಗೆ ಹೋಗಿ ಮಾರಣೆ ದಿನ ಇವರನ್ನು 1200ಜನ ಸ್ವಾತಂತ್ರ್ಯ ಹೋರಾಟ ಗಾರರು ಸುತ್ತುಗಟ್ಟಿದಾಗ ಅವರು ಬಂಟವಾಳದ ಮಾರ್ಗವಾಗಿ ತಪ್ಪಿಸಿಕೊಂಡು ಏಪ್ರಿಲ್ 2 ರಂದು ಮಂಗಳೂರನ್ನು ತಲುಪಿದರು. ಮಂಗಳೂರಿಗೆ ಹಿಂತಿರುಗಿ ಬಂದಾಗ ಸ್ಥಳೀಯ ಜನರು ಕ್ರಾಂತಿವೀರರರಿಗೆ ಎಲ್ಲಾ ರೀತಿಯ ಕುಮ್ಮಕ್ಕನ್ನು ಕೊಡುತ್ತಿದ್ದಾರೆಂದು ತಿಳಿದು ಬಂದುದ್ದರಿಂದ ಖಜಾನೆಯನ್ನು ಗುಟ್ಟಿನಲ್ಲಿ ಎತ್ತಿನ ಗಾಡಿಯಲ್ಲಿ ದಂಡಿನ ಪ್ರದೇಶಕ್ಕೆ ಒಯ್ಯಲಾಯಿತು. (ಹಳೆ ದಂಡಿನ ರಸ್ತೆಯು ಈಗ ಟೆಲಿಕಮ್ಯೂನಿಕೇಶನ್ ರಸ್ತೆಯನ್ನು ಸಾಮಾನ್ಯವಾಗಿ ಹಳೆ ದಂಡಿನ ರಸ್ತೆ ಎಂದು ಊಹಿಸಲಾಗಿದೆ) ಹೆಚ್ಚಿನ ಸೈನ್ಯವು ಧಾರವಾಡ ಹೊನ್ನಾವರ ಮತ್ತು ಇತರ ಕಡೆಗಳಿಂದ ಬರುವಂತೆ ಕೇಳಿ ಕೊಳ್ಳಲಾಯಿತು. ಏಪ್ರಿಲ್ 4ನೇ ತಾರೀಖಿನಂದು ರಾತ್ರಿ ಗುಟ್ಟಾಗಿ ಸಭೆ ಸೇರಿ ಬ್ರಿಟಿಷ್ ಪ್ರಜೆಗಳು, ಸೈನಿಕರು, ಕುಟುಂಬದವರು ಮಂಗಳೂರಿನಿಂದ ಕಣ್ಣಾನೂರಿಗೆ ತಲೆ ತಪ್ಪಿಸಿಕೊಂಡು ಹೋಗುವಂತೆ ತೀರ್ಮಾನವಾಯಿತು.

ಇದೇ ಸಮಯದಲ್ಲಿ ಪುಟ್ಟ ಬಸಪ್ಪನ ಸೈನ್ಯವು ಕೊಪ್ಪದಿಂದ ಪುತ್ತೂರು ಮಾಣಿನಂದಾವರ ಮಾರ್ಗವಾಗಿ ಮಂಗಳೂರನ್ನು ತಲಪಿತು.

***ಚರಿತ್ರೆಯನ್ನು ಬೇರೆ ಬರೆಯಬೇಕು. ಸ್ವಾತಂತ್ರ್ಯ ಹೋರಾಟಗಾರರನ್ನು ಪುಂಡರು ಮತ್ತು ದಂಗೆಕೋರರೆಂದು ಹೀನರೀತಿಯಲ್ಲಿ ಕರೆದುದನ್ನು ಸರಿಪಡಿಸಬೇಕು. ನ್ಯಾಯ ದೊರಕುವುದಕ್ಕೆ ತಡವಾದರೆ ನ್ಯಾಯವೇ ಇಲ್ಲ ವಾಗವುದು ಇದು ಎಂದಿಗೂ ಆಗಬಾರದು.***

ನಂದಾವರದ ರಾಜ ಲಕ್ಷ್ಮಣ ಬಂಗರಸರಿಂದ ಪೂರ್ಣ ಸಹಕಾರ ಸಿಕ್ಕಿತು ಹಾಗೂ ಅವರು ಕ್ರಾಂತಿ ವೀರರೊಡನೆ ಕೂಡಿ ಮಂಗಳೂರಿನ ಈಗಿನ ಲೈಟ್ ಹೌಸ್‌ಗೆ ಹೋದರು. ಈಗಲೂ ಅಲ್ಲಿರುವ ಗುಡ್ಡೆಯನ್ನು ಬಾವುಟ ಗುಡ್ಡ ಎಂದು ಕರೆಯುತ್ತಾರೆ. ಆ ಗುಡ್ಡೆಯ ಮೇಲೆ ಹಾರುತ್ತಿದ್ದ ಬ್ರಿಟಿಷರ ಧ್ವಜವಾದ ಯೂನಿಯನ್ ಜಾಕನ್ನು ಕೆಳಗಿಳಿಸಿ ತಮ್ಮ ಬಾವುಟವನ್ನು ಹಾರಿಸಿದರು. ಮಂಗಳೂರು ನಗರ ಪೂರ್ತಿಯಾಗಿ ಸ್ವಾತಂತ್ರ್ಯ ಹೋರಾಟಗಾರರ ಅಧೀನವಾಗಿ ಬ್ರಿಟಿಷ್ ಪ್ರಜೆಗಳನ್ನು ದಂಡು

*To ealize the value of 1 week, ask the weekly editor.*

ಪ್ರದೇಶದಲ್ಲಿ ಸೇರಿಸಲಾಯಿತು. ಏಪ್ರಿಲ್ 6ನೇ ತಾರೀಖಿನ ಮಧ್ಯಾಹ್ನದ ಹೊತ್ತಿಗೆ ಹೊನ್ನಾವರದಿಂದ 60 ಜನ ಸೈನಿಕರು ಕೋವಿ ಮತ್ತು ಇನ್ನಿತರ ಆಯುಧಗಳೊಡನೆ ಬಂದು ಬ್ರಿಟಿಷ್ ಪ್ರಜೆಗಳನ್ನು ಕಣ್ಣಾನೂರಿನಲ್ಲಿ ಸುರಕ್ಷಿತವಾಗಿರಲು ಬಹಳ ಕಷ್ಟಪಟ್ಟು ಕರೆದುಕೊಂಡು ಹೋಗಲಾಯಿತು. ಹೊಸದಾಗಿ ಬಂದ ಬ್ರಿಟಿಷ್ ಸೈನಿಕರಿಗೂ ಸ್ವಾತಂತ್ರ್ಯ ಹೋರಾಟಗಾರರಿಗೂ ಏಪ್ರಿಲ್ 6 ಮತ್ತು 7ರಲ್ಲಿ ಭೀಕರ ಕಾಳಗ ನಡೆಯಿತು. ಏಪ್ರಿಲ್ 10 ರಂದು ಸ್ಥಳೀಯಕ್ರಾಂತಿ ವೀರರಿಂದ ಕೊನೆಯ ಹೋರಾಟ ನಡೆಯಿತು. ಬ್ರಿಟಿಷ್ ಆಡಳಿತಗಾರರು ತಮ್ಮ ಒಗ್ಗಟ್ಟನ್ನು ಮುರಿದು ಆಳುವ (ಡಿವೈಡ್ ಅಂಡ್ ರೂಲ್) ತಂತ್ರವನ್ನು ಉಪಯೋಗಿಸಿ ಕ್ರೂರವಾಗಿ ಸ್ವಾತಂತ್ರ್ಯ ಹೋರಾಟಗಾರರನ್ನು ಸದೆಬಡಿದು ಏಪ್ರಿಲ್ 10 ರಂದು ಅಮರಕ್ರಾಂತಿಯ ಹೋರಾಟವನ್ನು ಅಂತ್ಯ ಗೊಳಿಸಿದರು. 4ಜನ ಕ್ರಾಂತಿಕಾರರನ್ನು ಸಾರ್ವಜನಿಕರ ಎದುರಿನಲ್ಲಿಯೇ ಗಲ್ಲಿಗೇರಿಸಿದರು. ಪಾಣೆಮಂಗಳೂರಿನಲ್ಲಿ ನಂದಾವರದ ಲಕ್ಷ್ಮಿಬಂಗರಸರ ಕುಟುಂಬದವರನ್ನೆಲ್ಲಾ ಮೇ 27 ರಲ್ಲಿ ತುಂಡರಿಸಲಾಯಿತು. ಪುಟ್ಟ ಬಸಪ್ಪನನ್ನು ಜೂನ್ 11ರಲ್ಲಿ ಬಿಕ್ರನ ಕಟ್ಟೆಯಲ್ಲಿ ಗಲ್ಲಿಗೇರಿಸಲಾಯಿತು. ಈ ರೀತಿ 1837 ಕ್ರಾಂತಿ ಅಂತ್ಯಗೊಂಡಿತು. 4 ಜನ ಕ್ರಾಂತಿಗಾರರನ್ನು ಸಾರ್ವಜನಿಕರ ಎದುರಿನಲ್ಲಿಯೇ ಪಾಸಿಗೆ ಕೊಟ್ಟರೂ ಪಾಣೆಮಂಗಳೂರಿನಲ್ಲಿ ನಂದಾವರದ ರಾಜ ಲಕ್ಷ್ಮಿಬಂಗರಸರ ಕುಟುಂಬವನ್ನು ಮೇ 27ರಲ್ಲಿ ಕತ್ತರಿಸಿ ಹಾಕಲಾಯಿತು. ಪುಟ್ಟ ಬಸಪ್ಪನನ್ನು ಬಿಕ್ರನಕಟ್ಟೆಯಲ್ಲಿ ಜೂನ್ 11ರಂದುಗಲ್ಲಿಗೇರಿಸ ಲಾಯಿತು. ಈ ರೀತಿ 1837ರ ಕ್ರಾಂತಿ ಅಂತ್ಯವಾಯಿತು.

ಅಮರ ಕ್ರಾಂತಿ ಉತ್ಸವವನ್ನು ಜಿಲ್ಲೆಯ ಜನರ ಭಾವನೆಗಳನ್ನು ಉದ್ರೇಕಿಸುವುದಕ್ಕೇ ಪ್ರತೀವರ್ಷ ಜಾತಾದ ರೀತಿಯಲ್ಲಿ ಆಚರಿಸುವಂತೆ ಅಮರ ಕ್ರಾಂತಿ ಸಮಿತಿ ತೀರ್ಮಾನಿಸಿದೆ.

ಪ್ರಪ್ರಥಮ ಉತ್ಸವವನ್ನು ಜಾತಾರೂಪದಲ್ಲಿ ಆಚರಿಸಲಾಯಿತು. ಸುಳ್ಯದಿಂದ ಪ್ರಾರಂಭವಾಗಿ 1837ರಲ್ಲಿ ಸ್ವಾತಂತ್ರ್ಯ ಸಂಗ್ರಾಮದ ವೀರ ಸಾಗಾಣಿಕೆಯ ದಾರಿಯಲ್ಲಿ ಸುಳ್ಯದಿಂದ ಮಂಗಳೂರಿನವರೆಗೆ ಸಾಗಿದರು. ಇವರಲ್ಲಿ ಗಂಡಸರು ಹೆಂಗಸರು 13 ವಯಸ್ಸಿಗಿಂತ ಚಿಕ್ಕಮಕ್ಕಳನ್ನೊಳಗೊಂಡು ಈ ಜಾತಾದಲ್ಲಿ ಪಾಲ್ಗೊಂಡಿದ್ದರು. ಬೀದಿ ನಾಟಕವನ್ನು ನೀನಾಸಮ್ ರಂಗಮಂದಿರದ ಪದವೀಧರ ಜೀವನರಾಮ್‌ರವರ ಮಾರ್ಗದರ್ಶನದಲ್ಲಿ ಅಭಿನಯಿಸಲಾಯಿತು. ಜಾತಾವು 1837 ರಲ್ಲಿ ಕ್ರಾಂತಿವೀರರು ನಡೆದ ದಾರಿಯಲ್ಲಿಯೇ ಸುಳ್ಯದಿಂದ ಬೆಳ್ಳಾರೆ, ಕುಮ್ರ ಪುತ್ತೂರಿನಲ್ಲಿ ಮಾಣಿನಂದಾವರ ಜೋಡುಮಾರ್ಗದ ಮೂಲಕವಾಗಿ ಕಾಲುನಡಿಗೆಯಲ್ಲೇ ಮಾರ್ಚ್ 30 ರಿಂದ ಏಪ್ರಿಲ್ 5 ರವರೆಗೆ ಸಾಗಿ ಮಂಗಳೂರನ್ನು ತಲುಪಿತು. ಅಲ್ಲಿ ಸೆಯಿಂಟ್ ಲೋಸಿಸ್ ಕಾಲೇಜಿನ ಮೈದಾನದ ಲೈಟ್ ಹೌಸಿನ ಬಾವುಟ ಗುಡ್ಡೆ ಬೆಟ್ಟದಲ್ಲಿ ಸೇರಿತು. ಆ ಸಮುದಾಯದಲ್ಲಿ ದಕ್ಷಣ ಕನ್ನಡ ಜಿಲ್ಲೆಯ ಉಸ್ತುವಾರಿ ಸಚಿವ ಹಾಗೂ ರಾಜ್ಯ ಕೈಗಾರಿಕಾ ಮಂತ್ರಿ ಶ್ರೀ ಬಿ.ಎ. ಮೊಹಿದೀನ್. ಹಿಂದಿನ ಮುಖ್ಯ ಮಂತ್ರಿ ಮತ್ತು ಕಾರ್ಕಳದ ಯಂ.ಎಲ್.ಎ. ಶ್ರೀ ವೀರಪ್ಪಮೊಯ್ಲಿ ಹಿಂದಿನ ಸಚಿವರಾದ ಬ್ಲಾಸಿಯಸ್ ಡಿಸೋಜ, ಸುರತ್ಕಲ್ಲಿನ ಯಂ.ಎಲ್.ಎ. ಕುಂಬ್ಳೆಸುಂದರರಾವ್, ಯಂ.ಎಲ್.ಸಿ. ಶ್ರೀ ಅಭಯಚಂದ್ರ, ಸ್ವಾತಂತ್ರ್ಯ ಹೋರಾಟಗಾರ ಡಾ|| ಸಂಜೀನಾಥ್ ಐತಾಳ್ ಮತ್ತು ಅಮ್ಮೆಂಬಳ ಬಾಳಪ್ಪ ಮೊದಲಾದವರು ಉಪಸ್ಥಿರಿದ್ದರು. ಮಂಗಳೂರಿನ ವಿಶ್ವವಿದ್ಯಾಲಯದಲ್ಲಿ ಈ ವಿಷಯದಲ್ಲಿ ಒಂದು ಪೀಠವನ್ನು ಸ್ಥಾಪಿಸುವ ಬಗ್ಗೆ ಆಶ್ವಾಸನೆ ನೀಡಲಾಯಿತು. ಈ ಪೀಠದ ಮುಖಾಂತರ ಅಮರ ಕ್ರಾಂತಿಯ ವಿಷಯದಲ್ಲಿ ಸಂಶೋಧನೆ ನಡೆಸುವಂತೆ ಕರ್ನಾಟಕ ವಿಧಾನ ಸಭೆಯಲ್ಲಿ ಪ್ರಸ್ತಾಪಿಸು ವಂತೆಯೂ ತೀರ್ಮಾನಿಸಲಾಯಿತು. ರಾಜಕೀಯ ವ್ಯಕ್ತಿಗಳ ಆಶ್ವಾಸನೆ ಮುಂದು ಹೋಗುವ ಸಂದರ್ಭವಾದರೂ ಈ ವಿಷಯದಲ್ಲಿ ಹೆಚ್ಚಿನ ಆಶೆ ಇಡಬಹುದೆಂದು ಅನಿಸುತ್ತದೆ. 1998ನೇ ಏಪ್ರಿಲ್ 5 ರಂದು ಬೆಳಿಗ್ಗೆ ಉತ್ಸವ ಸಮಿತಿಯ ಅಧ್ಯಕ್ಷರಾದ ಶ್ರೀ ಯನ್.ಯಸ್. ದೇವಿಪ್ರಸಾದರವರಿಂದ ಸೆಯಿಂಟ್ ಅಲೋ ಕಾಲೇಜಿನಲ್ಲಿ ಬಾವುಟವನ್ನು ಹಾರಿಸಿ ಆಶಾಂಕುರದ ಪ್ರಾರಂಭವಾಯಿತು. ಚರಿತ್ರೆಯನ್ನು ಪುನಃ ಬರೆದು ಸ್ವಾತಂತ್ರ್ಯ ಸಂಗ್ರಾಮದ ವೀರರನ್ನು ಪುಂಡರು ಮತ್ತು ದಂಗೆಕೋರರೆಂದು ಹೀನಾಯವಾಗಿ ಕರೆದಿರುವುದನ್ನು ಸರಿಪಡಿಸಬೇಕು.

ಅಮರ ಉತ್ಸವದ ಬಗ್ಗೆ ನಾಲ್ಕು ಚಿತ್ರಗಳನ್ನು ಪ್ರಕಟಿಸಲಾಗಿದೆ.

1. ಸಮಾರಂಭದಲ್ಲಿ ವೇದಿಕೆಯ ಮೇಲೆ ಆಸೀನರಾಗಿರುವ ಗಣ್ಯರ ಚಿತ್ರ
2. 1998ರ ಏಪ್ರಿಲ್ 5ರಂದು ಶ್ರೀ ಯನ್.ಯಸ್. ದೇವಿಪ್ರಸಾದರವರು ಬಾವುಟವನ್ನು ಹಾರಿಸುವ ಚಿತ್ರ.
3. ಸಮಿತಿಯ ಕಾರ್ಯದರ್ಶಿ ಶ್ರೀ ಜನಾರ್ಧನ ಕಾನಕೂರ್ ರವರು ಬೀದಿ ನಾಟಕದಲ್ಲಿ ಭಾಗವಹಿಸಿದ್ದ ಚಿತ್ರ.
4. ಶ್ರೀ ಸುಳ್ಯದ ಜೀವನ ನೀರ್ದೇಶಿಸಿದ ಬೀದಿನಾಟಕದ ಒಂದು ದೃಷ್ಯ.

## ಗ್ರಂಥ ಋಣ

I. ಶ್ರೀ ಯಂ. ಲೆವಿನ್ ಮುಖ್ಯ ಕಲೆಕ್ಟರ್ ಕೆನರ್ ಇವರ ಪುಟ್ಟ ಬಸಪ್ಪ ಮತ್ತು ಇತರರ 1837ರಲ್ಲಿ ಜಿಲ್ಲೆಯಲ್ಲಿನ ದಂಗೆಯ ವಿಷಯ ಬರೆದ ವರದಿ (2) ದಿ|| ಡಿ. ಯನ್. ಕೃಷ್ಣಯ್ಯನವರ ಕೊಡಗಿನ ಇತಿಹಾಸ ತೀ.ತಾ. ಶರ್ಮರವರ ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ ಗ್ರಂಥ ಮೂಲಗಳಿಂದ ಎತ್ತಿ ತೆಗೆದು ಉದ್ಧರಿಸಿದ ಭಾಗಗಳು.

1837ರ ನವೆಂಬರ್ 30ರಂದು ಕೆನರ ಜಿಲ್ಲೆಯ ಮುಖ್ಯ ಕಲೆಕ್ಟರ್ ಆಗಿದ್ದ ಲೆವಿನ್ ಮೇಜರ್ ಜನರಲ್ ವಿಗೋರೆಕ್ಸ್ ಮತ್ತು ಚಾರ್ಲ್ಸ್ ರೋಬರ್ಟ್ ಕಬ್ಬನ್‌ಗೆ ಬರೆದ ವರದಿಯ ಗ್ರಂಥಮೂಲಗಳಿಂದ ಎತ್ತಿದ ಭಾಗಗಳು.

II. ನಾವು ಪುತ್ತೂರಿಗೆ 3ಯಾ 4ಮೈಲುಗಳ ದೂರ ಇರುವಾಗ ದಂಗೆಕಾರರು ರಾತ್ರಿಯ ಕತ್ತಲೆಯಲ್ಲಿ ಬೆಂಕಿಯ ಹೊತ್ತೆಯ ಸಹಾಯದಿಂದ ಪುತ್ತೂರಿನ ಕಡೆ ಕವಾಯ್ ಮಾಡಿಕೊಂಡು ಹೋಗುವುದು ಕಾಣಿಸುತ್ತಿತ್ತು. ಅವರಿಗೆ ನಮ್ಮ ಆಗಮನ ಅನಿರೀಕ್ಷಿತವಾಗಿತ್ತು. 2 ಮೈಲುಗಳ ಅಂತರದಲ್ಲಿ ಕರಿಗತ್ತಲಿನಲ್ಲಿ ನಾವು ಏನುಮಾಡಬೇಕೆಂದು ತೋಚದಾಯಿತು.

ಜೀವನ ಒಂದು ಕನಸು — ವಿವೇಚಿಸು.

10 ನೇ ಪುಟಕ್ಕೆ

# "ಕಾಶಿ"ಖ್ಯಾತಿಯ "ಮದೆ ಮಾದೂರಪ್ಪ" ದೇವಾಲಯ ಶ್ರದ್ಧೆ, ಸಂಭ್ರಮಗಳ ಉಮಾಮಹೇಶ್ವರ ಜಾತ್ರೋತ್ಸವ


"ಕಾಶಿ"ಖ್ಯಾತಿಯ "ಮದೆ ಮಾದೂರಪ್ಪ" ದೇವಾಲಯ ಉಮಾಮಹೇಶ್ವರ ಜಾತ್ರೋತ್ಸವ ಮಾರ್ಚ್ 9 ರಿಂದ 12 ರ ತನಕ ನಡೆಯಿತು

ಮಡಿಕೇರಿಯಿಂದ ಮಂಗಳೂರಿನ ಹೆದ್ದಾರಿಯ ಹಾವಿನ ಹಾದಿಯಲ್ಲಿ ಕೇವಲ 9ಕಿ.ಮೀ. ಸಾಗಿದರೆ ನಿಸರ್ಗ ರಮಣೀಯ ಹಸಿರಿನ ಗಿರಿಶ್ರೇಣಿಗಳ ಮಧ್ಯೆ ಮದೆನಾಡು ಗ್ರಾಮ ಎದುರುಗೊಳ್ಳುತ್ತದೆ. ಅಲ್ಲಿಂದ ಮುಂದೆ ಬೆಟ್ಟತ್ತೂರಿನ ಕಡಿದಾದ ಹಾದಿಯಲ್ಲಿ ಮೂರು ಕಿ.ಮೀ. ಕ್ರಮಿಸಿದರೆ ಕಾಶಿ ಖ್ಯಾತಿಯ ಮದೆ ಮಾದೂರಪ್ಪನ ಸುಂದರ ದೇವಮಂದಿರ ಎದುರುಗೊಳ್ಳುತ್ತದೆ. ಈ ದೇವಾಲಯ ಮುಖಮಂಟಪ, ಗರ್ಭಗುಡಿಗಳನ್ನೊಳಗೊಂಡಿದ್ದು, ನೋಡಲು ಚಿಕ್ಕದಾಗಿ ಕಂಡರೂ ಸಹ ಒಂದೇ ಪೀಠದ ಮೇಲೆ ಶಿವ, ಪಾರ್ವತಿ, ಗಣಪತಿಯ ಪ್ರತಿಷ್ಠಾಪನೆಗೊಂಡಿರುವುದು ಇದರ ವಿಶಿಷ್ಟತೆಯಾಗಿದೆ. ಈ ವಿಶಿಷ್ಟತೆಯೇ ದೇವಾಲಯಕ್ಕೆ ಕಾಶಿಯ ಖ್ಯಾತಿಯನ್ನು ತಂದುಕೊಟ್ಟಿದ್ದು, ಭಕ್ತರನ್ನು ಸೂಜಿಗಲ್ಲಿನಂತೆ ತನ್ನತ್ತ ಸೆಳೆಯುವಲ್ಲಿ ಯಶಸ್ವಿಯಾಗಿದೆ. ಮಾರ್ಚ್ 9 ರಿಂದ 12ರ ವರೆಗೆ ಈ ದೇವಾಲಯದಲ್ಲಿ ನಡೆಯುವ ವಾರ್ಷಿಕ ಉತ್ಸವದಲ್ಲಿ ಸಹಸ್ರಾರು ಭಕ್ತರು ಭಕ್ತಿ ಸಾಗರದಲ್ಲಿ ಮಿಂದು ಪುಳಕಿತಗೊಳ್ಳುತ್ತಾರೆ.

ಕೊಡಗಿನ ಪ್ರತಿ ಊರಿನ ದೇವಾಲಯಗಳ ದೇವತೆಗಳ ಹಿಂದೆ ಒಂದೊಂದು ಕಥೆಯಿದೆ. ಮದೆ ಮಾದೂರಪ್ಪ ದೇವರ ಪ್ರತಿಷ್ಠಾನದ ಬಗ್ಗೆ ಚಾಲ್ತಿಯಲ್ಲಿರುವ ಹಲವು ಕಥೆಗಳ ಸಾರ ಹೀಗಿದೆ.

ಕೇರಳದಿಂದ ಕೊಡಗಿಗೆ ಆಗಮಿಸಿ ನೆಲೆನಿಂತ ಇಗ್ಗುತಪ್ಪ, ಕೋಪಟ್ಟಿಯಪ್ಪ, ಪಾಲೂರಪ್ಪ, ಚಿನ್ನತಪ್ಪ ಮೊದಲಾದ ದೇವತೆಗಳ ಪೈಕಿ ಮಾದೂರಪ್ಪ ಒಬ್ಬನಾಗಿದ್ದು, ಎಲ್ಲಾರೂ ಒಂದೊಂದು ಊರಿನಲ್ಲಿ ನೆಲೆಗೊಂಡ ಬಳಿಕ ಮಾದೂರಪ್ಪ ಎಲ್ಲೂ ನೆಲೆಯೂರದೆ ಪಶ್ಚಿಮ ಕೊಡಗಿನ ಕಡೆ ಸಾಗಿ ದೇವರಕೊಲ್ಲಿಯನ್ನು ತಲುಪಿ, ಅಲ್ಲಿ ಕೆಲವು ಕಾಲ ತಂಗಿದರು. ಇಂದಿಗೂ ಆ ಸ್ಥಳವು ಮದೆ ಗ್ರಾಮಸ್ಥರಿಗೆ ಪೂಜ್ಯಸ್ಥಳವಾಗಿದೆ. ಆದರೆ ಆ ಪ್ರದೇಶವು ತಗ್ಗು ಪ್ರದೇಶವಾದುದರಿಂದ, ತನಗೆ ಸೂಕ್ತ ಸ್ಥಳವನ್ನು ಪಡೆಯುವುದಕ್ಕಾಗಿ ಮೇಲೆ ಬಂದಾಗ ಈಗಿನ 'ಈಶ್ವರಕಲ್ಲು' ಎದುರುಗೊಂಡು ಅದರ ಮೇಲಿನಿಂದ ನಿಂತು ನೋಡಿದಾಗ ಕೆಳಗಿನ ವಿಶಾಲ ಪ್ರದೇಶ ಕಂಡು ಆ ಕಡೆಗೆ ಸಾಗಿ 'ಮಲೆಮಾವು' ಎಂಬಲ್ಲಿ ನೆಲೆಗೊಂಡರು. ಇಲ್ಲಿ ಹಲವು ಕಾಲ ಮಾದೂರಪ್ಪ ಪತ್ನಿ ಪಾರ್ವತಿ ಮತ್ತು ಸುತ್ತ ಗಣಪತಿಯೊಡನೆ ನೆಲೆಸಿದ್ದರು. ಈ ಪ್ರದೇಶ ಈಗ ನಿಸರ್ಗ ನಿರ್ಮಿತ ದೇವಾಲಯವಾಗಿದ್ದು, ಮದೆನಾಡು ಉತ್ಸವದ ಕೇಂದ್ರ ಸ್ಥಳವೂ ಆಗಿದೆ.

ಹೀಗೆ ಕೆಲವು ಕಾಲ ತಂಗಿದ ಬಳಿಕ ಮಾದೂರಪ್ಪ, ತನ್ನ ಭಕ್ತರನ್ನು ಅನುಗ್ರಹಿಸುವುದಕ್ಕಾಗಿ 'ಮಲೆಮಾವು'ನಿಂದ



ಒಂದೇ ಪೀಠದಲ್ಲಿ ಪೂಜಿಸಲ್ಪಡುತ್ತಿರುವ ಉಮಾಮಹೇಶ್ವರ ವಿಗ್ರಹ

ತಿರುವಬಾಣೆಗಾಗಿ ಇಳಿದು, ಕಿಮ್ಮುಡಿರ ಮನೆಗಾಗಿ ಸಾಗಿ, ತೋಟ ತಮ್ಮಂಡ ಮನೆಯನ್ನು ಹಾದು ಹೋಗಲು, ಇತ್ತಕಡೆ ಪಾರ್ವತಿ, ಗಣಪತಿಯರು, ಮಾದೂರಪ್ಪನನ್ನು (ಈಶ್ವರ) ಕಾಣದೆ ಕಂಗಾಲಾಗಿ, ಹುಡುಕುತ್ತಾ ಬೆಳಕುಮಾನಿಗಾಗಿ ಹಾದು ತೋಟ ತಮ್ಮಂಡ ಮನೆಯ ಬಳಿ ಬಂದಾಗ ಪರಸ್ಪರ ಭೇಟಿಯಾಗಿ, ತಮ್ಮ ಭಕ್ತರನ್ನು ಅನುಗ್ರಹಿಸಲು ಇದೇ ಸೂಕ್ತ ಸ್ಥಳವೆಂದು ಮನಗಂಡು ಅಲ್ಲಿಯೇ ನೆಲೆಗೊಂಡಳು. ಅಂದಿನಿಂದ ಇಂದಿನವರೆಗೂ ಭಕ್ತರ ಸಂಕಷ್ಟಗಳನ್ನು ಪರಿಹರಿಸುತ್ತಾ, ಅವರ ಇಷ್ಟಾರ್ಥಗಳನ್ನು ನೆರವೇರಿಸುತ್ತಾ, ಪ್ರತಿಯೊಬ್ಬನ ಹೃದಯದಲ್ಲಿ ಭಕ್ತಿಯ ಸಿಂಚನಗೈಯ್ಯುತ್ತಿದ್ದಾರೆ. ಅದೇ ಇಂದಿನ ಪ್ರಸಿದ್ಧ ಮದೆ ಮಾದೂರಪ್ಪ ದೇವಾಲಯವಾಗಿದೆ. ಇಲ್ಲಿ ಪೂಜೆ ಸಲ್ಲಿಸಿದರೆ ಕಾಶಿಯಲ್ಲಿ ಪೂಜೆ ಸಲ್ಲಿಸಿದಷ್ಟೇ ಪುಣ್ಯ ಲಭಿಸುತ್ತದೆಂಬುದು ಅನುಭವಿಗಳ ಮಾತಾಗಿದೆ.

ಈ ದೇವರ ಉತ್ಸವವು ಭಾರೀ ಶುದ್ಧ ಮುದ್ರಿಕೆಯಿಂದ, ಶ್ರದ್ಧಾಭಕ್ತಿಯಿಂದ ಜರುಗುತ್ತದೆ. ಪ್ರತಿವರ್ಷವೂ ಫೆಬ್ರವರಿ 24ರಂದು ಕಟ್ಟು (ನಿಯಮ)ಬೀಳುತ್ತದೆ. ಕಟ್ಟು ಬಿದ್ದ ಮೇಲೆ ಊರಿನಲ್ಲಿ ಯಾವುದೇ ಪ್ರಾಣಹಾನಿ ಮಾಡಬಾರದು. ಮನೆಗಳನ್ನು ಶುದ್ಧವಾಗಿಡತಕ್ಕದ್ದು. ಊಟದಲ್ಲೂ ಅತೀ ಸರಳ ವಿಧಾನವನ್ನೇ ಅನುಸರಿಸಬೇಕು. ಮಾರ್ಚ್ 9 ರೊಳಗೆ ದೇವಸ್ಥಾನ, ಬೆಳಕುಮಾನಿ, ಮಲೆಮಾವು ಸ್ಥಳಗಳನ್ನು ಸುಣ್ಣಬಣ್ಣಗಳಿಂದ ಶೃಂಗರಿಸಲಾಗುತ್ತದೆ. ಮಾರ್ಚ್9ರ ರಾತ್ರಿ ದೇವಾಲಯದಿಂದ ದೇವರ ಮೂರ್ತಿಯನ್ನು ಹೊತ್ತು ಚಂಡೆ ಮದ್ದಳೆಗಳೊಂದಿಗೆ, ಹೊತ್ತೆಸೂಟೆಯ ಬೆಳಕಿನೊಂದಿಗೆ, ಬೆಳಕುಮಾನಿಯನ್ನು ಹಾದು ಮಲೆಮಾವು ಸೇರಲಾಗುತ್ತದೆ. ಮಾರ್ಚ್ 10ರ ಬೆಳಗಿನ ಜಾವ ಬೆಳಕುಮಾನಿಯ ಬೆಳಕಿನ ಕಂಬದ ಸುತ್ತ ನಡೆಯುವ 'ಬೊಳಕಾಟ' ನೃತ್ಯ ಮನಮೋಹಕವಾಗಿರುತ್ತದೆ. ಬಿಳಿ ಕುಪ್ಪಸದಟ್ಟಿಯ ಸಮವಸ್ತ್ರ ಧರಿಸಿ, ತಕ್ಕ ಮುಖ್ಯಸ್ಥರು, ಊರಿನವರೂ, ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕಿ ಆಡುವ ಈ ನೃತ್ಯ ನಿಜಕ್ಕೂ ಹೆಮ್ಮೆಯ

*To Realize the value of 1 Day ask a Daily wage earner*

ಹೊಂದಾಣಿಕೆಯ, ಸಂಸ್ಕೃತಿಯ, ಸಂಘಟನೆಯ ಸಂಕೇತವನ್ನು ಸಾರುತ್ತದೆ. ಅದೇ ದಿನ ಮಧ್ಯಾಹ್ನದ ನಂತರ ಮಲೆಮಾವಿನಲ್ಲಿ ದೇವರ ಉತ್ಸವ ನಡೆಯಲಿದೆ. ಇದು ಅತ್ಯಂತ ಮಹತ್ವದ ಘಟ್ಟವಾಗಿದ್ದು, ಅಲ್ಲಿಗೆ ಹೆಚ್ಚಿವ ಸಂಖ್ಯೆಯಲ್ಲಿ ಭಕ್ತರು ಸೇರುತ್ತಾರೆ. ಆ ದಿನದ ಮತ್ತೊಂದು ವಿಶಿಷ್ಟತೆಯೆಂದರೆ ಅಂದು ಬೆಳಿಗ್ಗೆ ಎಲ್ಲರೂ ತಮ್ಮ ಮನೆಯಲ್ಲಿ 'ಪಟ್ನಿ'ಯನ್ನು ಆಚರಿಸುತ್ತಾರೆ. ಊರಿನ ಅರ್ಧಭಾಗದ ಜನ ತಾವೇ ಕುಟ್ಟಿ ತಯಾರಿಸಿದ ಅವಲಕ್ಕಿಯನ್ನು ಸೇವಿಸಿದರೆ, ಉಳಿದ ಗ್ರಾಮಸ್ಥರು ಅಕ್ಕಿಯನ್ನು ಕುಟ್ಟಿ ತಯಾರಿಸಿದ ದೋಸೆಯ ಫಲಹಾರವನ್ನು ಸೇವಿಸುತ್ತಾರೆ. ಅವಲಕ್ಕಿ ಸೇವಿಸುವವರನ್ನು 'ಅಮ್ಮಂಗೇರಿ' ಯವರು ಎಂದು ಕರೆಯಲಾಗುತ್ತದೆ. ಇವರು ಪಾರ್ವತಿ (ಅಮ್ಮ) ಬಂದ ದಾರಿಯಲ್ಲಿ ಮಲೆಮಾವು ಸೇರಿ ಹಿಂದಿರುಗುತ್ತಾರೆ. ದೋಸೆ ಸೇವಿಸುವವರನ್ನು 'ಚೀಪೂರು' ಕೇರಿಯವರೆಂದು ಕರೆಯಲಾಗಿದ್ದು, ಇವರು ಮಾದೂರಪ್ಪಬಂದ ದಾರಿಯಲ್ಲಿ 'ಎತ್ತಿನಾಟ'ದೊಡನೆ ಮಲೆಮಾವಿಗೆ ಬಂದು ಹಿಂದಿರುಗುತ್ತಾರೆ.

ಮಾರ್ಚ್ 11ರಂದು ದೇವರಮೂರ್ತಿಯು ಮಲೆಮಾವಿನಿಂದ ಇಳಿದು ಜಳಕಮಾಡಿ, ಬೆಳಕುಮಾನಿಯಲ್ಲಿ ಭಕ್ತರಿಗೆ ದರುಶನ ನೀಡಿ, ದೇವಾಲಯಕ್ಕೆ ಪ್ರದಕ್ಷಿಣೆ ಬಂದು ಭಕ್ತರನ್ನು ಹರಸಿ, ಗರ್ಭಗುಡಿಯನ್ನು ಸೇರಿ ಮಾಚ್12ರಂದು 'ಶುದ್ಧ ಕಲಶ'ನಡೆಯಿತು. ಅಂದು ಎಲ್ಲರೂ ದೇವರನ್ನು ಸಮೂಹಾರಾಧನೆ ಮಾಡಿ ದೇವರ ಪ್ರಸಾದವನ್ನು ಸ್ವೀಕರಿಸಿ ಕೃತಾರ್ಥರಾದರು.

ಹೀಗೆ ಭಾರೀ ವಿಜೃಂಭಣೆಯಿಂದ ಭಕ್ತಿಯ ಉನ್ಮಾದತೆ ಯೊಂದಿಗೆ ನಾಲ್ಕು ದಿನಗಳ ಕಾಲ ಉತ್ಸವ ಕೊನೆಗೊಂಡರೂ ಭಕ್ತರ ಹೃದಯದ ಭಕ್ತಿಯ ಮೆಲುಕು ಚಿರಂತನವಾಗಿರುತ್ತದೆ. ಈ ಹಬ್ಬಕ್ಕೆ ಹೊಂದಿಕೊಂಡಂತೆಯೇ ನಡೆಯುವ ಬೊಳ್ಳಾಟ, ತೆರೆಹಬ್ಬ, ಮೇಲೇರಿ ಹಬ್ಬಗಳು ಪ್ರತಿಯೊಬ್ಬನನ್ನು ಭಕ್ತಿಯ ಗುಂಗಿನಲ್ಲೇ ಮುನ್ನಡೆಸಲು ಸಹಕಾರಿಯಾಗಿದೆಯಲ್ಲದೆ, ಭಕ್ತಿಯ ಸೆಲೆಯನ್ನು ಜೀವಂತವಾಗಿರಿಸಿವೆ.

— ಬರಹ : ಪಟ್ಟಡ ಶಿವಕುಮಾರ್

---

8 ನೇ ಪುಟದಿಂದ

3ನೇ ದಿನ ಪುತ್ತೂರಿನ ಸುತ್ತಮುತ್ತಲು ಜನರ ಜಮಾವಣೆ ಆಗುವುದಕ್ಕೆ ಪ್ರಾರಂಭವಾಯಿತು. ಇವರಲ್ಲಿ ಆಯುಧ ಹಿಡಿದವರೂ ಆಯುಧ ಇಲ್ಲದವರು ಇದ್ದರು. ಕತ್ತಲೆಯಲ್ಲಿ ಎಷ್ಟು ಜನರಿದ್ದರು ಎಂಬುದಾಗಿ ಗೊತ್ತು ಹಚ್ಚಲಾಗುತ್ತಿರಲಿಲ್ಲ. ಆದರೆ ದೊಡ್ಡ ಸಂಖ್ಯೆಯಲ್ಲಿ ಸರ್ಕಾರವನ್ನು ವಿರೋಧಿಸುತ್ತಿದ್ದಾರೆಂದು ಹೇಳಬಹುದು.

ಈ ರೀತಿ ಕೂಡಿದ ಜನರು ಸಿಪಾಯಿಗಳೊಡನೆ ಸ್ನೇಹದಿಂದ ಇದ್ದು ಈ ಯುದ್ಧವು ನಿಮ್ಮ ಮೇಲೆ ಅಲ್ಲ ಅದು ಬ್ರಿಟಿಷರ ಮೇಲೆ ಅವರನ್ನು ಹೊಡೆದೋಡಿಸುಲು ಎಂದು ಹೇಳುತ್ತಿದ್ದರು.

ನಾನು ಮಂಗಳೂರಿಗೆ ಬಂದ ಬೆಳಿಗ್ಗೆ ಖಜಾನೆಯನ್ನು ಈಗ ಇರುವ ಸ್ಥಳದಿಂದ ಸೇನಾ ಬೇರಕ್‌ಗೆ ಸಾಗಿಸುವುದು ಒಳ್ಳೆಯದೆಂದು ಅಭಿಪ್ರಾಯ ಪಟ್ಟನು. ಕೆಲವು ಅಧಿಕಾರಿಗಳು ಸಾರ್ವಜನಿಕರ್ಯಾರು ಸಹಾಯಕ್ಕೆ ಬರಲಿಲ್ಲ.

ಕಾಸರ ಗೋಡು ಮತ್ತು ಬಂಟವಾಳವು ಪೂರ್ತಿಯಾಗಿ ದಂಗೆಕಾರರ ವಶವಾಗಿ ಅವರು ಮಂಗಳೂರಿನ ಕಡೆ ಮುಂದುವರಿಯುತ್ತಿದ್ದರು. ಅವರು ಮಾಡುತ್ತಿದ್ದ ಕೆಲಸ ಸಾಮಾನ್ಯವಾದ ಗಲಾಟೆಯಾಗಿರದೆ ಸರ್ಕಾರವನ್ನು ಕಿತ್ತು ಹಾಕುವುದಕ್ಕೆ ಬೇಕಾದ ಮೇಲ್ಮಟ್ಟದ ಶಕ್ತಿಯುತವಾಗಿದೆ.

ಮಂಗಳೂರಿನ ಪರಿಸ್ಥಿತಿ ಅಲ್ಲಿಯ ನಿವಾಸಿಗಳು ದಂಗೆಗಾರರೊಡನೆ ಸೇರಿ ದಂಗೆಯ ಚಟುವಟಿಕೆಯಲ್ಲಿ ಪಾಲ್ಗೊಂಡು ದಂಗೆಗಾರರಿಗೆ ಬೇಕಾದ ವಸ್ತುಗಳ ಸರಬರಾಜನ್ನು ಮಾಡುತ್ತಿದ್ದರಲ್ಲದೆ ದಂಗೆಕಾರರಿಗೆ ಯಾವರೀತಿ ಗುಂಡನ್ನು ತಪ್ಪಿಸಬೇಕು ಮಂಗಳೂರಿನ ಒಳಗೂ ಹೊರಗು ಇರುವ ರಸ್ತೆಗಳ ವಿಷಯದಲ್ಲಿ ಪತ್ರಗಳನ್ನು ಬರೆದು ತಿಳಿಸುತ್ತಿದ್ದರು.

5 ನೇ ಪುಟದಿಂದ

ದಿನಕ್ಕೆ ಬರೀ ಐದು ನಿಮಿಷವಾದರು ನಮ್ಮವರ ಬಗ್ಗೆ ಚಿಂತಿಸಿದರೆ ಉದ್ಧಾರ ಆಗಲು ಸಾಧ್ಯ. ಇಂದು ಇದು ತೀರಾ ಅನಿವಾರ್ಯವಾಗಿದೆಯೆನ್ನುತ್ತಾರೆ. ಶ್ರೀ ಪಟ್ಟಮನೆ ಶೇಷಪ್ಪಣ್ಣನವರು.

ಒಂದಾದರೂ ಪತ್ರಿಕಾ ಮಾಧ್ಯಮ ನಮ್ಮ ಜನಾಂಗದಲ್ಲಿದೆ ಯೆನ್ನುವ ತೃಪ್ತಿ ನನಗಿದೆ. ನೀವು ಸಾಕಷ್ಟು ಗೌಡರ ಹಿಂದಿನ ಚರಿತ್ರೆಯನ್ನು ನೀಡುತ್ತಲಿದ್ದೀರ. ಮುಂದೆ ಸಂಶೋಧನೆ ಆಗಿ ನಮ್ಮವರ ಮೂಲ ತಿಳಿಯಬೇಕು. ವಿಜಯನಗರ ಸಾಮ್ರಾಜ್ಯದಲ್ಲಿ ರಾಜರಿಗೆ ಆಪ್ತರಾಗಿ ತಾಳಿಕೋಟೆಯ ಯುದ್ಧದ ನಂತರ ಸರ್ವನಾಶ ಹೊಂದಿ ಒಂದು ಚಿಕ್ಕ ಪಂಗಡವಾಗಿ ಮಾರ್ಪಟ್ಟು ದಕ್ಷಿಣಕ್ಕೆ ಶೃಂಗೇರಿ, ಇಕ್ಕೇರಿ, ಐಗೂರುಗಾಗಿ ಇತ್ತ ಕನ್ನಡ ಜಿಲ್ಲೆಗೂ ಕೊಡಗಿಗೂ ಬಂದಿರುವ ವಿಷಯ ತಿಳಿದಾಗ ನನಗೆ ಹೆಮ್ಮೆಯೆನಿಸುತ್ತದೆ. ಖಂಡಿತವಾಗಿಯೂ ನಮ್ಮವರ ಬಗ್ಗೆ ಜನ ಜಾಗೃತಿ ಮೂಡಲು ಭಾಷೆ ಮತ್ತು ಸಂಸ್ಕೃತಿ ವಿಷಯದಲ್ಲಿ ಸಂಶೋಧನೆಯ ಅತ್ಯಗತ್ಯತೆಯ ಅನಿವಾರ್ಯತೆ ಇಂದಿನ ಬೆಳವಣಿಗೆಯಲ್ಲಿ ಬೇಕಾಗಿದೆ. ಜನಾಂಗದ ದೃಷ್ಟಿಯಲ್ಲಿ ಇಂತಹ ಸತ್ಕಾರ್ಯ ಮಾಡಲು ಮುಂದೆ ಬರುವಂತಹ ವಿದ್ಯಾರ್ಥಿಗಳಿಗೆ ಖಂಡಿತ ನಾನು ನನ್ನ ಸಹಕಾರ, ಸಹಾಯ ನೀಡುತ್ತೇನೆ ಅನ್ನುವ ಧೃಡ ಸಂಕಲ್ಪ ಹೊಂದಿರುವ ಶ್ರೀಯುತರು ದಿನಾಂಕ 6-12-1981 ರಲ್ಲಿ ಮದೆನಾಡು ಗ್ರಾಮದ ಕಾಸ್ಪಾಡಿ ಮಾಚಯ್ಯ ಮತ್ತು ಮುತ್ತಮ್ಮ ದಂಪತಿಗಳ ಪುತ್ರಿ ಡೀಸಮ್ಮಳನ್ನು ಲಗ್ನವಾಗಿ ಇಬ್ಬರು ಗಂಡು ಮಕ್ಕಳು (ಜಿನ್ನು, ರಿನ್ನು) ಮತ್ತು ಒಬ್ಬಳು ಮಗಳನ್ನು (ವೈನಿ) ಪಡೆದ ಇವರ ಸುಖ ಸಂಸಾರಕ್ಕೆ ಶ್ರೀ ಕುಲಗುರು ವೆಂಕಟರಮಣ ಮತ್ತು ಶೃಂಗೇರಿ ತಾಯಿಯ ಕೃಪಾಕಟಾಕ್ಷೆ ಸದಾ ಇರಲೆಂಬುದಾಗಿ ಸಂಗಾತಿ ಮನಪೂರ್ವಕವಾಗಿ ಶುಭವನ್ನು ಈ ಸಂದರ್ಭದಲ್ಲಿ ಹಾರೈಸುತ್ತದೆ.

— ಬರಹ :ಪಟ್ಟಡ ಪ್ರಭಾಕರ್.

---

**ಜೀವನ ಒಂದು ಸಮಸ್ಯೆ — ಬಿಡಿಸು.**

# ಕೆಟ್ಟ ಸಂಪ್ರದಾಯ ತೊಲಗಬೇಕು.

ಕೊಡಗು ಸಂಗಾತಿ' ಯು ಓದುಗರ ಮುಂದೆಯು ಜನಾಂಗದ ಅಭಿಮಾನಿ, ಹಿತೈಷಿಗಳ ಮುಂದೆಯು ಹಲವು ಬಾರಿ ತನ್ನ ಅಳಲನ್ನು ತೋಡಿಕೊಂಡಿರುತ್ತದೆ. ಜನರ ಸಹಕಾರ ಬೆಂಬಲವಿಲ್ಲದೆ ಯಾವುದೇ ಆದರೂ ಪತ್ರಿಕೆ ನಡೆಸಲು ಸಾಧ್ಯವಾಗುವುದಿಲ್ಲ. ಹೆಸರಾಂತ ಬರಹಗಾರ ಶಿವರಾಮ ಕಾರಂತರು, ಹಳೆತಲೆಮಾರಿನ ರಾಷ್ಟ್ರನಾಯಕ ಬಾಲಗಂಗಾಧರ ತಿಲಕರಂಥ ಘಟಾನುಘಟಿಗಳಿಂದಲೇ ಪತ್ರಿಕೆ ನಡೆಸಲು ಸಾಧ್ಯವಾಗದೆ ನಿಲ್ಲಿಸಿದ್ದಾರೆ. ಆದರೆ ಸಂಗಾತಿಯು ತನ್ನ ಜನರ ಏಳಿಗೆ, ನಾಡಿನ ಅಭ್ಯುದಯ ಸಂಘಟನೆ ಇತ್ಯಾದಿ ಹಲವಾರು ಉತ್ತಮ ಆದರ್ಶಗಳನ್ನಿಟ್ಟುಕೊಂಡು 1997ರ ಏಪ್ರಿಲ್ 7ರ ಶುಭದಿನದಂದು ಉದಯವಾಯಿತು. ಜನಾಂಗದಲ್ಲಿ ಇನ್ಯಾವುದೇ ಪತ್ರಿಕೆ ಇಲ್ಲದಿರುವುದನ್ನು ಮನಗಂಡು ಧೈರ್ಯ ಮತ್ತು ಕುಲದೈವವನ್ನು ನಂಬಿ ತಂದ ಪತ್ರಿಕೆಯಾಗಿದೆ. ಇದು ಹೊಟ್ಟೆಪಾಡಿಗಾಗಿ ತಂದ ಪತ್ರಿಕೆಯಲ್ಲ ಹಲವಾರು ಕಷ್ಟನಷ್ಟವನ್ನು ಅನುಭವಿಸಿ, ಧೃತಿಗೆಡದೆ 5 ನೇ ವರ್ಷಕ್ಕೆ ಪಾದರ್ಪಣೆ ಮಾಡಿದೆ. ಸಂಗಾತಿಯು ಯಾರಿಗೂ ಮೋಸ ವಂಚನೆ ಮಾಡದೆ ಸಮಯಕ್ಕೆ ಸರಿಯಾಗಿ ತನ್ನ ಚಂದದಾರರಿಗೆ ಪತ್ರಿಕೆಯನ್ನು ನಿಯತವಾಗಿ ಕಳಿಸುತ್ತಿದೆ.

ಪತ್ರಿಕೆಯಲ್ಲಿ ಎಲ್ಲಾ ವಿಷಯಗಳನ್ನು ಅಲ್ಪ ಸ್ವಲ್ಪವಾಗಿ ಹಾಕುತ್ತಿದ್ದೇವೆ. ಎಲ್ಲರ ಲೇಖನಗಳನ್ನು ಹಾಕಲಾಗುತ್ತಿಲ್ಲ, ಕಾಲಕಂಡವರ ಬಗ್ಗೆ ಮಾಹಿತಿ ಸಿಕ್ಕಿದ ತಕ್ಷಣವೇ ಹಾಕಲಾಗುತ್ತಿದೆ. ಎಲ್ಲಾ ಓದುಗರನ್ನು ಒಮ್ಮೆಲೇ ತೃಪ್ತಿಪಡಿಸುವುದಂತೂ ದುಸ್ಸಾಧ್ಯವಾಗಿದೆ. ಸಮಾನುಸಾರ ಅರ್ಹತೆ ಮುಟ್ಟುವ ಲೇಖನಗಳಿಗೆ ಆಧ್ಯತೆ ಇದ್ದೇ ಇರುತ್ತದೆ.

ಸಂಗಾತಿ ಎಲ್ಲಾವರೊಡನೆ ಸ್ನೇಹಮಯದಿಂದಿರಲು ಬಯಸುತ್ತಧೆ. ಆದರೂ ಕೆಲವು ಜನರಿಂದ ಪದೇ ಪದೇ ದೂರವಾಣಿ ಕರೆಗಳ ಮೂಲಕ ಸಿಕ್ಕಾಬಟ್ಟೆ ಬಾಯಿಗೆ ಬಂದ ಹಾಗೆ ಇಂಗುತಿಂದ ಮಂಗನ ಹಾಗೆ ಏಕವಚನದಲ್ಲಿ ಅವಾಚ್ಯಶಬ್ದಗಳ ನಿಂದನೆ ಸಕಾರಣವಿಲ್ಲದೆ ಬಯ್ಯುವುದು, ಬೆದರಿಸುವುದು ಅಪಹಾಸ್ಯ ಮಾಡುತ್ತಿರುವುದು ಇದೆಲ್ಲ ಸರಿಯಾದ ಮಾರ್ಗಗಳಲ್ಲ. ಏನಿದ್ದರು ಸಂಪರ್ಕಿಸಬೇಕು. ಜನಾಂಗದ ಪತ್ರಿಕೆಯಾಗಿ, ಜನಾಂಗಕ್ಕಾಗಿ ಕೆಲಸ ಮಾಡುತ್ತಿರುವುದು ಮುಂದುವರಿಯುವ ಶುಭಲಕ್ಷಣವಾಗಿದೆ. 1998ರ ಏಪ್ರಿಲ್‌ನಲ್ಲಿ ಮೈಸೂರಿನ ಕಲಾಭವನದಲ್ಲಿ ಏರ್ಪಡಿಸಿದ್ದ ಪ್ರಥಮ ಅರೆಭಾಷಾ ಕಾರ್ಯಕ್ರಮ ಇಂದಿಗೂ ಸ್ಮರಣೀಯ. ನಂತರ ಸಭೆ ಸಮಾರಂಭಗಳು ರಾಜ್ಯದ ಹಲವಾರು ಬಾಗಗಳಲ್ಲಿ ನಡೆದು ಜನಾಂಗವು ಸಂಘಟಿತರಾಗಲು ಪ್ರೇರೇಪಿಸಿದೆ. 1998ರ ಕಾರ್ಯಕ್ರಮವನ್ನು ಅರೆಭಾಷೆ ಸಾಂಸ್ಕೃತಿಕ ಸಮಿತಿ, ಮೈಸೂರು. ಗೌಡ ಮಹಿಳಾ ಒಕ್ಕೂಟ ಮೈಸೂರು, ಕೊಡಗು ಸಂಗಾತಿಯವರ ಸಂಯುಕ್ತ ಆಶ್ರಯದಲ್ಲಿ ನಡೆದ ಕಾರ್ಯಕ್ರಮವಾಗಿ ಜನರಿಂದ ಚಂದಾ ವಸೂಲಾತಿ ಮಾಡಿ ಸುಮಾರು 70ಸಾವಿರದಷ್ಟು ಖರ್ಚು ಮಾಡಿರುತ್ತದೆ. ಸಂಗಾತಿ ಜನರಿಗಾಗಿ ಬಿಕ್ಷೆ ಎತ್ತುತ್ತಿದೆ ನಿಜ. ಆದರೆ ಹೊಟ್ಟೆಪಾಡಿಗಾಗಿ ಅಲ್ಲವೆಂಬುದನ್ನು ಅರಿಯಬೇಕು.

ಮೈಸೂರಿನ ವಿದ್ಯಾರ್ಥಿ ನಿಲಯದ ಬಗ್ಗೆ 1996ರ ತನಕ ನಷ್ಟದ ಹಾದಿಯಲ್ಲಿದ್ದು, ನಿಲಯದಲ್ಲಿ ಈಗ 5ವರ್ಷದಿಂದ ಅಂದಾಜು ಲಕ್ಷಕ್ಕು ಮಿಕ್ಕಿ ನಿವ್ವಳ ಲಾಭದ ಹಾದಿಯಲ್ಲಿದೆಯೆಂದು ತಿಳಿದಾಗ ಇದು ಯಾರ ಪ್ರಯತ್ನವೆಂಬುದನ್ನು ಜನತೆ ಚಿಂತಿಸಬೇಕು. ಅಶಿಸ್ತು, ಅನಾಚಾರದಂತಹ ಕೃತ್ಯಗಳು ನಡೆದು ಬೆರಳೆಣಿಕೆಯಷ್ಟು ಮಂದಿ ಮಕ್ಕಳು ನಿಲಯದಲ್ಲಿದ್ದಾಗ ಆ ಬಗ್ಗೆ ಆಗ ಚಿಂತಿಸದೆ ಈಗ ಬೊಗಳೆ ಬಿಡುವುದರಲ್ಲಿ ಅರ್ಥವಿಲ್ಲ. ಈಗಲಾದರೂ ಅಷ್ಟೇ ಒಂದು ಸಂಸ್ಥೆ ಯಾರಿಂದಲೆ ಆಗಲಿ ಅಭಿವೃದ್ದಿ ಹೊಂದಿದಾಗ ಆ ಗೌರವ ತನ್ನ ಸಮಾಜಕ್ಕೆ ಬರುತ್ತಿದೆ ಅನ್ನುವ ಪರಿಜ್ಞಾನ ಹೆಚ್ಚಿನ ಜನರಿಗಾಗಿರುವುದಿಲ್ಲ ಅದಲ್ಲದೆ ಸಮಾಜಕ್ಕಾಗಿ ಕೆಲಸಮಾಡುತ್ತಿರುವ ಅರೆಭಾಷೆ ಸಾಂಸ್ಕೃತಿಕ ಸಮಿತಿ ಗೌಡ ಮಹಿಳಾ ಒಕ್ಕೂಟ ಅಥವಾ ಸಂಗಾತಿಯಂತಹ ಸಂಸ್ಥೆಗಳ ಬಗ್ಗೆ ಬಹಳ ಕೀಳುಮಟ್ಟದ ಪರಿಜ್ಞಾನಹೊಂದಿ ಛೇಡಿಸುತ್ತಿರುವುದು ತೀರಾ ಅನ್ಯಾಯ ಹಾಗೂ ತಪ್ಪು ಸಹ ಆಗಿದೆ. ಕೈಲಾಗದವ ತನ್ನ ಮೈ ಪರಚಿಕೊಂಡ ಅನ್ನುವ ರೀತಿಯಲ್ಲಿ ತಾನು ಮಾಡಲಾರ, ಇತರರನ್ನು ಮಾಡಲು ಬಿಡಲಾರ. ಹಾಗೆ ದ್ವೇಷ ಹೊಟ್ಟೆಕಿಚ್ಚು, ಮತ್ಸರಗಳ ಬಿಡಾರವಾಗಬಾರದು ನಮ್ಮ ದೇಹ ಮತ್ತು ಮನಸ್ಸುಗಳೆರಡು. ಜನಾಂಗದ ಅಭಿವೃದ್ಧಿಯ ಟೀಕೆ ಟಿಪ್ಪಣಿಗಳಿಗೆ ಸಂಗಾತಿಯ ಬಾಗಿಲು ಸದಾ ತೆರೆದಿರುತ್ತದೆ. ಅದುವೇ ಪತ್ರಿಕಾ ಧರ್ಮ. ಲೋಪ ದೋಷಗಳನ್ನು ತಿದ್ದಿಕೊಳ್ಳಲು ಹೇಳಲು ಇರುವುದೇ ಪತ್ರಿಕಾ ಮಾಧ್ಯಮ. ಯಾರ ಹೆದರಿಕೆಗೂ ಯಾರ ಬೆದರಿಕೆಗೂ ಜಗ್ಗದೆ, ಯಾರಿಗೂ ಮೋಸಮಾಡದೆ ಯಾರನ್ನು ದ್ವೇಷಿಸದೆ ಸ್ನೇಹಮಯದಿಂದ ಮುಂದುವರಿಯಲು ಓದುಗರ, ಹಿತೈಷಿಗಳ, ಅಭಿಮಾನಿಗಳ ಸಹಕಾರವೇ ಶ್ರೀ ರಕ್ಷೆ. ತೀರಾ ಕೀಳುಭಾವನೆಯ ಸಂಶಯ ವ್ಯಕ್ತಿಗಳು ಯಾರೇ ಆಗಲಿ ನೇರವಾಗಿ ಸಂಗಾತಿ ಕಛೇರಿಯನ್ನು ಸಂಪರ್ಕಿಸಿ ವಿಚಾರ ವಿನಿಮಯ ಮಾಡಿಕೊಳ್ಳುವುದಕ್ಕೆ ಯಾವ ಅಭ್ಯಂತರವೂ ಇರುವುದಿಲ್ಲ. ಹಿಂದಿನಿಂದ ಅಲ್ಲಲ್ಲಿ ಅಪಪ್ರಚಾರ, ಆರೋಪ, ಪತ್ರಿಕಾ ಅಭಿವೃದ್ದಿಗೆ ಧಕ್ಕೆ ಬರಿಸುವ ವಿಷಬಿತ್ತನೆ ವಿಚಾರಗಳು ಇಂದಿನಿಂದಲೇ ನಿಲ್ಲುವಂತಾಗಲಿ. ಏನೇ ಇದ್ದರೂ ನಮ್ಮೆಲ್ಲರ ಧ್ಯೇಯ ಸಂಘಟನೆ ಮತ್ತು ಅಭಿವೃದ್ಧಿಗಿರಲಿ.

ಜೈ ಗೌಡ ಬಾಂದವರೆ.

— ಪಟ್ಟಡ ಪ್ರಭಾಕರ.

*To Realize the value of 1 Hour ask the lvers who are waiting to meet.*

# ತುಳುನಾಡ ಗೌಡರು

— ಪಿ. ಯಿರಿ. ಆನಂದ ಗೌಡ, ಸುಳ್ಯ ದ. ಕ.

ತುಳುನಾಡಿನಲ್ಲಿ ಹಿಂದೆ ಆಳಿದ ಜೈನ ಹಾಗೂ ಬಲ್ಲಾಳ ಮನೆತನ ತಮ್ಮದೇ ಆದ ಹಿನ್ನಲೆಯ ಕ್ರಮಾಗತ ಸಾಮಾಜಿಕ ನೈತಿಕ ಕಟ್ಟುಪಾಡುಗಳನ್ನು ಉಳಿಸಿವೆ. ವೀರ "ಪಾಂಡ್ಯರಾಜ"ನ ಕಟ್ಟಳೆ "ಅಳಿಯ ಸಂತಾನ" ಅದನ್ನು ಅನುಕರಿಸಿದ ಬಂಟ, ಬಿಲ್ಲವ, ಮೊಗವೀರ ಮುಂತಾದ ಗಣ್ಯ ಪಂಗಡಗಳಿದ್ದವು. ಪೂಜಾ ಉದ್ದೇಶದಿಂದ ಬ್ರಾಹ್ಮಣರು ದೇವಾಲಯದ ಪರವಾಗಿ ಬಂದವರು. ತುಳುನಾಡಿನ ಸಿರಿಸಂಪತ್ತು ಹೊರನಾಡಿಗರನ್ನು ಕರೆಯುವಂತಿದ್ದು ಅವರ ಅನುಕೂಲತೆಗಳನ್ನು ಈಡೇರಿಸುವುದಕ್ಕೆ ಅನುಕೂಲವಾಗಿತ್ತು. ವಿಜಯನಗರದ ಸಾಮ್ರಾಟರ ಸಾಮ್ರಾಜ್ಯ ವಿಸ್ತರಣೆ ಹಾಗೂ ಗೌಡಪಾಳೆಯಗಾರರ ದಂಡು, ತುಳುನಾಡನ್ನು ಕಂಡು ಇಲ್ಲಿಯ ಆಡಳಿತಗಳ ಹಿಡಿತಕ್ಕಾಗಿ ಬಂದರೂ ಮುಂದೆ ಇಲ್ಲಿಯೇ ನೆಲೆ ನಿಲ್ಲಲು ಹೊಂದಿಕೊಂಡರು. ಇಕ್ಕೇರಿನಾಯಕರ ಕಡೆಯ ಐಗೂರು ಸೀಮೆಯ ಗೌಡರು ತುಳುನಾಡಿಗೆ ಬಂದವರೆಂಬ ನಂಬುಗೆಯಿದೆ. ಶಿರಾಡಿ ಮಾರ್ಗ ಚಾರ್ಮಾಡಿ ಮಾರ್ಗ ಹಾಗೂ ಬಿಸಿಲೆ ಮಾರ್ಗವಾಗಿ ಬಂದ ಗೌಡರುಗಳು ಸುಳ್ಯ ತಾಲೂಕು ಪುತ್ತೂರು ತಾಲೂಕು ಬೆಳ್ತಂಗಡಿ ತಾಲೂಕು ಬಂಟ್ವಾಳ ತಾಲೂಕು ಅಲ್ಪಸ್ವಲ್ಪವಾಗಿ ಮಂಗಳೂರು ತಾಲೂಕಿನಲ್ಲಿ ಪೂರ್ವ ಭಾಗದಲ್ಲೂ ಕಾಸರಗೋಡಿನಲ್ಲೂ ಕಾಣಬಹುದಾಗಿದೆ. ಬಂದಗೌಡರು ಕೃಷಿಯನ್ನೇ ಮೂಲ ಉದ್ದೇಶವಾಗಿಟ್ಟುಕೊಂಡು ಬೇಸಾಯಮಾಡ ಲೆತ್ನಿಸಿದರು. ದನ, ಎತ್ತು, ಎಮ್ಮೆ, ಕೋಣ ಮುಂತಾದ ಸಾಕು ಪ್ರಾಣಿಗಳನ್ನು ಸಾಕಿದರು. ಆರ್ಥಿಕವಾಗಿ ಮೇಲೆ ಬಂದರು ಊರಿನಲ್ಲಿಯ ಸಂಘಟನೆಯ ಸ್ಥಾನಮಾನಗಳು ಲಭಿಸಿದವು. ತಮಗಾಗಿ ತಮ್ಮ ಸಂಘಟನೆಯನ್ನೂ ರಚಿಸಿಕೊಂಡರು ಮುಂದೆ ಮುಖ್ಯವಾಗಿ ಶೃಂಗೇರಿ ಪೀಠಸ್ಥರನ್ನು ಜಗದ್ಗುರುಗಳೆಂದೂ ಒಪ್ಪಿಕೊಂಡ ಹಾಗೂ ಅವರ ಆದೇಶದಂತೆ ತುಳುನಾಡಿಗೆ ಬಂದವರಾಗಿದ್ದರಿಂದ ಗುರುಪೀಠದ ಆರಾಧಕರಾಗಿಯೂ "ರಾಜದಂಡ ನೀತಿ" ಯಂತೆ ನಡೆದು ಕೊಳ್ಳುವರಾಗಿಯೂ ತಮ್ಮ ಜಾತಿ ಬಾಂಧವರ ರಕ್ಷಣೆಗಾಗಿ ಜಾತಿ ಪದ್ಧತಿಯ " ಆಚಾರ ವಿಚಾರ"ನೋಡಿಕೊಳ್ಳುವುದಕ್ಕಾಗಿ ಮೂಡು, ಕಟ್ಟೆಮನೆ, ಕೂಜುಗೋಡು ಹಾಗೂ ಪಡುಕಟ್ಟೆ ಮನೆ ಪುತ್ತೂರು ಬಳ್ನಾಡು ಕಟ್ಟೆಮನೆಯಂತ ನಿರ್ಣೈಸಿಕೊಂಡರು. ಇದರಿಂದ ಅಧಿಕಾರ ಹೊಂದಿದ ಮಾಹಣೆ ಗೌಡರು, ಊರ ಗೌಡರೂ ಇದ್ದರು ಇವೆಲ್ಲವೂ ಪ್ರತಿಷ್ಠಿತ ಹತ್ತು ಕುಟುಂಬದ ಹಿರಿಯರಲ್ಲಿ ಮಾತು ಕತೆನಡೆದು ಗುರುಪೀಠಕ್ಕೆ ಅಡಿಯಾಳಾಗಿ ನಡೆದುಕೊಳ್ಳುವುದೆಂದು ತೀರ್ಮಾನಿಸಲಾಯಿತು. ನಮ್ಮ ಜಾತಿ ಪದ್ಧತಿಯಲ್ಲಿ ನಡೆಯುವ ಹುಟ್ಟು ಬಾಳು ಸಾವುಗಳಲ್ಲಿ ಪದ್ಧತಿಯಲ್ಲಿ ನಡೆಯಬೇಕಾದ ಸಂಸ್ಕಾರ ವಿಧಿಗಳನ್ನು ಮಾಡುವ, ಮಾಡಿಸುವ ಜವಾಬ್ದಾರಿಯು ಊರಿನ ಗೌಡ ಯಾ ಆತನ ಪತ್ನಿಯು ಮಾಡಸಬೇಕಾಯಿತು. ಹುಟ್ಟಿದ ಮಗುವಿನ ಜಾತಕರ್ಯ (ಅಮೆಸೂತಕ) ಸೂತಕ, ತೊಟ್ಟಿಲಲ್ಲಿರಿಸುವುದು ಹೆಣ್ಣು ಮಕ್ಕಳ ಋತುಶಾಂತಿ ಕರ್ಮ ಮದುವೆಯ ಬಂಧನ, ಸತ್ತವರಿಗೆ ಉತ್ತರಕ್ರಿಯಾದಿ ಸದ್ಗತಿ ಕಾರ್ಯವನ್ನು ಮಾಡಿಸಬೇಕಾಯಿತು. ಮದುವೆ ಕಾರ್ಯದಲ್ಲಿ ಮಾತ್ರ ಗುರುಪೀಠಕ್ಕೆ ಗುರು ಕಾಣಿಕೆ ಸಲ್ಲಿಸುವಂತಾಯಿತು. ಅನ್ಯ ಜಾತೀ ಭಾಂಧವರ ಅಗತ್ಯವೂ ಬೇಕಾಯಿತು. ಸಂಸ್ಕಾರ ವಿಧಿಗಳಲ್ಲಿ ತುಳುನಾಡಿನಲ್ಲಿ ಅನ್ಯಜಾತಿಯಲ್ಲಿಯ ಕಟ್ಟುಪಾಡುಗಳನ್ನು ಅಲ್ಪಸ್ವಲ್ಪವಾಗಿ ಅಂಗೀಕರಿಸಿಕೊಳ್ಳಲಾಯಿತು. ಹಾಗೆಯೇ ಅನ್ಯ ಸಮಾಜ ಬಾಂಧವರೂ ಸೇರಿಕೊಂಡರು..

ಪೂರ್ಣಶಿವಾರಾಧಕರಾದ ಗೌಡರುಗಳು ಕುಲಗುರುಗಳೆಂದು ಶ್ರೀ ತಿರುಪತಿ ತಿಮ್ಮಪ್ಪನನ್ನು ಕುಲದೇವರಾಗಿ ಅಂಗೀಕರಿಸಿಕೊಂಡಿದ್ದರು. ಹಾಗೆಯೇ ಮಾತೃ ಶಕ್ತಿಗಳಾದ ಹೊಸಕೋಟೆ ಕೆಂಚಮ್ಮ ಹಾಗೂ ಒಣಗೂಡು ಸಬ್ಬಮ್ಮ ಎಂಬ ಸೀಮೆ ಶಕ್ತಿಗಳನ್ನು ಮನೆದೇವರಾಗಿ ನಂಬಿದ್ದರು. ಇದರೊಡನೆ ಅಸುರೀ ಶಕ್ತಿಯಾಗಿ ಕೆಂಚರಾಯನನ್ನೂ ನಂಬಲಾಯಿತು. ತುಳುನಾಡಿನಲ್ಲಿಯ ಭೂತಾರಾಧನೆಯಿಂದಾಗಿ ಇವೆಲ್ಲ ಕುಂಠಿತಗೊಂಡವು. ಪ್ರತಿಷ್ಠಿತ ಹತ್ತು ಕುಟುಂಬದ ಹಿರಿಯರು ಹಾಗೂ ಕುಲಗುರುವಿನ ಸಮಕ್ಷಮ ವಿಮರ್ಶಿಸಿ ಹುಟ್ಟು-ಬಾಳು ಸಾವು ಹಾಗೂ ಸ್ವಜಾತಿಯಲ್ಲಿ ಮದುವೆ ಕಾರ್ಯಕ್ಕೂ ಸ್ವಜಾತಿಯ ಏಳಿಗೆಗಾಗಿ "ಹದಿನೆಂಟು ಬಳಿ" ಎಂಬ ರಚನೆಯೊಂದಿಗೆ ಒಂದೇ ಬಳಿಯೊಳಗೆ ಮದುವೆಯನ್ನು ನಿಷೇಧಿಸಲಾಯಿತು. ಒಂದೇ ಬಳಿ 2ವಿಭಾಗಗಳಾದುದಿದೆ ಎಂದು ನಂಬಲಾಗಿದೆ. ಅಂತೆಯೇ ಪಿತೃವಂಶ ಪ್ರಧಾನ ನಡೆಯುವುದಾಯಿತು.

ತುಳುನಾಡಿನ ಸಂಸ್ಕೃತಿಯನ್ನು ಉಳಿಸುವುದರಲ್ಲಿ ಗೌಡರ ಪಾತ್ರ ಹಿರಿದಾದುದು. ತುಳುನಾಡಿನ ಭೂತಾರಾಧನೆಯನ್ನು ಭೂಮಿ ಸಂಬಂಧವಾಗಿ ಒಪ್ಪಿಕೊಂಡರು. ಭೂತಕೋಲ, ಕಂಬಳ, ಕೋಳಿಅಂಕ ಇತ್ಯಾದಿಗಳಲ್ಲಿ ಭಾಗವಹಿಸಿ ಹೊರಟರು. ಪರಂಪರೆಯಿಂದ ಬಂದ ಆರಾಧನೆಯನ್ನು ಸಾಂಕೇತಿಕವಾಗಿ ಮಾಡಿದರು. ಸಿದ್ದವೇಶ ಮುಂತಾದ ಗೌಡರ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ವಿಷಯಗಳು ಮೂಲೆ ಹೋದವು. ಮದುವೆ ಕಾರ್ಯ ಭಾಗದಲ್ಲಿ ನಡೆಯಲೇಬೇಕಾದ ನಿಯಮಗಳೆಲ್ಲಾ " ಬ್ರಾಹ್ಮಣಧಾರೆ"ಯ ಮೂಲಕ ದೇವಾಲಯಗಳಲ್ಲಿ ನಡೆಯ ಹತ್ತಿದವು. "ಗೌಡಧಾರೆಯ" ಕಾರ್ಯವು ಮರೆಯಾಯಿತು. ತುಳುನಾಡಿನಲ್ಲಿ ತಮ್ಮ ಮಾತೃಭಾಷೆಯನ್ನು ಉಳಿಸಿಕೊಳ್ಳಿಸುವುದರಲ್ಲಿ ಗೌಡರು ವಿಫಲರಾಗಿದ್ದಾರೆ. ಸುಳ್ಯ ತಾಲೂಕು ಬಿಟ್ಟರೆ ಗೌಡ ಕನ್ನಡವು ಬೇರೆ ಕಡೆ ಅಪರೂಪವಾಗಿದೆ. ವ್ಯವಹಾರಿಕ ಭಾಷೆ ತುಳು ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಗೌಡರುಗಳು "ಐಗುಳು"ಮಠದಲ್ಲಿ ಹೊೖಗೆ ಮೇಲೆ ಕಲಿತದ್ದೆ ಕಡಿಮೆ. ನಂತರದ ಕಾಲದಲ್ಲಿ ವಿದ್ಯಾಭ್ಯಾಸವನ್ನು ಅಭ್ಯಸಿಸಿದರು. ಶುಭಕಾರ್ಯಗಳಲ್ಲಿ ಶೋಭಾನೆಯನ್ನೂ ಹಾಡುತ್ತಿದ್ದರು. ತುಳುನಾಡಿನ ಕಥಾನಕಗಳನ್ನು ಬೇಸಾಯದ ನೇಜಿ ಕೆಲಸದ ಸಂದರ್ಭ ಕಲಿತು ಜೀವನಾನುಭಗಳನ್ನೂ ಬಿಂಬಿಸಿದರು. ಇತ್ತೀಚೆಗೆ ಮಾತ್ರ ಗೌಡರ ಕನ್ನಡ ಲಿಪಿಯ ಮೂಲಕ ಹೊರ

ಬಂತೆನ್ನಬೇಕು. ಭಾಷೆಯು ಪರಿಸರವನ್ನಾ ಶ್ರಯಿಸುವುದು ನಿಶ್ಚಯ ಹಾಗಿದ್ದೂ, ಗೌಡಕನ್ನಡಕ್ಕೆ ಅಷ್ಟೊಂದು ಹಿರಿಮೆ ಬಂದಿಲ್ಲವೆನ್ನಬಹುದು. ಉಡುಗೆ ತೊಡುಗೆಗಳಲ್ಲಿ ತುಳುನಾಡಿನ ಜನರನ್ನೇ ನೆಚ್ಚಿಕೊಂಡರು ಇಲ್ಲಿ ಉಡುವ ರೀತಿ ನೀತಿಗಳನ್ನೇ ಅನುಕರಿಸಿದರು. ಸ್ವಾತಂತ್ರ್ಯಾ ನಂತರ ಗೌಡರಲ್ಲಿ ವಿದ್ಯಾಭ್ಯಾಸಕ್ಕೆ ಹೆಚ್ಚು ಒತ್ತು ಬಂದಂತಿದೆ. ಹುಡುಗ ಹುಡುಗಿಯರು ವಿದ್ಯಾವಂತರಾಗಿ ಉದ್ಯೋಗಿಗಳಾದರು ರಾಜಕೀಯದಲ್ಲೂ ಮುಂದುವರಿದರು. ಅದರೊಂದಿಗೆ ವ್ಯಾಪಾರೋದ್ಯಮಗಳಲ್ಲೂ ಮುಂದೆ ಬಂದರು.

ಗೌಡ ಜನಾಂಗವು ಸಾಗುವಳಿಯ ವೃತ್ತಿಯವರಾಗಿದ್ದರಿಂದ ಒಕ್ಕೂಟ ಜೀವನ ನಡೆಸಬೇಕಾಯಿತು. ಉತ್ತು-ಬಿತ್ತಿ ಬೆಳೆ-ಕೊಯಿಲುಗಳಿಗೆ ಸಹಕಾರ ಅಗತ್ಯ ಅಂತೆಯೇ ಊರಲ್ಲಿ ನಡೆಯುವ ಆಚಾರ ವಿಚಾರಗಳನ್ನು ಗಮನಿಸಬೇಕಾಯಿತು. ಊರಿಗೊಬ್ಬ ಗೌಡ, ನಾಡಿಗೊಬ್ಬ ದೊರೆ" ಎಂಬಂತೆ ತುಳುನಾಡಿನಲ್ಲಿ ಸಾಮಾಜಿಕವಾಗಿ ನ್ಯಾಯ ಪರಿಪಾಲನೆ ಸತ್ಯ ನಡತೆ, ಮಾತಿಗೆ ಮರ್ಯಾದೆ ಇವೆಲ್ಲ ನಿತ್ಯಕರ್ಮವಾಯಿತು. ಅನ್ಯರ ಬಗ್ಗೆ ಸಹಾನುಭೂತಿಯುಳ್ಳ ಗೌಡರು ಅನ್ಯರತ್ತ ಎಂದೂ ತಪ್ಪು ಎಣಿಸಿದುದಿಲ್ಲ, ಧಾರ್ಮಿಕ ವಿಧಿಗಳಲ್ಲಿ ಬ್ರಾಹ್ಮಣ ಸಹಕಾರವನ್ನೇ ಹಮ್ಮಿ ಕೊಳ್ಳಲಾಯಿತು. ಆದರೂ ಕಳ್ಳತನ, ಸುಲಿಗೆ, ಹಾದರ, ಮುಂತಾದ ಸಮಾಜ ಘಾತುಕ ಶಕ್ತಿ ಅನಗತ್ಯಗಳೊಡನೆ ಸಂಪರ್ಕಿಸಿದವರಿದ್ದಾರೆ.

ಮುಂದೆಗೆ ನಮ್ಮ ತುಳುನಾಡಿನ ಗೌಡರುಗಳು ಪುನಃ ಸಂಘಟನೆ ಮಾಡಿಕೊಂಡು ಸ್ವಜಾತಿ ಬಾಂಧವರನ್ನೂ ರಕ್ಷಿಸುವಲ್ಲಿ ಕಟ್ಟೆ ಮನೆಗಳ ಆಡಳಿತದಲ್ಲಿ ಒಪ್ಪಿಕೊಳ್ಳುವಲ್ಲಿ ವಿದ್ಯೆಗೆ ಮಹತ್ವಕೊಟ್ಟು ತಮ್ಮನ್ನು ತಾವೇ ಅರಿತುಕೊಂಡು ಸಹಬಾಳ್ವೆ ನಡೆಸುವಲ್ಲಿ ಎಚ್ಚೆತ್ತುಕೊಳ್ಳುವರೆಂಬ ಭಾವನೆಯಿರಿಸಲಾಗಿದೆ.

---

3 ನೇ ಪುಟದಿಂದ

ಕೇಶವಾನಂದರವರನ್ನು ವಿವಾಹವಾಗಿದ್ದಾರೆ. ಪುಷ್ಪವೇಣಿ ಕೋರನ ವಿಶ್ವನಾಥ ತೋಟಗಾರಿಕಾ ಇಲಾಖೆಯ ಅಧಿಕಾರಿಯನ್ನು ವಿವಾಹವಾಗಿದ್ದಾರೆ. ಚಾಮಿ ಪೂವಯ್ಯ ಅಮೇರಿಕಾದಿಂದ ಹಿಂದಿರುಗಿ ಚೆಟ್ಟಳ್ಳಿಯಲ್ಲಿ ನೆಲೆಸಿದ್ದಾರೆ. ಸುಮ್ಮಿಯವರು ಪೇರಿಯನ ಜಯನಂದನವರನ್ನು ವಿವಾಹವಾಗಿದ್ದಾರೆ. ಕೊನೆಯವರಾದ ಹರೀಶ್‌ರವರು ಅಮೇರಿಕಾದಿಂದ ಹಿಂದಿರುಗಿ ಈಗ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

ಯುವಕರೊಡನೆ ಯುವಕರಾಗಿ ತಮ್ಮ ಇಳಿವಯಸ್ಸಿನಲ್ಲೂ ಬೆರೆಯುತ್ತಿದ್ದ, ಯಾವುದೇ ಉತ್ತಮ ಕೆಲಸಗಳಿಗೆ ಬೆನ್ನು ತಟ್ಟಿ ಪ್ರೋತ್ಸಾಹಿಸುತ್ತಿದ್ದ ಶ್ರೀಯುತರು 1996ಏಪ್ರಿಲ್13ರಂದು ವಿಧಿವಶರಾದರು. ಅಂದರೆ ನಮ್ಮನ್ನಗಲಿ ಸುಮಾರು 5ವರುಷಗಳು ಕಳೆದರೂ ಅವರ ಮಾರ್ಗದರ್ಶನ ನಮ್ಮ ಜನಾಂಗಕ್ಕೆ ದಾರಿ ದೀಪವಾಗಿದೆ. ಇವರ ಪ್ರೇರಣೆಯಿಂದ ಸಾಕಷ್ಟು ಯುವ ಪ್ರತಿಭೆಗಳು ಬೆಳಕಿಗೆ ಬಂದಿವೆ. ಇದು ನಮ್ಮ ಸಮಾಜಕ್ಕೊಂದು ಆಸ್ತಿಯೆನ್ನಬಹುದು.

**— ಪಟ್ಟಡ ಶಿವಕುಮಾರ್**

---

## ನಿಧನ

ಮಂಡ್ಯಜಿಲ್ಲೆ, ಶ್ರೀರಂಗಪಟ್ಟಣ ತಾ|| ಮಹದೇವಪುರ ಗ್ರಾಮದ ದಿ||ಪುಟ್ಟ ಮಾದೇಗೌಡರ ಮಗ ದೊಡ್ಡ ಮೀಸೆ ಸಿದ್ದೇಗೌಡರು ದಿನಾಂಕ 23-3-2001ರಂದು ನಿಧನರಾದರು. ಇವರಿಗೆ 53ವರ್ಷ ಪ್ರಾಯವಾಗಿತ್ತು. ಇವರು ತಾಲೂಕಿನ ರೈತ ಸಂಘದ ಕಾರ್ಯಕರ್ತರು, ಉತ್ತಮ ಕೃಷಿಕರು ಹಾಗೂ ಸಿನಿಮಾ ಹಾಸ್ಯ ನಟರು ಆಗಿದ್ದ ಇವರು ಪತ್ನಿ, ಪುತ್ರರು ಹಾಗೂ ಅಪಾರ ಬಂಧುಬಳಗದವರನ್ನು ಅಗಲಿದ್ದಾರೆ. ಸಂಗಾತಿ ಚಂದದಾರರಾಗಿದ್ದ ಶ್ರೀಯುತರಿಗೆ ಕೊ. ಸ. ಶ್ರದ್ಧಾಂಜಲಿ ಸಲ್ಲಿಸುತ್ತದೆ.

## ಬಾರೆ ಗೆಳತಿ

ಬಾರೆ ಗೆಳತಿ ಬಾರೆ ಗೆಳತಿ ಗುಡ್ಡದಂಚಿಗೆ
ರೂಪ ತಳೆದು ಚೆಲುವು ಪಡೆದ ರಾಜಸೀಟಿಗೆ ||

ಸುತ್ತ ಮುತ್ತ ಗುಡ್ಡಗಳು ಎಸೆದು ಕಾಣುವಲ್ಲಿಗೆ
ಹಸಿರು ಸೀರೆ ಹಾಸಿ ಕರೆವ ಗುಡ್ಡದಂಚಿಗೆ ||

ಕಂಗಳಿಂಗೆ ಹೊಸತು ನೋಟಸಿಗುವಲ್ಲಿಗೆ
ಮಾರುತನು ಬಂದು ಮುತ್ತಿಕ್ಕುವಲ್ಲಿಗೆ ||

ಭಾವ ತುಂಬಿ ಮನವ ತಣಿಪ ಗಿರಿಗಳಂಚಿಗೆ
ಹೃದಯ ತುಂಬಿ ಹರುಷ ಹರಿವ ಬೆಟ್ಟದಂಚಿಗೆ ||

ತಂಪು ಗಾಳಿ ಬೀಸುತಿದೆ ಎಷ್ಟು ಹಿತಕರ
ರವಿಯು ಬೀರ್‍ವ ಹೊನ್ನ ಕಿರಣ ಎಷ್ಟು ಸುಖಕರ ||

ನೋಡು ಆಚೆ ಮೆರೆವ ಗಿರಿಗಳೆಷ್ಟು ಬಿತ್ತರ
ಬದಿಯಲಿರುವ ಬಯಲ ವನಿತೆ ಎಷ್ಟು ಸುಂದರ ||

ರವಿಯು ಗುಡ್ಡದಂಚಿನಲ್ಲಿ ಕಂತಿನಿಂತಿಡೆ
ಸಂಜೆ ಹೆಣ್ಣಿನೊಡನೆ ಕೂಡಿ ಸೊಬಗ ಬೀರಿದೆ ||

ಆಗಸದಲಿ ಮೋಡಗಳು ಬಣ್ಣ ತಳೆದಿದೆ
ನಾನಾ ತರುಲತೆಗಳೆಲ್ಲ ಲಾಸ್ಯವಾಡಿವೆ ||

ಚಿತ್ರ ಸೃಷ್ಟಿ ಸೊಬಗಿನಲ್ಲಿ ಆನಂದ ತುಂಬಿದೆ
ನಮ್ಮ ಹಿತವ ಬಯಸಿ ಮೌನ ಕರೆಯ ನೀಡಿದೆ ||

ನಮ್ಮ ಮನದ ಭೇದವನ್ನು ತೊರೆದು ನಡೆಯುವ
ಸುತ್ತ ಮುತ್ತ ತಿರುಗಿ ತಿರುಗಿ ನಾವು ನಲಿಯುವ ||

ಮನದ ಬೇಗೆಗಳನು ಕಳೆದು ನಾವು ಸಾಗುವ
ಜೀವನದ ಯಾನದಲ್ಲಿ ಗುರಿಯ ಸೇರುವ ||

**— ಕುಯಿಂತೋಡು ದಾಮೋದರ, ಸಂಪಾಜೆ.**

---

*To Realize the value of 1Minite, ask the person who Missed his train.*

---

## ಅರೆಭಾಷೆಯ ಸರಳ ವಾಕ್ಯಗಳು

1. ಅವಂಗೆ ಸೊಯ್ಸೆ ಇಲ್ಲೆ = ಆತನಿಗೆ ಬುದ್ದಿಯೆ ಇಲ್ಲ.
2. ಎಸ್ಟ್ ಹೇಳಿದ್ರು ಕೇಳ್ತಿಲ್ಲೆ= ಎಷ್ಟು ಹೇಳಿದರು ಕೇಳಲಿಲ್ಲ
3. ಸೊಂಪ, ನೀನ್ ಗದ್ದೆಗೆ ಹೋಗ್ = ಸೋಂಪ, ನೀನು ಗದ್ದೆಗೆ ಹೋಗು
4. ನಾನ್ ಮತ್ತೆ ಬನ್ನೆ = ನಾನು ಆಮೇಲೆ ಬರುತ್ತೇನೆ.
5. ಹೊಸ್ಬರ್ ಹೆಂಗ್ಯೊಳರಿ ? = ನವ ವಿವಾಹಿತರು ಹೇಗಿದ್ದೀರಿ ?
6. ಹತ್ಯೊಳ್ಳಕೆ ಯಾಗ ಹೋದರೆ ? = ಹತ್ತು ಉಳಿಯಲು ಯಾವಾಗ ಹೋಗುತ್ತೀರಿ ?
7. ಕೂಸ್ ಬಾಣಂತಿ ಸೌಖ್ಯನಾ ? = ಮಗು ಮತ್ತು ಬಾಣಂತಿ ಸುಖವಾಗಿದ್ದಾರೆಯೆ ?
8. ಹೈದಂಗೆ ಸೆರಿಯಾದ ಗೂಡೆ = ಹುಡುಗನಿಗೆ ಸರಿಯಾದ ಹುಡುಗಿ
9. ನೀನ್ ಮರ್ಕತ್ತಿ ಸೊಪ್ಪು ಕೊಚ್ಚು = ನೀನು ಮರಕ್ಕೆ ಹತ್ತಿ ಸೊಪ್ಪು ಕಡಿ.
10. ಆಚ್ಕಡೆ ಕಾಡ್‌ಲಿ ಚಾಕಟೆ ಸೊಪ್ಪು ಬಾರಿ ಲಾಯ್ಕಟ್ಟು = ಆ ಕಡೆ ಕಾಡಿನಲ್ಲಿ ಚಾಕಟೆ ಮರದಲ್ಲಿ ಎಲೆಗಳು ತುಂಬಾ ಚೆನ್ನಾಗಿ ಇವೆ.
11. ಮರ್ಕತ್ತಿ ಗೆಲ್ಲ್‌ನ ಕುಲ್ಲುಗಿಸು = ಮರಕ್ಕೆ ಹತ್ತಿ ರೆಂಬೆಯನ್ನು ಅಲ್ಲಾಡಿಸು.
12. ಮರ್ಕತ್ತಿ ಅಂವನ ಕೈಯ್ ಕಾಲೆಲ್ಲಾ ತರ್ದೊವುಟ್ಟು = ಮರಕ್ಕೆ ಹತ್ತಿ ಅವನ ಕೈ ಕಾಲುಗಳೆಲ್ಲಾ ತರುಚಿ ಹೋಗಿದೆ.
13. ಆ ಮರ ಪೋರ್ದ್ ಬಿದ್ದದ್ ಕಂಡದೆ = ಆ ಮರವು ಬುಡ ಸಮೇತ ಬಿದ್ದಿರುವುದು ಕಾಣುತ್ತದೆ.
14. ಅವಂಗೆ ಬಾರಿ ಹಾಂಕರ, ಹಂಗೆ ಆಕು = ಅವನಿಗೆ ಬಹಳ ಅಹಂಕಾರ, ಹಾಗೆಯೇ ಆಗಬೇಕು.
15. ಯಿ ಬಡ್ಕಲ್ ಹಸ್‌ನ ದುಡ್ಡೆಸ್ಟ್‌ರ್ದುರ್ = ಈ ಬಡಪಾಯಿ ಹಸುವಿನ ಕ್ರಯವೇನಿರಬಹುದು.
16. ಹಸ್ ಹಾಲ್ ಎಸ್ಟ್‌ಕೊಟ್ಟದೆ ? = ಹಸು ಹಾಲು ಎಷ್ಟು ಕೊಡುತ್ತದೆ ?
17. ಹಸ್ ಲಾಯ್ಕಟ್ಟು ಅಂದರೆ ಕರ್ ಲಾಚಾರ್ = ಹಸು ಚೆನ್ನಾಗಿದೆ ಆದರೆ ಕರು ಬಡಕಲು ಆಗಿದೆ
18. ಗೂಡೆ ಓದಿ ಓದಿ ಸುಸ್ತಾಗುಟ್ಟುಗಡ = ಹುಡುಗಿ ಓದಿ ಓದಿ ಸುಸ್ತಾಗಿದ್ದಾಳೆ ಅಂತೆ
19. ಗೂಡೆ ನೆರ್ದುಟ್ಟು = ಹುಡುಗಿ ದೊಡ್ಡವಳಾಗಿದ್ದಾಳೆ
20. ಗೂಡೆ ಬಾರಿ ಪೊರ್ಲು, ಹೈದ ಲಾಯ್ಕಿಲ್ಲೆ = ಹುಡುಗಿ ತುಂಬಾ ಚೆನ್ನಾಗಿದ್ದಾಳೆ, ಹುಡುಗ ಚೆನ್ನಾಗಿಲ್ಲ

— ಪಟ್ಟಡ ರೀನಾ ಉಲ್ಲಾಸ

## ವಿದ್ಯಾರ್ಥಿ ಜೀವನ

ಇತ್ತ್ ನಮ್ಮದೊಂದು ದೊಡ್ಡ ಸೆಟ್ಟ್
ಗೂಡೆಗ ಹೈದಗಳ್‌ದೊಂದೇ ಕೂಟ್
ಹೆಂಗಾರ್ ಸಿಕ್ಕಿತ್ ಕಾಲೇಜ್ ಸೀಟ್
ಸೇರ್ತ್ತಿದ್ದೊ ನಾವ್ ಪಕ್ಕದ ರಾಜಾಸೀಟ್.

ಶಾಲೆಗೆ ಚಕ್ಕರ್ ಹಾಕುದು ನಮಿಗೊಂದು ಆಟ
ಕೇಳಿಕೆ ಮನಸ್ಸೇ ಇಲ್ಲೆ ಕ್ಲಾಸ್‌ಲಿ ಮಾಡುವ ಪಾಟ
ಹೈದಗ ತೇಗ್ದ್‌ರೆ ಬೀಡಿ ಸಿಗರೇಟ್
ಗೂಡೆಗ ತೇಗಿಯೊಕ್ಕು ಒಳ್ಳೊಳ್ಳೆ ಚಾಕ್‌ಲೇಟ್.

ಎಲ್ಲಾವು ಸೇರಿ ತಿಂಬೋದೆ ಬಾರೀ ಟೇಸ್ಟ್
ಎಲ್ಲಿಂದ ತಾದು ದಿನ ದಿನ ನೋಟ್
ಅದ್ಕೆ ಮಾಡ್ತಿತ್ತಿದ್ದೊ ಚೆಕ್ಕಿಂಗ್ ಅಪ್ಪನ ಕೋಟ್
ಗೊತ್ತಾದರೆ ಬೀಳ್ತ್ತಿತ್ತ್ ಬಿಸಿ ಬಿಸಿ ಏಟ್

ಬಿತ್ತ್ ನಮ್ಮ ಮೇಲೆ ಮಾಸ್ಟ್ರದ್ ಒರೆನೋಟ
ಕರ್ಸ್ ಬುಡ್ತ್ ಮಾರನೆ ದಿನನೇ ಪೇರೆನ್ಸ್ ಕೂಟ
ಮನೆಲೂ ಸುರಾತ್ ಅಪ್ಪ ಅವ್ವನ ಕಾಟ
ಹೆಂಗೊ ನಡ್ದೋತು ಮಾರ್ಚ್‌ಗಂಟ ಅಲೆದಾಟ

ನೋಡ್ದೆ ಬಾತ್ ತರ ತರ ಸಿನಿಮಾ ನೋಟ
ಮಾಡ್ದೆ ಬಾತ್ ಬಿಸಿ ಬಿಸಿ ಹೋಟೆಲ್ ಊಟ
ಈಗ ನೋಡಿ ಪರೀಕ್ಷೆಲಿ ಬಾರಿ ಪರ್ದಾಟ
ಬಂದೇ ಬುಡ್ತ್ ಪತ್ರಿಕೆಲಿ ಫಲಿತಾಂಶ ಪ್ರಕಟ

ಆಗಿ ಹೋಗಿತ್ತ್ ಅಲ್ಲಿ ದೊಡ್ಡ ದೊಡ್ಡ ಮಾಟ
ವಿದ್ಯಾರ್ಥಿ ಜೀವನಕ್ಕೆ ಹೇಳ್ದೊ ನಾವ್ ದೊಡ್ಡ ಟಾಟ

— ಅಣ್ಣೆಚೀರಾ ಭಾರತಿ, ಮಕ್ಕಂದೂರು

## ಶುಭ ಮದ್ವೆ

ಅರಕಲಗೋಡು ತಾಲೂಕು ಬೆಟ್ಟಗಳಲೆ ಗ್ರಾಮದ ಪುದಿಯನೆರವನ ಅಪ್ಪಯ್ಯನವ್ರ ಮಗ್ಳು ಕುಸುಮಾವತಿಗೂ ಮತ್ತೆ ಭಾಗಮಂಡ್ಲ ಗ್ರಾಮದ ನಿಡ್ಯಮಲೆ ಯೋಗೇಂದ್ರನವ್ರ ಮಂಣ್ಣ ದಿನೇಶ್‌ಗೂ ತಾರೀಖ್ 30-3-2001 ರ್ಲಿ ಮದ್ವೆ ಗೂಡೆನ ಮನೇಲಿ ಬಾರಿ ಗೌಜಾಗಿ ನಡ್ತ್ ತ ತಿಳ್ಸ ಬಂದುಟ್ಟು.

— ಸಂಗಾತಿ

ಜೀವನ ಒಂದು ದುಃಖ — ಹೊರ ಬಾ.

# ವಾಂಟೆಡ್ ಮಿಸ್ಟರ್ ರಾಜು : [ನಮ್ಮ ರಾಜು ಮಂಜ ಕಥೆ]

ಲೇಖನ : ಶಂಕರನ ಬಸಪ್ಪ

**ಧಾರಾವಾಯಿ - 30**

Mr. ರಾಜು ಬೆಳಿಗ್ಗೆ ಎದ್ದಂವ ಮಾಮೂಲಿ ಕರ್ಮಗಳ ಮುಗ್ಸಿಕಂಡ್ ಆದ ಮೇಲೆ ಒಂದ್ ಸರ್ತಿ ಮನೆಕಡೆ ಗೇನ ಬಾತ್. ಓ ಹೋ! ನನ್ನ ತಂಗೆನ ಮದ್ವೆದಿನ ಬಹಳ ಹತ್ರ ಬಂದ್ ಬುಟುಟಲ್ಲಾ? ಈಗ ನನ್ನ ಸೇವಿಂಗ್ಸ್ ಲಾಕ್‌ರ್‌ಲಿ ಒಟ್ಟ್ ಎಷ್ಟ್ ಹಣ ಆಗಿರ್ದು ತಾ ಒಂದ್‌ಸರ್ತಿ ಲೆಕ್ಕಹಾಕಿ ನೋಡಿಕೆ ಆಸೆ ಆತ್. ಹಂಗಾಗಿ ತನ ಕೊಂಬರೆದ್ ಬೋಲ್ಟ್‌ನ ಒಳಗಡೆಂದ ಹಾಕಿಕಂಡತ್. ತಾನ್ ಮಲಗುತಿದ್ದ ಹಾಸಿಗೆಯ ತಲೆಕಡೆ ಬ್ಲೇಡ್‌ನ ತಕಂಡ್ ಮೆಲ್ಲಂಗೆ ಗೀರಿ ಅದರ ಬಾಯಿನ ಅಗಲ ಮಾಡ್ತ್. ತಾನ್ ಅದರೊಳಗೆ ಕೂಡಿಟ್ಟ ರೂಪಾಯಿ ಕಂತೆಗಳನೆಲ್ಲಾ ಒಂದೊಂದಾಗಿ ಹೊರಗೆತೆಗ್ದ್ ಮೇಜ್‌ನ ಮೇಲೆ ಗುಡ್ಡೆ ಹಾಕಿತ್. ತನಿಗೆ ಸಿಕ್ಕಿದ ದುಡ್ಡ್‌ಗಳನೆಲ್ಲಾ ನೂರರ ಮತ್ತೆ ಐನೂರರ ನೋಟ್‌ಗಳಂಗೆ ಬೇರೆ ಬೇರೆ ಜೋಡ್ಸಿತ್. ಇದ್ರಲ್ಲಿ ಐನೂರರ ನೋಟ್‌ಗ ಐವತ್ ಮಾತ್ರ ಇತ್ತ್. ಎಲ್ಲಾ ಒಟ್ಟ್ ನೋಟ್‌ಗಳ ಒಮ್ಮೆ ಸರಿಯಾಗಿ ಜೋಡ್ಸಿ ಒಟ್ಟಿಗೆ ಒಮ್ಮೆ ಲೆಕ್ಕ ಹಾಕಿ ನೋಡ್ತ್. ರಾಜುಗೆ ಒಮ್ಮೆಗೆ ಆಶ್ಚರ್ಯ ಆಗಿಹೋತ್. ಇಷ್ಟೊಂದ್ ತುಂಬಾ ಹಣನ ನಾನ್ ಬರೇ ಮೂರು ವಾರಲೇ ಸಂಪಾದಿಸಿ ಬುಟ್ಟೊಳೊಲ್ಲಾ? ನಮ್ಮ ಮನೆಲಿ ಒಂದ್ ವರ್ಷಎಲ್ಲಾ ಆಳುಕಾಳುಗಳ ಸೇರ್ಸಿಕಂಡ್ ಮಳೆಚಳಿನ ತಡ್ಕಂಡ್ ಗೈದರೂ ಒಂದ್ ವರ್ಷಕ್ಕೆ ಇಷ್ಟೊಂದ್ ಹಣನ ಸಂಪಾದಿಸಿಕೆ ಆದುಲ್ಲೆ. ಅಬ್ಬಾ ಇದರ ಸಂಪಾದಿಸಿಕೆ ನಾನೆಷ್ಟ್ ಕಷ್ಟ ಪಟ್ಟೊಳೆ. ಯಾವುದೊಂದೂ ಕೆಲ್ಸದ ಸರಿಯಾದ ಅನುಭವವೂ ಇಲ್ಲದೇ ಇದ್ದ ನಂಗೆ ಇದ್ದದ್ ಒಂದೇಒಂದ್ ಬಂಡವಾಳ ಅದ್ ಏನ್‌ತ್ತೇಳಿರೆ ನನ್ನ ಭಂಡಧೈರ್ಯ. ಬರೀ ಧೈರ್ಯ. ಈ ಕೆಲ್ಸನ ನಾನ್ ಸಾಧಿಸಿನೆತ್ತೇಳುವ ಆತ್ಮವಿಶ್ವಾಸ, ನಾನ್ ಇದೂವರ್ಗೂ ಮಾಡ್ದ ಪ್ರತೀ ಒಂದ್ ಕೆಲ್ಸಗಳೂ ಸ್ವಂತ ನನ್ನ ಪ್ರಾಣದ ಒಟ್ಟಿಗೆ ಆಟ ಆಡಿದಂಗೆ. ಜೀವಕ್ಕೆ ಆಪತ್ ಬರ್ವಂತಹ ಅಪಾಯದ ಕೆಲ್ಸಗಳನ್ನೇ ಮಾಡಿಕಂಡ್ ಬಂದ್ ಬುಟ್ಟೊಳೆ. ಸಾಕ್, ಇನ್‌ಸಾಕ್ ಹಿಂಗೇ ನಾನ್ ನನ್ನ ಜೀವನದ ಜೊತೆ ಚೆಲ್ಲಾಟ ಆಡ್ತಾ ಇದ್ದರೆ, ಯಾಗರೊಮ್ಮೆ ಅದೃಷ್ಟ ಏನಾದ್ರೂ ತೋಪರೆ ಆಗಿ ಹೋದ್ರೆ ನನ್ನ ಜೀವಕ್ಕೆ ತೊಂದರೆ ಆಗಿ ಹೋದೆ. ಆಮೇಲೆ ನಾನ್ ನನ್ನ ತಂಗೆನ ಮದ್ವೆಗೆ ಹೋಕೆ ಆಕಿಲ್ಲೆ.

ಇಷ್ಟ್ ದಿನನೂ ನಾನ್ ಒಂದಲ್ಲಾ ಒಂದ್‌ತರದ ವೈರಿಗಳನ್ನೇ ನಾನ್ ಎದಿರು ಹಾಕೊಳ್ಳುತಾ ಒಳೆ. ಹಿಂಗೆ Mr. ರಾಜು ಮನ್ಸ್‌ಲಿ ನೂರಾರ್ ವಿಚಾರಗಳ ಗೇನ ಮಾಡಿಕಂಡೇ ಕುದ್ದಿದವಂಗೆ ಬೆರಳ್ ಸಂದಿಲಿ ಇದ್ದ ಸಿಗರೇಟ್‌ನ ಬೆಂಕಿ ಬೆರಳ್‌ನ ಸುಡ್‌ಕ್‌ನೇ ಎಚ್ಚರ ಆದ್.

ಸರಿ ಇನ್ನ್ ನಾನ್ ಹಣ ಸಂಪಾದನೆ ಮಾಡಿದ್ ಸಾಕ್. ನನ್ನ ತಂಗೆ ಮತ್ತೆ ನನ್ನ ಶಾಂತಿಗೂಡೆಗೆ ಬೇಕಾದ ಬಟ್ಟೆ ಬರೆ ಎಲ್ಲಾ ಆಗುಟ್ಟು ಇನ್ನ್‌ಸ್ವಲ್ಪ ಚಿನ್ನದ ಒಡವೆಗ ಸಿಕ್ಕಿದಿದ್ದರೆ ಆಗಿತ್. ಆಮೇಲೆ ಊರಿಗೆ ನಿಶ್ಚಿಂತೆಲೆ ಹೋಗಿ ನನ್ನ ಬಾವಿ ಭಾವಂಗೆ ಅವು ಕೇಳ್ದ ವರದಕ್ಷಿಣೆ ಹಣ ಒಂದ್ ಲಕ್ಷನ ಕೊಟ್ಟ್ ಮಿಕ್ಕಿದ ಹಣಲಿ ನನ್ನ ತಂಗೆನ ಮದ್ವೆನ ಮುಗ್ಸಕ್. ಹಂಗೇ ಅದರೊಟ್ಟಿಗೆ ನನ್ನ ಮದ್ವೆನ ಕೂಡಾ ನಡ್ಸಿಬುಡಕ್‌ತಾ ಆಶೆಲಿ ಗೇನ ಮಾಡಿಕಂಡ್ ಸ್ವಲ್ಪ ಕುದ್ದತ್. ಆಮೇಲೆ ಲಾಡ್ಜ್‌ಂದ ಹೊರಗೆ ಹೊರಡ್‌ಕನ Mr. ರಾಜು ನೆನ್ನೆದಿನ, ಅಶೋಕ ರೋಡ್‌ಲಿ ಇರುವ ತುಳಸಿ ಜ್ಯೂಯೆಲರಿ ಅಂಗಡಿಂದ ಚಿನ್ನದ ಗಿಲೀಟ್‌ಲಿ ಮಾಡ್ಸಿಕಂಡ್ ಬಂದಂತಹ ಚಿನ್ನದ ಒಡವೆಗಳೆಲ್ಲದರೂ ಒಂದ್ ಕಲರ್ ಪೇಪರ್ ಒಳಗೆ ಇಟ್ಟ್ ಮಡ್‌ಚಿ ಮುದ್ದೆಮಾಡಿ ಜೋಬೊಳಗೆ ಸೇರ್ಸಿಕಂಡ್ ಹೊರಟಿತ್. ಎದ್‌ರ್‌ಗಡೆ ಇರುವ ಮಾರ್‍ವಾಡಿ ಸೇಟ್, ಸುರಾಂನ ಅಂಗಡಿ ಒಳಗೆಹೋಗಿ ಮುಖದಲ್ಲಿ ಸುರಿಯುತಿದ್ದ ಬೆವರ್‌ನ ಒರ್ಸಿಕಂಡ್ ಕುದ್ದತ್. ರಾಂ ರಾಂ ಸುರರಾಂ ಸೇಟ್‌ಗೆ. ನೋಡಿ ನಾನ್ ಮೊನ್ನೆ ದಿನನೇ ನಿಮಗೆ ಹೇಳಿದಲ್ಲಾ ನಾನ್ ಮಾಡ್ತಿರುವ ಬಿಸಿನೆಸ್‌ಗೆ ಯಾಗ್ಯಾಗ ಎಷ್ಟೆಷ್ಟ್ ಹಣ ಬೇಕಾದೆತಾ ನಂಗೀ ಗೊತ್ತಾದುಲೆತಾ, ನಂದೆಲ್ಲಾ ಎಂತ ಕೆಲ್ಸತ್ತೇಳಿರೆ ಒಮ್ಮೆಗೆ ಟಂಡರ್‌ಗಳಿಗೆ ಹಣ ಹಾಕಿಕಟ್ಟುದು. ಆಮೇಲೆ ಟೆಂಡರ್ ಕರ್ದಂಗೆ ನಂಗೆ ಸಿಕ್ಕಿದ ಟೆಂಡರ್‌ನ ಬೇರೆವುಕೆ ಸ್ವಲ್ಪ ಲಾಭಕ್ಕೆ ಕೊಟ್ಟುಬುಟ್ಟು ಮಧ್ಯೆ ಕಮಿಷನ್ ಇಟ್ಟು ಕಂಬೋದು. ನೋಡು ಸೇಟ್‌ಜೀ ನೀನೆಲ್ಲಾ ಜನರ ಸಾಮಾನುಗಳ ಇಡ್ಸಿಕಂಡ್ ಅವುಕೆ ನೀನ್ ಹೆನಾನ(ಹಣ) ಕೊಟ್ಟೆಯಾ ಆದ್ರೆ ನಂದ್ ಹಂಗೆ ಅಲ್ಲ. ಎಡಗೈಯಿಂದ ಟೆಂಡರ್‌ಗಳ ತಕೊಂಬೊದು ಬಲಗೈಯಿಂದ ಬೇರೆಯವುಕೆ ವರ್ಗಾಯಿಸದೂ. ಹಂಗೆ ಇಂದ್ ಕೂಡಾ ನಂಗೆ ಒಂದ್ ಒಳ್ಳೆ ದೊಡ್ಡ ಪ್ರಾಜೆಕ್ಟ್‌ಗೆ ಒಂದ್ ಟೆಂಡರ್‌ನ ಹಾಕುತಾ ಒಳೆ . ನಂಗೆ

**ಕಳ್ದ ಸಂಚಿಕೆಂದ ......**

ಅಭಯ ಹಸ್ತ ಆಸ್ಪತ್ರೆಯ ಮಾಲಿಕ Mr. ಧನರಾಜ್‌ನ ಆಸ್ತಿ ಅಂತಸ್ತ್‌ನ ತಿಳ್ಕಂಡ್ ಅಂವ ನಡೆಸುತಿದ್ದ ಅವ್ಯವಹಾರಗಳನೆಲ್ಲಾ ಅದೇ ಆಸ್ಪತ್ರೆಯ ಆಯನ ಕೈಯಿಂದ ತಿಳ್ಕಂಡ್ ಮಾರನೆ ದಿನ Mr.ರಾಜು ಜಾಗ್ರತ ಪತ್ರಿಕೆಯ ಸಂಪಾದಕನ ವೇಷಲಿ ಹೋಗಿ ಅಂವನ ಹೆದ್ರ್‌ಸಿ ಅವನ ಕೈಯಿಂದ ವೃದ್ಧರ ಸೇವಾಶ್ರಮಕ್ಕೆ ಒಂದ್ ಕೋಟಿರೂಪಾಯಿ ಮತ್ತೆ ಲೈಂಗಿಕ ಹಿಂಸೆ ಅನುಭವಿಸಿದ ಹೆಣ್ಣ್‌ಮಕ್ಕಳಿಗೆಲ್ಲಾ ಪರಿಹಾರ ಕೊಡ್ಸಿ. ತನ್ನ ಜಾಗ್ರತ ಪತ್ರಿಕೆಗೆ ಜೀವಾವದಿ ಸದಸ್ಯತನಕ್ಕೆ 25ಸಾವಿರ ರೂಪಾಯಿನ ವಸೂಲಿ ಮಾಡಿಕಂಡತ್........

ಮುಂದಕೆ ........

*To Realize the value of 1Second, ask a person who has survived an accident.*

ಆ ಟೆಂಡರ್‌ಗೋಸ್ಕರ 40ಸಾವಿರ ಎಮೌಂಟ್ ಈಗ ನನ್ನ ಕೈಲಿ ಸಾರ್ಟೆಜ್ ಆಗುಟ್ಟು. ಅದಕ್ಕೇ ನಾನ್ ಅದೇ ಮೊನ್ನೆ ದಿನ ನಿನ್ನ ಹತ್ರ ಮಡಿಗಿದ್ದೆಲ್ಲಾ ಚಿನ್ನದ ಒಡವೆಗಳ ಅಷ್ಟನ್ನೂ ತಂದೊಳೆ. ಅಲ್ಲದೆ ಅದರ ಜೊತೆಗೆ ಒಂದ್ ನನ್ನ ಕೈದ್ ಗಟ್ಟಿ ಬಳೆಕೂಡಾ ಹೆಚ್ಚಿಗೆ ಉಟ್ಟು. ನಂಗೆ ಈಗ ತುಂಬಾ ಅರ್ಜೆಂಟಾಗಿ 25,000ರೂಪಾಯಿ ಬೇಕ್. ಬರೇ ಒಂದ್ ವಾರದ ಮಟ್ಟಿಗೆ ಮಾತ್ರ. ಯಾಕೆತ್ತೆಳಿರೆ ಇದರ ವ್ಯವಹಾರ ಒಂದೇ ವಾರಲಿ ಮುಗ್ದ್ ಹೋಗಿ ನನ್ನ ಕೈಗೆ ಒಂದೇ ವಾರಲಿ ಒಂದ್ ಲಕ್ಷ ರೂಪಾಯಿ ಕ್ಯಾಸ್ ಹಣ ಬಂದದೆ. ನಾನ್ ಈ ಟೆಂಡರ್‌ಗೆ ಹನ್ನೆರಡು ಗಂಟೆ ಒಳಗೆ ಬ್ಯಾಂಕ್‌ದ ಡಿ.ಡಿ.ನ ತಕಂಡ್ P.W.D ಆಪೀಸ್‌ಗೆ ಹೋಗಿ ತಲಪಕು. ತಕಣಿ ನನ್ನ ಚಿನ್ನದ ಒಡವೆಗಳ ಬೇಗ ಬೇಗ ಇದರ ನಿಮ್ಮ ಸಾಣೆ ಕಲ್ಲ್‌ಲಿ ಚೆಕ್ ಅಪ್ ಮಾಡಿ ನಂಗೆ 25,000ರೂ.ನ ಕೊಡಿ ನಾನ್ ಅರ್ಜೆಂಟಾಗಿ ಈ ಕೆಲ್ಸನ ಮುಗ್ಸಕು. ಈಗ ಮಧ್ಯಾನನೇ ಇದ್‌ಕೆ ಕೊನೆ ವಾಯಿದೆ ತಾ ಹೇಳ್ತ್.

ಅಯ್ಯೋ ರಾಜು ಬಯ್ಯಾ ಅದ್‌ಕ್ಯಾಕೆ ನೀವು ಇತ್‌ನೀ ಗಾಭರಿ ಪಡುತಾ ಒಳೋರಿ? ಹಂ ಹೈನಾ ನಿಮುದಕ್ಕೆ ಸಹಾಯ ಮಾಡಲಿಕ್ಕೆ. ಇದೆಲ್ಲಾ ನಿಮ್ಮ ಚಿನ್ನದ ಒಡವೆಗಳ ಮೊನ್ನೆ ತಾನೆ ಇಲ್ಲಿ ಮಡ್‌ಗಿದ್ದದ್ ತಾನೇ. ಮತ್ತೆ ಇನ್ನಾಕ ಅದರ ಇನ್ನೊಂದ್ ಸರ್ತಿ ನಮ್ಮ ಸಾಣೆಕಲ್ಲ್‌ನ ಮೇಲೆ ಉಜ್ಜಿ ಉಜ್ಜಿ ಸವುದು ನೋಡಬೇಕು. ಅಚ್ಚಾ ನಿಮುದಕ್ಕೆ ಈಗ 25,000 ಸಾವಿರ ಹೆನಾ ಬೇಕು ನಾವು ಕೊಡ್ತಾರೆ ದೇಖೋ ಇದರ್ ಎಕ್ ನಿಮ್ಮುದು ಸಹಿ ಮಾಡಿ ಬುಡಿ ರಾಜು ಬಯ್ಯ ತಾ. ಈ ಒಡವೆಗಳ ಗಿರ್ವಿ ಇಟ್ಟ್‌ಕಂಡ ರಶೀದಿ ಬುಕ್ಕ್‌ಗೆ ಸಿಗ್ನೇಚರ್ ಮಾಡಿಕೆ ಹೇಳ್ತ್. ರಾಜು ಬೈಯ್ಯೋ ಅದ್‌ಕೆ ಸಿಗ್ನೇಚರ್ ಮಾಡುತಾ ಅಯ್ಯೋ ಸುರರಾಂ ಸೇಟ್ ನಂದೆಲ್ಲಾ ನಿಮ್ಮ ತರನೇ ತುಂಬಾ ಬಡಾ ಬಡಾ ವ್ಯವಹಾರನೇ ಇಂತಹ ಜುಜುಬಿ ವ್ಯವಹಾರಕೆಲ್ಲಾ ಯಾಕೆ ಸುಮ್ನೆ ನನ್ನ ಸಿಗ್ನೇಚರ್, ಈ ರಶೀದಿ ಎಲ್ಲಾ ಯಾಕೆ ಬೇಕ್? ನಂದೆಲ್ಲಾ ಬರೇ ವಿಶ್ವಾಸಲೇ ಕೊಟ್ಯಾಂತರ ರೂಪಾಯಿ ವ್ಯವಹಾರಂಗ ನಡಿತಾ ಉಟ್ಟು. ತಾ ಹೇಳಿಕಂಡ್ ಸುರರಾಂ ಶೇಟ್ ಕೊಟ್ಟ ರೂಪಾಯಿಕಂತೆಗಳ ನೋಟ್‌ನ ಮತ್ತೊಮ್ಮೆ ಎಣ್ಸಿಕಂಡ್ ಅದಂ 'ತನ್ನ ಎರಡು ಜೋಬೊಳಗೂ ತುರುಕಿಮಡಗಿಕಂಡ್ ಸೇಟ್ ನಾನ್ ತುಂಬಾ ಅರ್ಜೆಂಟಲಿ ಈಗ ಬ್ಯಾಂಕ್‌ಗೆ ಹೋಗುತಾ ಒಳೆ. ತುಂಭಾ ತ್ಯಾಂಕ್ಸ್ ಅಚ್ಚಾ ಆತಾಹೂಂ ಶೇಟ್ ಜೀ ತಾ ಹೇಳಿ ಕಂಡ್ ಅಲ್ಲೇ ನಿಂತಿದ್ದ ಆಟೋ ಒಂದರ ಹಿಡ್ದ್ ಹೊರಟತ್.

ಈ ಮಾರ್‍ವಾಡಿ ಸುರರಾಂ ಸೇಟ್ ಎಷ್ಟೊಂದು ಲೆಕ್ಕ ಇಲ್ಲದಷ್ಟು ಬಡಜನರ ಚಿನ್ನದ ಒಡವೆಗಳ ಬಡ್ಡಿಗೆ ಮಡಿಗಿಸಿಕಂಡ್ ಆ ಮೇಲೆ ಅದರ್‍ನೆಲ್ಲಾ ನುಂಗಿ ನೀರ್ ಕುಡ್ದ್‌ಟ್ಟು. ಎಷ್ಟೊಂದು ಜನರಿಗೆ ಮೋಸ ಮಾಡಿಟ್ಟು ಅಂತಂವ ಇಂದ್ ನನ್ನ ಬೆಳ್ಳಿ ಒಡವೆಗಳಿಗೆ ಮೋಸ ಹೋಗುಟ್ಟು. ಇಂತಹ ದನಪಿಸಾಚಿಗಳ ಹತ್ರಂದ ಲಕ್ಷಾಂತರ ರೂಪಾಯಿನ ದೋಚಿಕಂಡರೂ ನಂಗೆ ದೋಷ ಮುಟ್ಟಿಕಿಲ್ಲೆತಾ ಗ್ಯಾನ ಮಾಡಿಕಂಡೇ ಹೋಗಿ ಒಂದ್ ಆಟೋದ ಒಳಗೆ ಕುದ್ದತ್. ಆಟೋ ಬಂದ್ ಅಟಾರಕಚೇರಿ. D.C. ಆಫೀಸ್‌ನ ಮುಂದೆ ಬಂದ್ ನಿಂತತ್. ಆಗ Mr. ರಾಜುಗೆ ನಾನ್ ಯಾಕೆ ಈ ಅಟಾರ ಕಛೇರಿಗೆ ಬಂದದ್ ತಾ ಗೊತ್ತಾಗದೆ ಅಲ್ಲಿ ತಡಬಡಾಯಿಸಿಕಂಡ್ ಆ ಆಟೋಂದ ಕೆಳಗೆ ಇಳ್ದ್ ಅದರ ಚಾರ್ಜ್‌ನ ಕೊಟ್ಟ ಕಳ್ಸಿತ್.

ಮದ್ಯಾನದ ಒಳ್ಳೆ ಉರಿ ಬಿಸ್ಲ್. ಹಂಗಾಗಿ ಅಲ್ಲೆ ಎದುರುಗಡೆ ಇರ್‍ವ ಕೂಲ್‌ಪಾರ್ಲರ್ ಒಳಗೆ ಹೋಗಿ ತಣ್ಣಂಗೆ ಇರ್‍ವ ಜಾಗಲಿ ಹೋಗಿ ಕುದ್ದ್ ಕಂಡತ್. ಯಾಕೆತ್ತೇಳಿರೆ ರಾಜುನ ತಲೆ ಈಗ ಸ್ವಲ್ಪ ಅಸಮಧಾನ್ನಿ ಬಿಸಿ ಹತ್ತಿ ಹೋಗುಟ್ಟು. ಅಂವನ ಒಳಮನ್ಸ್ ಎಯ್ ರಾಜು ನೀನ್ ಈಗ ಆ ಸೇಟ್‌ಗೆ ಮಾಡ್ದ ಕೆಲ್ಸ ತುಂಬಾ ಅನ್ಯಾಯದ್. ಅದ್ ನೀನ್ ಅವಂಗೆ ಮೋಸ ಮಾಡ್ದಂಗೆ ಆಗಿಹೋತ್. ಅವನ ಹತ್ರ ನೀನ್ ಸುಳ್ಳ್ ಹೇಳ್ದಂಗೆ ಆಗಿ ಹೋತ್. ಇದ್ ನಿನ್ನದ್ ತಪ್ಪ್ ತಾ. ಆದ್ರೇ ರಾಜುನ ಹೊರಮನ್ಸ್ ಹೇಳ್ತ್ ಆಯ್ ಬುಡು ಇದೆಲ್ಲಾ ನನ್ನ ವ್ಯವಹಾರದ ಒಂದೊಂದ್ ರೀತಿ ಇರ್ದುರಲ್ಲಿ ಇದು ಒಂದ್ ರೀತಿದ್ ಅಷ್ಟೆ. ಆ ಘಟಿಂಗ ಬಡವರ ರಕ್ತ ನೀರ್‌ನ ಹೀರಿ ಕುಡ್ದ್ ದೊಡ್ಡ ಮನ್ಸನಂಗೆ ಆದವಂಗೆ ಇದಕ್ಕಿಂತಲೂ ಹೆಚ್ಚ್ ಮೋಸನ ನಾನ್ ಮಾಡಿರೂ ಪರ್ವಾಗಿಲ್ಲೆ. ಕಳ್ಳ ಲೆಕ್ಕ ತೋರ್ಸಿ ಕಳ್ಳ ಹಣ ಸಂಪಾದಿಸಿ ಈ ನೀಚ, ತಾನ್ ಸಂಪಾದ್ನೆ ಮಾಡ್ದ ಹಣನೆಲ್ಲಾ white mony ಮಾಡಿಕಂಬಕೋಸ್ಕರ ಲಾಟರಿಲಿ ಬಹುಮಾನ ಬಂದಿತ್. ಅಂವ ಸುಳ್ಳು ಹೇಳ್ಸ್, ಇಲ್ಲರೆ ನನ್ನ ಊರುಲಿ ಇದ್ದಲಕ್ಷಾಂತರ ರೂಪಾಯಿ ಆಸ್ತಿನ ಮಾರಾಟಮಾಡಿ ಇಷ್ಟ್ ಹಣ ನನ್ನ ಹತ್ರ ಬಾತ್ ತಾ ಸುಳ್ಳು ಸುಳ್ಳು ದಾಖಲೆಗಳ ಸೃಷ್ಟಿ ಮಾಡಿವೆ ಇವುಕೆಲ್ಲಾ ತಾವು ಸಂಪಾಧನೆ ಮಾಡ್ದ ಹಣನ ತನ್ನ ಹತ್ರ ಮಡಿಗಿಕಂಬಕೆ ಜಾಗಮನೇ ಇರ್ದುಲೆ. ಹಂಗಾಗಿ ಇವು ಯಾರ್‍ಯಾರೋ ಹೆಸ್ರ್‌ಲಿ, ಆಸ್ತಿನ ತಕಂಬೋದು, ಬೇರೆ ಬೇರೆ ಹೆಸ್ರ್‌ಲಿ ಬ್ಯಾಂಕ್‌ಲಿ ಹಣನ ಡಿಪಾಜಿಟ್ ಮಡ್ಡುದೆಲ್ಲಾ ಮಾಡಿವೆ. ಇಂತವಕೆ ನಾನ್ ಈಗ ಮಾಡ್ದಂಗೆ ಬೇರೆ ಯಾರು ಮಾಡಿರೆನೂ ಬೇಜಾರು ಪಟ್ಟುಕಂಬೋದು ಬೇಕಾಗಿಲ್ಲೆತಾ ತನ್ನಲ್ಲೇ ತೀರ್ಮಾನ ಮಾಡಿಕಂಡ್ ಸಮಾಧಾನ ಪಟ್ಟ್‌ಕಂಡತ್.

ಅಷ್ಟೊತ್ತಿಗೆ ಟೇಬಲ್ ಮೇಲೆ ಒಂದ್ ಕುಪ್ಪಿ ಸಾಸ್ ತುಂಬಾ ಫ್ರೂಟ್ ಸಲಾಡ್‌ದ್ ಕಪ್ಪ್ ಬಂದ್ ಕುದ್ದತ್. ಹಂಗೆ ಅದರ ತಿಂದ್‌ಕಂಡ್ ಸಾಕ್ ಇನ್ ನಾನ್ ನನ್ನ ಚಾಲೆಂಜಿಂಗ್ ಕೆಲ್ಸಗಳಿಗೆ ಬ್ರೇಕ್ ಹಾಕೋಕು ಗೇನ ಮಾಡಿಕಂಡತ್. Mr.ರಾಜು ಇನ್ನೂ ಒಂದ್ ಸರ್ತಿ ಜೋಬೊಳಗಿದ್ದ 25,000ಸಾವಿರ ರೂಪಾಯಿ ಮೇಲೆ ಬೆರಳ್‌ಂದ ಸವರಿ ನೋಡಿಕಂಡ್ ಖುಷಿಲಿ ಅಲ್ಲಿಂದ ನೆಟ್ಟಂಗೆ ತನ್ನ ಲಾಡ್ಜ್ ಕಡೆಗೆ ಹೊರಟತ್.

---

ದುರಂಕಾರ, ಅಹಂಕಾರ ಬಾಂಬ್‌ಗಿಂತ ಭೀಕರ.

---

# ಜೇನು ಬೇಟೆ (ಸತ್ಯ ಕತೆ)

ಮಳೆ ಬಂದರೆ ಸಾಕ್ ಜೇನು ಕುರುಬರಿಗೆ ಅಂತೂ ಜೇನು ಬೇಟೆಯಾಡುದು ಒಂದ್ ಹುಚ್ಚು. ಕೆಲಸ ಮಾಡಿಕೆ ಮಾತ್ರ ಬಾರಿಕಳ್ಳರ್. ಸುಳ್ಳು ಮಾತ್ರ ಅವರಿಂದಲೇ ಹುಟ್ಟಿದ್‌ತಾ ನನ್ನ ಅನಿಸಿಕೆ. ಬಾಯಿ ತೆಗ್ದರೆ ಸುಳ್ಳು, ನಮ್ಮಲ್ಲಿ ಎರಡ್ ಕುರುಬರ್ ಇದ್ದೋ ಅವರ ಹೆಸರ್ ಹನುಮ ಮತ್ತು ಹೊನ್ನ. ಹನುಮ ಸ್ವಲ್ಪ ಮಟ್ಟಿಗೆ ಕೆಲಸ ಮಾಡಿರೆ ಹೊನ್ನ ಮರ ಹತ್ತಿಕೆ ಮಾತ್ರ ನಿಸ್ಸಿಮ. ಹೀಂಗೆ ಇರ್‌ಕನ ಆಟೀ ತಿಂಗಳಲ್ಲಿ ನಾಟಿ ಕೆಲಸಕ್ಕೆ ಇವು ಎರಡ್ ಜನ 15ದಿನದ ಮಟ್ಟಿಗೆ ನಮ್ಮಲ್ಲಿ ಕೆಲಸಕ್ಕೆ ಇದ್ದೋ.

ಒಂದು ದಿನ ಆಟಿ ತೀಂಗ್ಳಲ್ಲಿ ಅವ್ವ ಆಟೀ ಸೊಪ್ಪುದ್ ಪಾಯಸ ಮಾಡ್ತ್. ಆದರೆ ಏನ್ ಮಾಡೋದೊ ಪಾಯಸ ತಿಂಬೋಕೆ ಆದರೂ ಮದ್ದಿಗಾದರ್ ಜೇನ್ ಬೇಡ? ಒಂದು ಚೂರ್ ಜೇನ್ ಇಲ್ಲೆದಾತ್‌ತ್ತ ಅವ್ವ ಹೇಳಿಕೆ ಸುರುಮಾಡ್‌ತ್. "ಅಲ್ಲ ಹೊನ್ನ ಎಲ್ಲಾರ್ ಜೇನ್ ಸಿಕ್ಕಿರೇ ತಕ್ಕೊಂಡ್ ಬಾ" ಹೊನ್ನ ನಿಂಗೆ ಕಳ್ಳ್‌ಗೆ ದುಡ್ಡು ಕೊಟ್ಟನೇ ತಾ ಅವ್ವಾ ಹೇಳ್ತ್. "ಆತ್ ಅಮ್ಮಾ" ಒಳಗೆ ಹೋಗಿ ಆಟೀ ಪಾಯಸ ತಂದ್ ಹನುಮಂಗೆ ಮತ್ತೆ ಹೊನ್ನಂಗೆ ಇಕ್ಕಿ ಒಳಗೆ ಹೋಕಾನ ಒಂದು ಜೇನು ನೊಣ ಅವನ ಸುತ್ತು, ಸುತ್ತ್, ಸುತ್ತುತಿತ್ತ್. ಹೊನ್ನ ಪಾಯಸನ ಮಡಗಿತ್ ಜೇನು ನೊಣ ಹೋದ ಕಡೆಗೆ ಹೋತ್ ಇದನ್ನ ಕಂಡ ಹನುಮನು ಕೂಡ ಅವನ ಹಿಂದೆ ಹೊರಟತ್. ಇಬ್ಬರ್ ಸೇರಿ ಜೇನು ಇರುವ ಜಾಗ ಪತ್ತೆ ಮಾಡಿ ಜೇನು ತಂದಾತ್, ಪಾಯಸಕ್ಕೆ ಜೇನ್ ರೆಡಿ. ಅವ್ವಂಗೆ ಕುಸಿಯಾತ್ ಅಲ್ಲನ್ನ ಹೊನ್ನ, ಹನುಮ, ನಾಟಿ ಕೆಲಸ ಮುಗ್‌ದ ಮೇಲೆ ಎಲ್ಲಾರ್ ಇಷ್ಟ್ ಜೇನ್ ಹುಡುಕಿಕೊಂಡ್ ಬನ್ನಿ, ಬೆಂಗಳೂರಿಲ್ಲಿ ಇರುವ ಮಗಳಿಗೆ ಜೇನು ಸಿಕ್ಕುದೇ ಇಲ್ಲೇ ಮದ್ದಿಗೆ ಸಹ ಜೇನ್ ಇಲ್ಲೆದಾತ್‌ತ್ತಾ. "ಆತ್ ಅಮ್ಮ" ನಾಟಿ ಕೆಲಸ ಮುಗಿದ ಹೊನ್ನ ಹನುಮ ಜೇನ್ ಬೇಟೆಗೆ ಹೊರಟೋ, ಕಾಡಾನೆ ಹುಲಿ, ಕಪಿ, ಎಂತಹ ಪ್ರಾಣಿಗ ಬಂದರೂ ಸಹ ಅವು ಹೆದರದೆ ಹೋದವೇ. ಮತ್ತೆ ಮರ ಹತ್ತಿಕೆ ಮಾತ್ರ ಕಪಿಗ ಹತ್ತಿದಂಗೆ ಹತ್ತಿ ಬುಟ್ಟವೇ ಬಹಳ ನಿಸ್ಸಿಮರ್.

ಅಂದ್ ಜೋರಾಗಿ ಮಳೆ ಬಾತ್, ಜಿಗಣೆ ಕಾಟಬೇರೆ, ಸಿಕ್ಕಿದ ಜೇನ್ ತಿಂದ್‌ಕಂಡ್ ಮರದ ಮೇಲೆ ಒಂದು ದಿನ ರಾತ್ರಿ ಕಳದೋ. ಮಾರನೇ ದಿನ ಪುನಃ ಜೇನ್ ಬೇಟೆಗೆ ಹೋರೋಟೋ ಎರಡ್ ದಿನ ಅದರ್ ಜೇನ್ ಸಿಕ್ಕಿತ್ತಿಲ್ಲೆ. ಅದೇ ದಾರಿಲಿ ಆನೆ ಬರುವ ಸದ್ದ್ ಕೇಳಿ ಹನುಮ ಮತ್ತು ಹೊನ್ನ ಒಂದು ಹೊಳೆ ಹತ್ತಿರ ಇರುವ ಮರ ಹತ್ತಿ ಕುಳಿತ್‌ಕೊಂಡೊ. ದೂರಲ್ಲಿ ಆನೆ ನೀರ್ ಕುಡಿಯೊಕೊ ಬರೊದನ್ನ ನೋಡಿಕಂಡ್ ಕುದ್ದೋ. ಅವಿಬ್ಬರ್ ಕುದ್ದ ಮರದ ಒಂದು ದೊಡ್ಡ ಕೊಂಬೆ ಹೊಳೆ ಕಡೆಗೆ ಬಾಗಿತ್ತ್ ಅದರಲ್ಲಿ ಕುದ್ದ್‌ಕಂಡ್ ಹೊಳೆಕಡೆಗೆ ನೋಡ್‌ಕನ ಆ ಹೊಳೆಯಲ್ಲಿ ದೊಡ್ಡ ಜೇನ್ ಇರುದ್ದ್ ಕಂಡತ್ತ್. "ಹೊನ್ನ, ಹನುಮನ ಏನಾನಾ ಮಾಡೊದೋ ಅತ್ತ ನೋಡ್ ಜೇನ್ ಹೀಂಗೆ ಬಟ್ಟ್ ಕೈತೋರಿಸುತ್ತಾ, ಇಬ್ಬರಿಗೂ ಈಜಿಕೆ ಬಾದುಲ್ಲೆ.

"ಹೊನ್ನ ನಂಗೆ ಒಂದು ಪ್ಲಾನ್ ಹೊಳ್‌ತ್"

"ಏನಾ ಅದ್ ನಿನ್ನ ಸೊಂಟಕ್ಕೆ ದೊಡ್ಡ ಕಲ್ಲು ಕಟ್ಟನೇ ಬೇಗಾ ಜೇನಾ ತತ್ತಾ"

"ಆತ್ ಹನುಮನ ಸೊಂಟಕ್ಕೆ ಕಲ್ಲ್ ಕಟ್ಟಿ ಹೊಳೆಲ್ಲಿ ಜೇನ್ ಇರುವ ಕಡೆಗೆ ಹಾರ್‌ತ್.

ಹೊನ್ನ ಮರದ ಮೇಲೆ ಕುದ್ದು ಕಂಡ್ ಹನುಮ ಬರೋದನ್ನು ನೋಡಿಕೆ ಸುರ್ ಮಾಡದ್, ಇನ್ನ್ ಅವ ಬಾತ್‌ಲ್ಲೆ ಯಾಕೊ ಆದರೆ ಹನುಮ ಬರದೆ ಇರ್‌ಕನ (ಅವನ ಕಸ) ನೀರಲ್ಲಿ ತೇಲ್‌ತಿತ್ತ್, ಅದನ ಕಂಡ ಹೊನ್ನ ಏ ಹನುಮ "ಜೇನ್ ನೀನ್ ತಿಂದ್ ಹಿಪ್ಪೆ ಮೇಲೆ ಬಿಡ್‌ತೊಳ" ನಾನ್ ಸಹ ಬನ್ನೆತ್ತಾ ಹೇಳಿ ಹೊನ್ನ ಸೊಂಟಕ್ಕೆ ಕಲ್ಲ್‌ಕಟ್ಟಿಕಂಡ್ ಹೊಳೆಗೆ ಹಾರ್‌ತ್. ಅವರಿಬ್ಬರ ಜೇನ್ ಬೇಟೆ ಅಲ್ಲಿಗೆ ಮುಕ್ತ್. ಅವಿಬ್ಬರ್ ಕುದ್ದ್‌ಕಂಡ್ ಇದ್ದ ಕೊಂಬೆ ಕೆಳಗೆ ದೊಡ್ಡ ಜೇನ್ ನೇತಾಡ್‌ತ್ತಿತ್ತ್ ಇದನ್ನ ಕಾಣದ ಹನುಮ ಮತ್ತು ಹೊನ್ನ ನೀರಿಗೆ ಹಾರಿ ಪಾತಳ ಲೋಕ ಸೇರಿದೋ.

— ಆಜಡ್ಕ ರಾಣಿ ಬಾಲಕೃಷ್ಣ, ಕುಶಾಲನಗರ.

---

## ಪಲಾಯನ

ಸಂಸಾರಕ್ಕೆ ಬೇಸತ್ತು......!
ಬುದ್ಧನಂತೆ
ಮಧ್ಯರಾತ್ರಿ ಸದ್ದಿಲ್ಲದೆ
ಎದ್ದೋಡುವ ಆಸೆ......!

ವ್ಯಂಗ್ಯವಾಗಿ ನಕ್ಕು......!
ಸುಮ್ಮನಾಯಿತು ಮಂತ್ರ ಹೇಳಿಸಿ
ಸಪ್ತಪದಿ ತುಳಿಸಿ ಅಗ್ನಿಸಾಕ್ಷಿಯಾಗಿ
ತಾಳಿ ಕಟ್ಟಿಸಿದ ಹಸೆ......!

ಬುದ್ಧ ಎದ್ದಿದ್ದು
ಲೋಕ ಕಲ್ಯಾಣಕ್ಕೆ
ಅಜ್ಞಾನದ ಅಕ್ಷಿ ತೆರೆಸಿ
ಪ್ರಜ್ಞೆ ಬರಿಸಲಿಕ್ಕೆ.....ಕ್ಕೆ

ನೀ......!
ಎದ್ದೋಡುವುದು
ಯಾವ ಪುರುಷಾರ್ಥಕ್ಕೆ?
ಒತ್ತು ಕೊಡುವುದಷ್ಟೇ.....

ಪಲಾಯನ ನಾದಕ್ಕೆ......!

ಬಾರಿಕೆ ಕನು, ಭಾಗಮಂಡಲ.

---

*To Realize the value of 1 Milli Second, ask a Person who has Missed the gold medal in Olympics*

# ಪತ್ರ ವಿಭಾಗ

570012

## ಕಲ್ಯಾಣ ಮಂಟಪಗಳಲ್ಲಿ ವ್ಯವಸ್ಥೆ ಅವಶ್ಯ

ಕೊಡಗಿನ ಹಲವು ಪಟ್ಟಣಗಳಲ್ಲಿ ಗೌಡ ಕಲ್ಯಾಣ ಮಂಟಪಗಳು ಸ್ಥಾಪಿಸಲ್ಪಟ್ಟಿವೆ. ಸಾರ್ವಜನಿಕರಿಗೆ ಶುಭ ಸಮಾರಂಭಗಳನ್ನು ನಡೆಸಲು ಪದಾಧಿಕಾರಿಗಳು ಸಾಕಷ್ಟು ಸೌಲಭ್ಯಗಳನ್ನು ಒದಗಿಸಿದ್ದಾರೆ.

ಶುಭಕಾರ್ಯಗಳನ್ನು ನಡೆಯಿಸಲು ಜನರು ದೂರದೂರದಿಂದ ಬರುತ್ತಾರೆ. ಆರ್ಥಿಕ ಸ್ಥಿತಿಯಿಂದ ಅಥವಾ ಇತರ ಅನಾನುಕೂಲತೆಯಿಂದ ಪ್ರತಿಯೊಬ್ಬರಿಗೆ ಶಾಸ್ತ್ರ ಕ್ರಮಗಳಿಗೆ ಬೇಕಾಗುವ ಎಲ್ಲಾ ವಸ್ತುಗಳನ್ನು ತಮ್ಮೊಡನೆ ತರಲು ಸಾಧ್ಯವಾಗುವುದಿಲ್ಲ.

ಹಿಂದಿನಿಂದಲೂ ನಡೆದು ಬಂದ ಶಾಸ್ತ್ರ ಸಂಪ್ರದಾಯಗಳನ್ನು ನಾವು ಮುಂದುವರಿಸಬೇಕು. "ಹೇಗಾದರೂ ಸುಧಾರಣೆ ಮಾಡೋಣ" ಎಂದು (ಪ್ರೋತ್ಸುರ್ತ) ಸುಧಾರಿಸಿ ಶುಭಕಾರ್ಯಗಳನ್ನು ಮುಗಿಸಬಾರದು.

ಆದುದರಿಂದ ಈ ಕೆಳಗೆ ಕಾಣಿಸಿರುವ ವಸ್ತ್ರಾಭರಣಗಳನ್ನು ಪ್ರತಿ ಸಮಾಜವು ಒದಗಿಸಬೇಕೆಂದು ನನ್ನ ಕೋರಿಕೆ. ಕುಲದೇವರ ಫೋಟೋ, ಹಸೆ ಬರೆಯುವ ಬೋರ್ಡು, ಕಾಸ್ತಾಳಿ, ದೀಪಗಳು, ಮಣೆ, ಮುಕ್ಕಾಲು, ಚಾಪೆಗಳು, ಚಿಕ್ಕ ಸ್ಟೂಲು, ಹರಿವಾಣ, ಟ್ರೇ, ಚೊಂಬು, ಕೊಂಬಿನ ಮಿಳ್ಳಿ, ಆರತಿ ತಟ್ಟೆಗಳು, ಬಿಳಿಕೋಟು, ರುಮಾಲು, ಕೆಂಪು ಶಾಲು, ಡಾಬು ಇತ್ಯಾದಿಗಳ ಇದಕ್ಕೆ ತಕ್ಕಬಾಡಿಗೆ ತೆಗೆದುಕೊಳ್ಳಬಹುದು.

25ಸೆಟ್ ಬಿಳಿಕೋಟು, ರುಮಾಲು, ಕುಪ್ಪಸದಟ್ಟಿ, ಇಟ್ಟಲ್ಲಿ ಯುವಕರಿಗೂ ಹಿರಿ ಕಿರಿಯರಿಗೂ ಉಡುಪುನಲ್ಲಿ ಮೆರೆಯಬಹುದು. ದೂರದಿಂದ ತರುವುದು ಸಹ ತೊಂದರೆ.

ಶುಚಿತ್ವ ಮುಖ್ಯ. ನಾನು ಕೆಲವೆಡೆ ನೋಡಿದ ಸಮಾಜಗಳಲ್ಲಿ ದನ ಕರುಗಳು ಆವರಣದೊಳಗೆ ಪ್ರವೇಶಿಸಿ ವಾತಾರವರಣ ಅಸಹ್ಯವಾಗಿ ಕಾಣುತ್ತಿತ್ತು. ವಿದ್ಯುಚ್ಛಕ್ತಿ ಬೆಳಕು ಸರಿದೂಗಿರಬೇಕು.

ತಮ್ಮ ವಿಶ್ವಾಸಿ
ಪೂಜಾರಿರ ಪೂವಯ್ಯ, ಬೆಂಗಳೂರು.

---

ಮಾನ್ಯರೇ,

## ಸಂತೋಷ ಕೂಟ.

ಗೌಡ ಜನಾಂಗದವರ ಸಂತೋಷ ಕೂಟವಂತೆ!ನಾಳೆ ನಾಡಿದ್ದರಲ್ಲಿ ನಿಮ್ಮ ಮನೆಕಡೆ ಜನರು ಬರಬಹುದು. ಔದ! ಒಂದು ವಿಷಯದಲ್ಲಿ ಒಳ್ಳೆದೇ ಆಯಿತು. ನಾನು ಸಂತೆಗೆ ಹೋದಾಗ ನನ್ನ ಗೆಳತಿ, ಅಲ್ಲ ಅಕ್ಕ ಪೆಬ್ರುವರಿಯಲ್ಲಿ ಸಂತೋಷ ಕೂಟಂತ ಹೇಳುವೆ, ಸರಿ ಗೊತ್ತುಲ್ಲೆ, ಅದೊಂದು ರೀತಿಲಿ ಕುಶಾಲನಗರದಲ್ಲಿ ಗೌಡ ಜನಾಂಗದವು ಎಲ್ಲೆಲ್ಲೂ ಯಾವ ಯಾವ ಕಡೆ, ಓಳೊತ ಗೊತ್ತಾದೆ, ಬುಡಿ. ಅಲ್ಲ ಅಕ್ಕ ಅಜ್ಜಿಕ ಅಂತೂ ನಮ್ಮವುತಾ ಹೇಳಿರೆ ಸಾಕ್, ಅಜ್ಜಿ ಅಜ್ಜಿಕ ಸೇರಿ ಕಂಡ್ ಕಷ್ಟಸುಖ ಹಂಚಿಕಂಡ್, ನಮ್ಮ ಕಾಲಲಿ ಹಿಂಗೇ ಇತ್ತ್‌ಲ್ಲೆ ತ್ತಾ ಹೇಳಿಕಂಡ್ ಕುಷಿ ಪಟ್ಟವೆ. ಮತ್ತೆ ಪರಿಚಯ ಮಾಡಿಕಂಡವೆ ನೀ ಯಾರ ಮನೆ ಅಕ್ಕ, ಎಲ್ಲಿ ಮನೆ? ಎಷ್ಟು ಮಕ್ಕ? ಏನ್ ಕೆಲಸ ಕಾಫಿ ತೋಟ ಉಟ್ಟ, ಅಲ್ಲ ಅಲ್ಲಿ ಉಟ್ಟಲ್ಲಾ ಆ ಗೂಡೆ ಯಾರ್, ಆ ಹೈದ ಯಾರ್, ಯಾರ ಮನೆ ಹೈದ ಬಾರಿ ಹುಷಾರ್ ಉಟ್ಸ್ತಾ ಹೇಳಿಕಂಡ್ ತಲೆ ಚಿಟ್ಟ್ ಹಿಡಿಸಿ ಬುಟ್ಟವೆ ಈಗಿನ ಗೂಡೆ ಹೈದಗಳಿಗೆ ಈ ತರದ ಮಾತ್ ಕತೆಗ ಹಿಡಿಸುದುಲ್ಲೆ. ಎಲ್ಲಾ ತರಹದ ವಿಷಯ, ವಿಚಾರ ವಿನಿಮಯಕ್ಕೆ ಸಂತೋಷದ ಕೂಟ ಒಂದು ರೀತಿಲಿ ಸಂತೋಷವೇ. ಆದರೆ? ಅಲ್ಲ ರತ್ನ ನಿಂಗೆ ಸಂತೋಷ ಕೂಟದ್ ಆಹ್ವಾನ ಪತ್ರಿಕೆ ಸಿಕ್ಕಿತಾ. "ಪೇಟೆಯಲ್ಲಿ ಕಂಡಾಗ" ನಂಗೆ ಸಿಕ್ತ್ ಅಕ್ಕ ನಿಮಗೆ ಇನ್ನ್ ಸಿಕ್ತ್‌ತ್ ಇಲ್ಲೆತಾ? ಸಿಕ್ಕುದು ಅಕ್ಕಾ, ಯಾಕೆ ಹೇಳಿರೆ ನೀವು family ಜಾಹಿರಾತು ಕೊಟ್ಟೋಳರಿ ಅಂದರೆ ಸಿಕ್ಕಿದೇ ಬುಡಿ ಅಕ್ಕ. ಹೀಗೆ ಈ ಸಂದರ್ಭವೇ ಜನರ ಪರಿಚಯಕ್ಕೆ ಮಾರ್ಗ ಮತ್ತು ಹಿರಿಯರಿಗೆ ಸನ್ಮಾನ ಮಕ್ಕಳ ಪ್ರತಿಭೆಯನ್ನು ರೂಪಿಸಿಕೊಳ್ಳಲು ಸಿಕ್ಕುವ ಅವಕಾಶಗಳು ಹಾಗೂ ಸ್ನೇಹ ಈ ಸಂದರ್ಭವೇ ಸಂತೋಷ ಕೂಟವೆಂದು ಹೇಳಬಹುದು. ಆದರೆ ಈ ಸಂದರ್ಭದ ಅನುಕೂಲಕ್ಕೆಂದೇ ಕೆಲವು ಸಂಘಗಳು ಮುಖ್ಯ. ಇಂತಹ ಸಂಘಗಳು ಹುಟ್ಟಿಕುತಾದರೆ ಮೊದಲು ದೇವರ ಕೃಪೆ ಮತ್ತು ಹಿರಿಯರ ಹಿತವಚನಗಳು ಇವುಗಳನ್ನು ಅನುಸರಿಸಿ ಈಗಿನ ಯುವಕರು ಮುಂದೆ ಬಂದು ಶ್ರದ್ಧೆ ಮತ್ತು ಶಿಸ್ತುನಿಂದ ಕಾರ್ಯ ನಿರ್ವಾಹಣೆ ಮಾಡುವುದು ಮುಖ್ಯ. ನಾನು ಒಂದು ಸಲ ಕಂಡ ಜನರನ್ನು ಇನ್ನೊಂದು ಸಲಕಂಡಾಗ ನಾವು ನಮ್ಮ ಪರಿಚಯದವರನ್ನು ಮರೆಯಬಾರದು. ಒಂದು ದಿನದ ಕೂಟಕ್ಕೆ ನಾವು ಯಾಕೆ? ಶ್ರಮ ಪಡಬೇಕು? ಎಂಬ ಕೀಳರಿಮೆಯನ್ನು ಬಿಡಬೇಕು. ನಾವೆಲ್ಲ ಒಂದೇ ಒಂದೇ ಜನಾಂಗದವರಂತೆ ಅಕ್ಕ, ತಂಗಿ, ಅಣ್ಣ, ತಮ್ಮ, ತಂದೆ ತಾಯಿ, ಮತ್ತು ಹಿರಿಯರಿಗೆ ಶಿಸ್ತಿನ ಗೌರವ ಕೊಡಬೇಕು" ಇದರಲ್ಲಿ ಗೌಡಜನಾಂಗದ ಏಳಿಗೆಗೆ" ನಾವು ಏನು ಮಾಡಿದ್ದೇವೆ ಎಂಬುವುದು ಮುಖ್ಯವಾಗುವುದು. ಯುವಕರು ಪಣತೊಟ್ಟು ಕಾರ್ಯಕಲಾಪಗಳನ್ನು ನಿರ್ವಹಿಸಬೇಕು. ಉದಾ: 'ನಮಸ್ಕಾರ" ನಮಸ್ಕಾರ ಎಂಬುವುದು ಎರಡುಕೈ ಜೋಡಿಸಿ ಹಿರಿಯರಿಗೋ ಅಥವಾ ದೇವರಿಗೋ ವಿನಯ ಪೂರ್ವಕವಾಗಿ ಮಾಡಿದರೆ ನಮಸ್ಕಾರಕ್ಕೆ ಒಂದು ಅರ್ಥಬರುವುದು. ಬಲಕೈ ಎತ್ತಿ ನಮಸ್ಕಾರ ಹೇಳಿದರೆ ಅದು ಈಗಿನ ಕಾಲಕ್ಕೆ ಹಾಯ್ ... ಬಾಯ್... Ta..Ta.. ಹಲೋ ... ಇಂತಹವುಕ್ಕೆ ಅನ್ವಯವಾಗುತ್ತದೆ. ಅದು ಒಂದು ತರಹದ ಸಂತೋಷದ ಮಿಲನದ ಸಂಕೇತ. ನಮಸ್ಕಾರ ವಿನಯ ಪೂರ್ವಕವಾಗಿ ತಮ್ಮ ಮನದ ಅಳಲನ್ನು ಸ್ಪಂದಿಸುವ ಹಾಗೂ ನಾವು ಹಿರಿಯರಿಗೆ ಗೌರವ ಕೊಡುವ ಸಂಕೇತವಾಗುತ್ತದೆ. ಅಲ್ಲದೇ ಮುಖ್ಯವಾಗಿ ಗೌಡಜನರಲ್ಲಿ ಹಿರಿಯರನ್ನು ಕಾಲುಮುಟ್ಟಿ ನಮಸ್ಕರಿಸುವುದು ವಾಡಿಕೆ, ಅದನ್ನು ನಾವು ಅನುಸರಿಸ ಬೇಕು."ಕಾರ್ಯ ಸಿದ್ದಿಯಾಗ ಬೇಕಾದರೆ ಕಾಲು ಹಿಡಿದಂತೆ" ಯಾಗಬಾರದು. ಕಾರ್ಯ ಆದಮೇಲೆ ನೀವು ಯಾರೋ? ನಾವು ಯಾರೋ? ಜನರೇ ಗೊತ್ತಿಲ್ಲದೇ ಹೀಗೆ ಯಾದರೆ ಜನರ ಮನಸಲ್ಲಿ ಬೇಸರ ತುಂಬಿ ವೈಮನಸ್ಸು

ಉಂಟಾಗಬಹುದು. ಇಂತಹ ಘಟನೆಗಳಿಗೆ ಆಸ್ಪದ ಕೊಡದ ಹಾಗೆ ಸಂಘಸಂಸ್ಥೆಗಳು ಅನುಸರಿಸಬೇಕಾಗುವುದು. ಇಂತಹ ಸಂದರ್ಭಕ್ಕೆ ಜನರು ಪರಿಚಯಕ್ಕೆ ಮತ್ತು ಸ್ನೇಹಕ್ಕೆ ಹಾತೊರೆಯುತ್ತಾರೆ. ಅಂತಹ ಸಂದರ್ಭ ಒದಗಿ ಬಂದಿಲ್ಲವೆಂದು ನನಗೆ ತುಂಬಾ ಬೇಸರ ತರುವಂತಹದು. ಅಂದರೆ ಸಂದರ್ಭನನ್ನು ಕಳೆದುಕೊಂಡ ಜನರು ಎಷ್ಟು ಜನರಿದ್ದಾರೋ? ಏನೋ? ಅವರು ಯಾರಲ್ಲಿ ಹೇಳಿಕೊಳ್ಳಲು ಸಾಧ್ಯ? ಇಂತಹ ವಿಶಯಗಳು. ಸಂಘಗಳ ಅಧ್ಯಕ್ಷರ ಗಮನಕ್ಕೆ ಬರಲಿ. ಇನ್ನು ಮುಂದೆಯಾದರು ಇಂತಹ ಗೌಡಜನಾಂಗದ ಕೂಟದ ಸಂದರ್ಭವನ್ನು ಕಳೆದುಕೊಳ್ಳುವ ಅವಕಾಶ ಮಾಡಿಕೊಡಬೇಡಿ. ಸಂತೋಷ ಕೂಟದಲ್ಲಿ ಕಂಡ ಜನರ ಪರಿಚಯ ಇನ್ನು ಎಲ್ಲೋ ಕಂಡ ನೀವುಯಾರೋ ನಾವುಯಾರೋ ಹಾಗಾಗಬಾರದು. ಪರಿಚಯ ಉಳಿಯಬೇಕಾದ ಇಂತಹ ಸಂತೋಷಕೂಟವೇ ಮುಖ್ಯ. ಮರೆಯದಿರಿ.

ಹಿತೈಷಿ. — ಆಜಡ್ಕ ರಾಣಿ ಬಾಲಕೃಷ್ಣ. ಕುಶಾಲನಗರ.

---

ಮಾನ್ಯರೇ,

ಭಿನ್ನ - ಭೇದ

ನನ್ನ ನೆಚ್ಚಿನ ಕೊಡಗು ಸಂಗಾತಿಗೆ, ಒಬ್ಬ ಗೌಡ ಜನಾಂಗದ ಪತ್ರಿಕೆಯ ಅಭಿಮಾನಿ ಬರದ್ ಮಾಡೋ ನಮಸ್ಕಾರ.

ನಮ್ಮ ಗೌಡ ಜನಾಂಗದವ್ರ ಕೊಡಗುಸಂಗಾತಿ ಪತ್ರಿಕೆ ಶುರು ಆದಂದಿತ್ತ ಮತ್ತೆ ಅಮ್ಮಾಜೀರ ಪೊನ್ನಪ್ಪನವರ ಶ್ರಮಂದ ಗೌಡ ಸಂಸ್ಕೃತಿ ಸ್ವಲ್ಪ ಮಟ್ಟಿಗೆ ಮದುವೆ ಸಮಾರಂಭಲಿ ಬರ್‍ತ್ತಾ ಉಟ್ಟು. ಆದರೆ ಎಲ್ಲೆಲ್ಲೂ ನಡ್ಸ್ತಾ ಇಲ್ಲೆ. ಆದರೆ ನಮ್ಮ ಅರೆಭಾಷೆ ಮೇಲೆ ಮಾತ್ರ ಯಾವ ಪ್ರಭಾವ ಬೀರ್‍ದಂಗೆ ಕಾಣ್‍ತ್ತಾ ಇಲ್ಲೆ. ಯಾಕೆತೇಳ್‍ರೆ ಈಗೀಗ ಹಳ್ಳೀಲಿನ ಗೌಡ ಜನಾಂಗದವು ಅರೆಭಾಷೆ ಗೊತ್ತಿದ್ದರೂ ಸ ನಮ್ಮವರೊಟ್ಟಿಗೆ ಕನ್ನಡ ಮಾತಾಡ್ದು ಕಾಣುತ್ತಾ ಉಟ್ಟು. ಅದ್ ತುಂಬಾ ಬೇಸರದ ಸಂಗತಿ. ಹಳಬರ್ ಅಂತೂ ಕನ್ನಡ ಮಾತಾಡ್‍ತ್ತಾ ಇದ್ದವ್ರ ನಮ್ಮ ಜನಾಂಗದವರೊಟ್ಟಿಗೆ ಅರೆಭಾಷೆ ಮಾತಾಡದೆ ಕನ್ನಡ ಮಾತಾಡುವೆ. ಅದೇ ಬೇರೆ ಜನಾಂಗದವರೊಟ್ಟಿಗೆ ಅವರ ಮಾತೃ ಭಾಷೆಲಿ ಮಾತಾಡುವೆ. ಅರೆಭಾಷೆ ಮೇಲೆ ಏನ್ ಅವುಕೆ ಅಷ್ಟ್ ಹಗನ? ಅಥವಾ ನಮ್ಮ ಅರೆಭಾಷೆ ಅಷ್ಟ್ ಕಷ್ಟನಾ. ಇನ್ನ್ ಕೆಲವ್ರ ಎಂತ ಹೇಳುವೆತೇಳ್‍ರೆ. ಕೊಡಗು ಸಂಗಾತಿ ಸಂಪಾದಕರೇ ಅರೆಭಾಷೆ ಮಾತಾಡುಲೆತ. ಅವ್ರ ಈಗ ಪತ್ರಿಕೆಲಿ ಮಾತ್ರ ಜೋರಾಗಿ ಪ್ರಕಟಿಸಿಬುಟ್ಟೆವೆತ ಹೇಳ್‍ತಾಒಳೊ ಹಂಗಾಗಿ ನೀವು ಸನ ಸ್ವಲ್ಪ ಅರೆಭಾಷೆ ಕಡೆಗೆ ಹೆಚ್ಚು ಒತ್ತು ಕೊಡಕುತ ನನ್ನ ವಿನಂತಿ.

ಮತ್ತೆ ಇನ್ನೊಂದು ವಿಷಯ ನೀವ್ರ ಪತ್ರಿಕೆಲಿ ಕೆಲವ್ರ ಪ್ರಕಟಣೆ ಜೋಕ್ಸ್. ಎಂತದು ಎಲ್ಲ ಪ್ರಕಟಿಸಿರೆ ಅವರ ಪೂರ್ತ ಮನೆ ಹೆಸರ್ ಅಡಕ ಬರೆಯಕು. ಎಲ್ಲವರ್‍ದ್ ಮನೆ ಹೆಸರ್ ಪ್ರಕಟಿಸ್‍ತ್ತಾ ಇಲ್ಲೆ. ಕಾರಣ ಏನ್? ನೀವ್ ಭಿನ್ನ ಬೇದ ತೋರ್‍ಸಿದಂಗೆ ಕಂಡದೆ. ಮತ್ತೊಂದು ವಿಷಯ "ಕೊಡಗು ಸಂಗಾತಿ" ಚಿಹ್ನೆ ಬಿಳಿ ಕಲರ್‍ಲಿ ಪ್ರಿಂಟ್ ಮಾಡ್ಸಕುತ ಕೇಳಿಕಣಿಕೆ. ಬಿಳಿಕಲರ್ ತುಂಬಾ ಎದ್ದು ಕಂಡದೆ. ನೀಲಿ ಕೆಂಪು ಕಲರ್ ಅಷ್ಟ್ ಲಾಯಿಕಾಗಿ ಕಾಂಬಲೆ

ಇದರ ಮುಂದಿನ ಸಂಚಿಕೆಲಿ ಪ್ಕಟಿಸೊಕುತಾ ಕೇಳಿಕಂಡ್ ನನ್ನ ಈ ಕಾಗದನ ಇಲ್ಲಿಗೆ ಮಕ್ತಾಯ ಮಡನೆ.

ಜೈ ಕೊಡಗು ಸಂಗಾತಿ

ಎಲ್ಲಾ ನಮ್ಮ ಜನಾಂಗರಲ್ಲ ಇನ್ನ್ ಮುಂದೆ ಅರೆಭಾಷೆಗೆ ಹೆಚ್ಚ್ ಒತ್ತು ಕೊಡಕುತ ವಿನಂತಿ

ಇತಿ

ಒಬ್ಬ ಗೌಡ ಜನಾಗಂದಂವ. ಹೆಸರ್ ಬೇಡಊರು ಬೇಡ

---

ಮಾನ್ಯರೇ,

ಜಾಸ್ತಿಗೊಳಿಸಿದೆ

ಭಾಷೆ ಮಾನವನ ಸಂಬಂಧನ ಜಾಸ್ತಿಗೊಳಿಸಿದೆ. ಸಂಸ್ಕೃತಿನ ಪ್ರತಿಬಿಂಬಿಸಿದೆ

ಅದರಲ್ಲಿಯೂ ಗೌಡ ಭಾಷೆ ಗೌಡ ಜನಾಂಗದೊಳಗೆ ತಮ್ಮ ಭಾಂದವ್ಯನ ಮತ್ತಷ್ಟು ಬೆಳ್ಸಿದೆ. ಆ ನಿಟ್ಟ್‌ಲಿ ಕೊಡಗು ಸಂಗಾತಿ ಅರೆಭಾಷಿಕ ಪಾಕ್ಷಿಕ ಮಹತ್ತರವಾದ ಕಾರ್ಯ ನಿರ್ವಹಿಸ್‍ತ್ತಾ ಉಟ್ಟು. ಇದೊಂದು ತುಂಬಾ ಹೆಮ್ಮೆಯ ಹಾಗೂ ಸಾಧನೆಯ ಸಂಗತಿ. ಈ ಕೊಡಗು ಸಂಗಾತಿನ ಮೂಲಕ ಹೊಸ ಗೌಡ ಪ್ರತಿಭೆಗ ಬೆಳಕಿಗೆ ಬರುತ್ತುಟ್ಟು. ಎಲ್ಲಾ ಗೌಡ ಜನಾಂಗದವರ ಪ್ರೋತ್ಸಾಹ ಇದಿಕ್ಕೆ ಸಿಕ್ಕಲಿ. ಹಳೇಬೇರು ಹೊಸ ಚಿಗುರು ಎಂಬ ಹಾಂಗೆ ನಮ್ಮ ಜನಾಂಗದ ಸಂಸ್ಕೃತಿ, ಭಾಷೆ, ಕಲೆ, ಸಾಹಿತ್ಯ ಎಲ್ಲವುಕ್ಕೂ ಪರಿಚಯಿಸಲಿ. ಈ ಕೊಡಗು ಸಂಗಾತಿಗೆ ಹೊಸ ವರ್ಷದ ಯುಗಾದಿಯ ಶುಭಾಶಯಗಳೊಂದಿಗೆ ಇದ್ ಇನ್ನೂ

ವತ್ತರಕ್ಕೆ ಏರಲಿ ಅಂತ ನಾವು ಹಾರೈಸುವೆ.

— ಕು. ಪ್ರವೀಣಾ ಕಾನತ್ತಿಲ, ಸುಳ್ಯ.

---

ಮಾನ್ಯರೆ,

ಹವ್ಯಕ ಬ್ರಾಹ್ಮಣ

ಈ ಪತ್ರದೊಟ್ಟಿಗೆ ಎರಡು ವರ್ಷದ ಚಂದಾಹಣನ (150+150+ Postal +25) ಹಂಗೆ Out station cheqe elearence Charge ಸೇರಿದಂಗೆ ನನ್ನ ಮೊತ್ತದ (325/-) ಚೆಕ್ಕು ಕಳಿಸೋಳೆ. ನಾನ್ ದಕ್ಷಿಣ ಕನ್ನಡ ಜಿಲ್ಲೆ ಭಟ್ರು. ಆದ್ರೂ ಅರೆಭಾಷೆ ಮ್ಯಾಲೆ ಅಭಿಮಾನ ಉಟ್ಟು. ಹಾಂಗಾಗಿ ಚಂದಾ ಕಳ್ಸಿನೆ. ನೀವು ಹಿಂಗೆಲ್ಲಾ ಆರ್ಥಿಕ ಸ್ಥಿತಿ ಚೆನ್ನಾಗಿಲ್ಲೆತ್ತೇಳಿ ಟಾಂ... ಟಾಂ... ಮಾಡಿಕ್ಕೆ ಬತ್ತ್. ಪತ್ರಿಕೆ ಲಾಯಕ್ಕುಟ್ಟು. ಹಿಂಗೆಯೇ ಕಳಿಸುತ್ತಾ ಇರಿ.

ನೀವು ಡೆಲ್ಲಿಂದ ಬರ್ರು ಕನ್ನಡವಾರ್ತೆ ಕೇಳಿದ್ದಲ್ಲಿ ನನ್ನ ಧ್ವನಿಯನ್ನು ಕೇಳಿರಬಹುದು.

ಪತ್ರಿಕೆ ಚೆನ್ನಾಗಿದೆ. ನಿರಂತರವಾಗಿ ಕಳಿಸಿ. ಹವ್ಯಕ ಬ್ರಾಹ್ಮಣ ನಾಗಿದ್ದರೂ, ಕೇವಲ ನಮ್ಮ ಸಂಸ್ಕೃತಿಯ ಪೋಷಣೆಯಾಗಲಿ ಎಂಬ ಉದ್ದೇಶದಿಂದ ಚೆಂದಾ ಕಳಿಸುತ್ತಿದ್ದೇನೆ. ಧನ್ಯವಾದಗಳೊಂದಿಗೆ,

ಎ. ವಿ. ಚಿತ್ತರಂಜನ್‍ದಾಸ್,
ಶುಭ ನುಡಿ ಪತ್ರಿಕೆ, ದೆಹಲಿ.

---

ಮಾನ್ಯರೇ,

## ಮರ್ಯಾದೆ ಉಳಿಸಿ

ಇತ್ತೀಚೆಗೆ ಎಲ್ಲಾ ದಿನ ಪತ್ರಿಕೆಯಲ್ಲಿ ಮತ್ತು ವಾರಪತ್ರಿಕೆಯಲ್ಲಿ ಕೊಡಗಿನ ಗೌಡರ ಅರೆಭಾಷೆ ಮತ್ತು ಅರೆಗೌಡ ಎಂದು ನಂ. 10ನೇ ಫಾರಂನಲ್ಲಿ ನಮೂದಿಸಬೇಕೆಂದು ಕೊಡಗುಗೌಡ ಸಮಾಜದ ಮಹನೀಯರ ಸಂಘ ಮತ್ತು ಮಹಿಳಾ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಅವರ ಹೇಳಿಕೆಗಳನ್ನು ನೋಡಿ ನಾವು ಗೌಡರಾಗಿ ಹುಟ್ಟಿದ್ದು ವ್ಯರ್ಥವೆಂದೇ ಕಾಣಿಸುತ್ತಿದೆ. ಈ ಪ್ರಪಂಚದಲ್ಲಿ ಅರೆ ಭಾಷೆ ಮತ್ತು ಅರೆ ಗೌಡ ಎಲ್ಲಿಯಾದರೂ ಇದೆಯೇ ಒಂದೇ ಭಾಷೆಯನ್ನು ನೂರಾರು ರೀತಿಯಲ್ಲಿ ಮಾತನಾಡುವ ಜನಾಂಗವಿದೆ ಅಷ್ಟೆ. ಅದಕ್ಕೆ ಅರ್ಧವೆಂದು ಅರ್ಥವೆ ಕನ್ನಡದಲ್ಲಿಯೂ ಜಿಲ್ಲೆಗೆ ಒಂದೊಂದು ರೀತಿಯಲ್ಲಿ ಜನಾಂಗ ಮಾತನಾಡುವವರಿದ್ದಾರೆ. ಹಾಗೆಂದು ಯಾರೂ ಅರ್ಧವೆಂದು ಉಚ್ಛಾರಿಸುತ್ತಿಲ್ಲ. ಉದಾಹರಣೆಗೆ ತೆಲುಗಿನಲ್ಲಿ ರೆಡ್ಡಿ, ತಮಿಳ್‌ಗೌಂಡರ್, ಮಲೆಯಾಳದಲ್ಲಿ ನಾಯರ್ ಕೊಡವರಲ್ಲಿಯೂ ಸಹ ಅರ್ಧಭಾಷೆ ಮಾತನಾಡುವ ಕೊಡವರೂ ಇದ್ದಾರೆ. ಅದೇ ರೀತಿಯ ಹಲವಾರು ಜನಾಂಗದಲ್ಲಿಯೂ ಅರ್ಧ ಭಾಷೆ ಇದ್ದೇ ಇದೆ. ಆದರೆ ಅವರ್ಯಾರೂ ಅರೆ ಭಾಷಿಕರೆಂದು ಹೇಳಿಕೊಂಡಿಲ್ಲ. ಕೊಡಗಿನ ಗೌಡಜನಾಂಗದವರು ಒಂದು ಸಾವಿರ ವರ್ಷಗಳ ಹಿಂದೆಗೆ ಹೋಗುತ್ತಿದ್ದೇವೆ. ಇದರ ಜೊತೆಯಲ್ಲಿ ನನ್ನನ್ನೂ ನಾವು ಗೌಡಜನಾಂಗ ಯಾವ ಭಾಷಿಕರೆಂದು ಕೇಳಿದರೆ ತುಳುನಾಡಿನ ಹಳೇ ಕನ್ನಡಿಗರೆಂದೇ ಉಚ್ಛರಿಸಬೇಕಾಗಿದೆ. ನಾನು ಅದನ್ನೇ ಉಚ್ಚರಿಸುತ್ತೇನೆ. ಇದರಿಂದ ಗೌಡ ಸಮಾಜದವರು ನನ್ನನ್ನು ದೂರ ಇರಿಸಬಹುದು?ಇನ್ನು ಕೆಲವಾರು ವರ್ಷಗಳು ಕಳೆದ ಮೇಲೆ ನಾನು ಏನು ಉಚ್ಚರಿದ್ದೇನೂ ಅದು ಸರಿ ಎಂದು ಹೇಳುವ ದಿವಸಗಳು ಇದೆ.

ಇನ್ನಾದರೂ ಪರಜನರಿಂದ ಹಿಯಾಳಿಸಿಕೊಳ್ಳದೆ ತನ್ನ ತನದ ಜನಾಂಗದ ಮರ್ಯಾದೆಯನ್ನು ಉಳಿಸಿ.

ಕುದುಕುಳಿ ಟಿ. ಸುಬ್ಬಯ್ಯ
ಸೂರ್ಯ ಪವರ್ ಪ್ರೆಸ್, ಕುಶಾಲನಗರ

* * *

ವಿ. ಸೂ.: ವಿಮರ್ಷಾತ್ಮಕ ಬರಹಗಳಿಗೆ ಸ್ವಾಗತವಿದೆ. ಬರಹ ಒಂದು ಪುಟಕ್ಕೆ ಸೀಮಿತವಿರಲಿ.

ಸಂಪಾದಕಿ.

---

**ಚುಟುಕು : ಫುಟ್ ಬೋಡ್**

ತೂಗಾಡಿಕಂಡ್ ಬಸ್‌ಲಿ
ಹೋಕಾಕನ
ಆದೇನ್ ಶೋಕಿ
ಬಿದ್ದ್ ಸಾಯಕನ
ಆದೇನ್ ಶೋಕ.

---

ಮಾನ್ಯರೆ,

## ಕೊಂಡು ಓದುವ ಹವ್ಯಾಸ ಕಮ್ಮಿ

ನೀವು ಪತ್ರಿಕೆಯಲ್ಲಿ ಪದೇ ಪದೇ ಪ್ರಕಟಿಸುತ್ತಿರುವ ವಿನಂತಿಯಿಂದ ನಿಮ್ಮ ಪತ್ರಿಕೋದ್ಯಮದ ಸಾಹಸದ ಸಂಕಷ್ಟಗಳು ಅರ್ಥವಾಗುತ್ತದೆ. ಇದು ಈ ರಂಗದಲ್ಲಿ ಸಹಜವೆ.

ನಮ್ಮ ಜನರಲ್ಲಿ ಪತ್ರಿಕೆ ಪುಸ್ತಕ ಕೊಂಡು ಓದುವ, ಪುಸ್ತಕ ಭಂಡಾರದಲ್ಲಿ ಸಂಗ್ರಹಿಸುವ ಹವ್ಯಾಸದ ಕೊರತೆ ಮೂಲ ಕಾರಣ. "ಕೊಡಗು ಸಂಗಾತಿ"ಯ ಬಗ್ಗೆ ಈಗಲೂ ಸಹ ದ. ಕ. ಜಿಲ್ಲೆಗಳಲ್ಲಿ ಅನೇಕ ಗೌಡ ಬಂಧುಗಳಿಗೆ ತಿಳಿದಂತಿಲ್ಲ.

ಅದಕ್ಕಾಗಿ ಈಗ ಮಾಡುತ್ತಿರುವ ಮಾಮೂಲು ಪ್ರಚಾರದೊಂದಿಗೆ ಗೌಡ ಸಭೆ ಸಮಾರಂಭಗಳಲ್ಲಿ ನೀವು ಯಾ ಪ್ರತಿನಿಧಿಗಳು ಹಾಜರಿದ್ದು 'ಪತ್ರಿಕೆ ಪ್ರದರ್ಶನ, ಮಾರಾಟದ ವ್ಯವಸ್ಥೆಯೊಂದಿಗೆ ಜನರಲ್ಲಿ ವಿನಂತಿಸಿಕೊಂಡಲ್ಲಿ ಪರಿಸ್ಥಿತಿ ಸುಧಾರಿಸಲು ಸಹಾಯವಾದೀತೆಂದು ಅನಿಸುತ್ತದೆ. ಸ್ಥಳೀಯರ ಸಹಕಾರವನ್ನು ನಿರೀಕ್ಷಿಸಬಹುದಾಗಿದೆ.

ಇತಿ ನಮಸ್ಕಾರಗಳು

* * *

ವಿ. ಸೂ.: ಈ ನಿಮ್ಮ ಹೇಳಿಕೆಯ ಅಂಶಗಳನ್ನೆಲ್ಲಾ ಪ್ರಯತ್ನಿಸಿದ್ದು ಆಗಿದೆ. ಆದರೆ ಸಾಹಿತ್ಯ ಜ್ಞಾನ ಕಮ್ಮಿ ಇರುವ ತನಕ ಜನರಿಗೆ ಏನು ಹೇಳಿದರು ಪ್ರಯೋಜನವಿಲ್ಲ ಮೇಲೆ ಮಳೆ ಹೊಯ್ದಂಗೆ, ಸಂಘಸಂಸ್ಥೆಗಳು, ಸಮಾಜಗಳು ಈ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಬೇಕಾಗಿದೆ.

ಸಂಗಾತಿ.

---

# ಅಭಿಪ್ರಾಯ ಒಂದೊಂದು ತರ - 7

ಜನ ಹೇಳುವ ಮಾತ್‌ನ ಕೇಳಿಕಂಡ್ ಅದ್ನ ಕೆಮಿ ಕೊಟ್ಟ್ ಕೇಳಿ ಅವರ ಮ್ಯಾಲೆ ನಡಿಯವು ಖಂಡಿತಾ ಅಪಾಯಕ್ಕೆ ಬಿದ್ದವೆ. ಜನರ ದೃಷ್ಟಿ ಅಭಿಪ್ರಾಯಗ ತರಾವರಿ ಇದ್ದವೆ. ಘನತೆ, ಗೌರವ, ಜ್ಞಾನ, ಮಾನ ಒಬ್ಬೊಬ್ಬರದ್ ಒಂದೊಂದ್ ತರ. ಮನ್ಸ್ ತನ್ನ ಹುಟ್ಟಿನ ಸಂಸ್ಕಾರ, ತನ್ನ ಮನ್ಸ್‌ರ ಮಟ್ಟಕ್ಕೆ ಅವ ಪ್ರತಿಯೊಂದಕ್ಕೂ ಬೆಲೆ ಕಟ್ಟಿದೆ. ಜಿಪುಣಂಗೆ ಹಣ ಕೂಡುದು ದೊಡ್ಡದ್. ಕಳ್ಳಂಗೆ ಕಳ್ಳತನ ಮಾಡ್ದೆ ಸ್ವರ್ಗ. ಅದೇ ಅವಂಗೆ ಕಲೆ. ಒಳ್ಳೆಯ ಬಟ್ಟೆ ಹಾಕುವವನ ಗೌರವಸ್ಥ ತೇಳ್ದುಲೆಯಾ ? ಹಣ ಇರುವವನ, ಅಧಿಕಾರವುಳ್ಳವನ ಜನ ಪೂಜನೀಯ ತೇಳುವೆ. ಒಬ್ಬೊಬ್ಬರ ಅಭಿಪ್ರಾಯ ಒಂದೊಂದು ಮಟ್ಟ, ಒಂದೊಂದು ರೀತಿ. ಅಭಿಪ್ರಾಯ ಹೇಳ್ದು ವಿಚಿತ್ರ ರೀತಿ. ಯಾವುದೇ ಅಭಿಪ್ರಾಯ ಇರಲಿ ಅದ್ನ ಅಳ್ದ್ ಪರೀಕ್ಷೆ ಮಾಡಿ ಒಳ್ಳ ಅಭಿಪ್ರಾಯ ಒಳ್ಳೆದಾಗುವ ಅಭಿಪ್ರಾಯನ ಮಾತ್ರ ತಕಣಕು.

ಕೊಡವ ಭಾಷೆಲಿ : ಚೇಂದ್ರಿಮಾಡ ಮುತ್ತಪ್ಪ
ಅರೆಭಾಷೆಗೆ : ಪಟ್ಟಡ ಪ್ರಭಾಕರ.

---

## ಶುಭಹಾರೈಕೆ

**5ನೇ ವರ್ಷಕ್ಕೆ ಸರಾಗವಾಗಿ ಮುಂದುವರಿದ ಕೊಡಗು ಸಂಗಾತಿ ಪತ್ರಿಕೆಗೆ ನಮ್ಮೆಲ್ಲರ ಶುಭಾಶಯಗಳು.**

ತಮ್ಮ ಈ ಅಪ್ರತಿಮ ಧೈರ್ಯ, ಸಾಹಸದ ಪ್ರಯತ್ನಕ್ಕೆ ತಮ್ಮೆಲ್ಲರ ತನು, ಮನ, ಧನ, ಪ್ರೋತ್ಸಾಹ, ಆಶೀರ್ವಾದ ದೈವಕೃಪೆ ಇದೆ. ಹಾಗೂ ಹಲವಾರು ಅಡೆ ತಡೆಗಳನ್ನು ನಿರಂತರವಾಗಿ ದಾಟಿ 5ನೇ ವರ್ಷಕ್ಕೆ ಹೊರ ಹೊಮ್ಮಿ ಜನಾಂಗದ ಸಂಘಟನೆಗೆ ನಾಂದಿಯಾದ ನಿಮಗೆ ಕುಲದೇವರ ಮತ್ತು ಶೃಂಗೇರಿ ತಾಯಿಯ ಹಾಗೂ ಕಾಲಕಂಡ ಹಿರಿಯರ ಕೃಪಕಟಾಕ್ಷೆ ಸದಾ ಇರಲೆಂದು ಹಾರೈಸುತ್ತೇವೆ.

ಅಧ್ಯಕ್ಷರು : ಪಟ್ಟಡ ಗಣಪತಿ, ಕಾರ್ಯದರ್ಶಿ : ಪಟ್ಟಡ ಉಲ್ಲಾಸ ಮತ್ತು ಕಾರ್ಯಕಾರಿ ಸಮಿತಿ, ಪಟ್ಟಡ ಕುಟುಂಬಸ್ಥರ ಜೀರ್ಣೋದ್ಧಾರ ಸಂಘ, ಅವಂದೂರು, ಮಡಿಕೇರಿ ತಾಲ್ಲೂಕು.

---

**ದಿ|| ಪನ್ನೇಟಿ ದೇವಯ್ಯ**



## ಚಿರಸ್ಮರಣೆ

ನೀವು ಭೌತಿಕ ಶರೀರವನ್ನು ತ್ಯಜಿಸಿದರು ಸದಾ ನಿಮ್ಮ ನೆನಪುಗಳು ನಿಮ್ಮ ಒಡನಾಟದ ಸುಂದರ ಕ್ಷಣಗಳು ನಮ್ಮ ಕಣ್ಣಮುಂದೆ ಆಗಾಗ ಬರುತ್ತಲಿದೆ. ನೀವು ತೋರಿಸಿ ಕೊಟ್ಟಮಾರ್ಗದರ್ಶನವು ನಮಗೆಲ್ಲರಿಗೂ ಆದರ್ಶಮಯವಾಗಿದೆ. ನಿಮ್ಮ ಆತ್ಮಕ್ಕೆ ಯಾವತ್ತೂ ಚಿರಶಾಂತಿ ಆ ಭಗವಂತನು ನೀಡಲೆಂದು ಪ್ರಾರ್ಥಿಸುವೆವು.

ಪತ್ನಿ : ನೀಲಮ್ಮ,

ಮಕ್ಕಳು, ಸೊಸೆಯಂದಿರು,
ಅಳಿಯಂದಿರು ಮತ್ತು ಮೊಮ್ಮಕ್ಕಳು

ವಿಳಾಸ : ಮರಡಿಯೂರು ಗ್ರಾಮ,
ಕೊಪ್ಪ (ವಯ) ಕುಶಾಲನಗರ

ಜನನ : 19-8-1920 ಮರಣ : 12-4-2000

---

**ದಿ|| ಸೆಟ್ಟೆಜನ ಸುಬ್ಬಯ್ಯ**



## ಚಿರಸ್ಮರಣೆ

ನೀವು ನಮ್ಮನ್ನಗ್ಗಿ ಏಳು ವರ್ಷ ಆತ್. ನಿಮ್ಮ ಪ್ರೀತಿಯ ನೆನಪು ನಮ್ಮೆಲ್ಲರ ಹೃದಯಲಿ ಹಚ್ಚಹಸಿರಾಗಿಟ್ಟು. ನೀವು ತೋರಿಸಿ ಕೊಟ್ಟ ಮಾರ್ಗದರ್ಶನವೇ ನಮಗೆ ದಾರಿ ದೀಪವಾಗಿಟ್ಟು. ನಿಮ್ಮ ದಿವ್ಯಾತ್ಮಕ್ಕೆ ಆ ಭಗವಂತ ಅನುದಿನವು ಚಿರಶಾಂತಿ ನೀಡಲೆಂದು ಪ್ರಾರ್ಥಿಸುವೆ.

ಹೆಂಣ್ : ಅಕ್ಕಮ್ಮ
ಮಗಳ್‌ಂದಿರ್ : ಕುಲ್ಲಚನ - ತಾರ ರವಿ
ಬೈತಡ್ಕ ಲೀಲಾ ಜಗದೀಶ್ ಮತ್ತೆ ಪ್ರಮೀಳ, ಶಶಿ, ಹೇಮಾ,
ಮೊಮ್ಮಗ - ತುಷಿತ್, ಜಗದೀಶ್.

ಮರಣ : 29-4-1994

---

**ದಿ|| ಪಟ್ಟಡ ಗಂಗಮ್ಮ**



## ಒಂದನೇ ವರ್ಷದ ಪುಣ್ಯ ಸ್ಮರಣೆ

ನೀವು ನಮ್ಮನ್ನಗಲಿ ಒಂದು ವರ್ಷ ಕಳೆದರೂ ನಿನ್ನ ಸವಿನೆನಪು ನಮ್ಮಲ್ಲಿ ಹಚ್ಚಹಸುರಾಗಿ ಉಳಿದಿದೆ. ನಿನ್ನ ಆದರ್ಶ ಗುಣಗಳು, ನಮಗಾಗಿ ದುಡಿದ ನಿಶ್ವಾರ್ಥ ನೆನಪುಗಳು ಆಗಾಗ ನೆನಪಿನಲ್ಲಿ ಬರುತ್ತಿದೆ. ನಿನ್ನ ಆತ್ಮಕ್ಕೆ ಆ ಭಗವಂತನು ಸದಾ ಶಾಂತಿ ನೀಡಲೆಂದು ನಾವುಗಳೆಲ್ಲರೂ ದಿನ ನಿತ್ಯ ದೇವರಲ್ಲಿ ಪ್ರಾರ್ಥಿಸುತ್ತೇವೆ.

ಪತಿ : ಗಣಪತಿ, ಮಕ್ಕಳು, ಮೊಮಕ್ಕಳು, ಅಳಿಯಂದಿರು, ಸೊಸೆಯಂದಿರು.
ಪ್ರಕಟಣೆ : ಬಿಟ್ರ ಲಲಿತಾ ರಾಘವಯ್ಯ (ಮಗಳು) ಜಿಲ್ಲಾ ಪರಿಷತ್, ಮಡಿಕೇರಿ
☎ : 23059 ಮತ್ತು ಮಕ್ಕಳಾದ ರೇಷ್ಮಾ, ದೀಪಕ್

ಜನನ : 28-12-1934
ಮರಣ : 13-4-2000

Reg. No. KA/SK/MYS-88 Registered : 10-01-96 TCI Kar. 09592

# ಅಮರ ಕ್ರಾಂತಿ ಉತ್ಸವ ಸಮಿತಿ

ಸುಳ್ಯ, ದಕ್ಷಿಣ ಕನ್ನಡ - 574 239

1837ರಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿ ಹುತಾತ್ಮರಾದ
ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳ ಸ್ವಾತಂತ್ರ್ಯ ಹೋರಾಟಗಾರರ

## ಸಂಸ್ಮರಣೋತ್ಸವ

ದಿನಾಂಕ : **5-4-2001ರ ಗುರುವಾರ** ಸ್ಥಳ : ಲಯನ್ಸ್ ಸೇವಾ ಸದನ, ಸುಳ್ಯ

ಸಮಯ : ಪೂರ್ವಾಹ್ನ ಗಂಟೆ **10-00ಕ್ಕೆ**

ಅಧ್ಯಕ್ಷತೆ : **ಶ್ರೀ ಬಿ. ರಮಾನಾಥ ರೈ,** ದ. ಕ. ಜಿಲ್ಲಾ ಉಸ್ತುವಾರಿ ಸಚಿವರು, ಬಂದರು ಮತ್ತು ಮೀನುಗಾರಿಕಾ ಸಚಿವರು, ಕರ್ನಾಟಕ ಸರಕಾರ

ಸಂಸ್ಮರಣೆ : **ಶ್ರೀ ಎಂ.ವೀರಪ್ಪ ಮೊಯಿಲಿ,** ಪ್ರಸಿದ್ಧ ಕಾದಂಬರಿಕಾರರು, ಮಾಜಿ ಮುಖ್ಯ ಮಂತ್ರಿಗಳು ಮತ್ತು ಅಧ್ಯಕ್ಷರು, ತೆರಿಗೆ ಸುಧಾರಣಾ ಆಯೋಗ, ಕರ್ನಾಟಕ ಸರಕಾರ

ಕ್ರಾಂತಿಜ್ಯೋತಿ-ಕ್ರಾಂತಿಧ್ವಜ ಮೆರವಣಿಗೆ ಉದ್ಘಾಟನೆ : **ಶ್ರೀ ಡಿ. ವಿ. ಸದಾನಂದಗೌಡ,** ವಿಧಾನಸಭಾ ವಿರೋಧ ಪಕ್ಷದ ಉಪನಾಯಕರು, ಕರ್ನಾಟಕ ಸರಕಾರ

ಮುಖ್ಯ ಅತಿಥಿಗಳು : **ಶ್ರೀ ಎಸ್. ಅಂಗಾರ,** ಶಾಸಕರು, ಸುಳ್ಯ ವಿಧಾನಸಭಾ ಕ್ಷೇತ್ರ
**ಶ್ರೀ ಅಣ್ಣಾ ವಿನಯಚಂದ್ರ,** ವಿಧಾನ ಪರಿಷತ್ ಸದಸ್ಯರು

ದಯವಿಟ್ಟು ಬನ್ನಿ, ಒಟ್ಟಾಗಿ ಹುತಾತ್ಮರನ್ನು ಗೌರವಿಸೋಣ

| ಜನಾರ್ಧನ ಕಣಕ್ಕೂರು | ಕುಕ್ಕೆಟ್ಟಿ ಮಾಧವ ಗೌಡ | ಎನ್. ಎಸ್. ದೇವಿಪ್ರಸಾದ್ | ಮತ್ತು ಸರ್ವಸದಸ್ಯರು |
|---|---|---|---|
| ಪ್ರಧಾನ ಕಾರ್ಯದರ್ಶಿ | ಕೋಶಾಧಿಕಾರಿ | ಅಧ್ಯಕ್ಷರು | ಅಮರ ಕ್ರಾಂತಿ ಉತ್ಸವ ಸಮಿತಿ ಸುಳ್ಯ |

## KODAGU EDUCATIONAL ACADEMY (REGD.), BANGALORE

Admn. Office : Kodagu Gowda Samaja, No. 413, Cauvery Nagar, R. T. Nagar Post, Bangalore - 32

### WANTED

Experienced, trained teachers for Nursery & Primary classes a new School **"CAUVERY NATIONAL PUBLIC SCHOOL"** (An institution of Kodagu Educational Academy) No. 413, Cauvery Nagar, Kavalbyrasandra, R. T. Nagar Post, Bangalore, commencing from the Academic year June 2001. Interested candidates may send their Resume with full details, to **the General Secretary, Sri. M. C. Ravi Kumar, No. 156/1B, 1st Floor, R. V. Road, Minerva Circle, Bangalore - 4, ☎ : Off. 6525323, Res. : 6664183 E-mail : mottanna_ravi@vahoo.com**

For Correspondence :

**General Secretary, M. C. Ravi Kuamr, No. 156/1B, R. V. Road, V. V. Puram, Bangalore - 4**

| President | Vice President | Gen. Secretary | Joint Secretary | Joint Secretary |
|---|---|---|---|---|
| Dr. Guddera P. Chinnaiah | Mrs. Vasanthi | Mottana C. Ravi Kuamr | Ketoli Yatish Kumar | KaleyandraU Machaiah |

**Kodagu Sangathi** Kannada Fortnightly Edited, Published, Printed & Owned by Pattada P. Sheelamani, No. 35, Savitha Nilaya, I Cross, 4th Block, **Jayalaxmipuram, Mysore - 12.** And **SANGATHI** Office ✆ : **0821/516771.** And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ✆ : 0821/431792.